
# ಸಮಾಜಶಾಸ್ತ್ರ

1187

ಎಂಪಿಪಿ

# ಸ್ನಾತಕೋತ್ತರ ತರಬೇತಿ ಕಾರ್ಯಕ್ರಮ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ, ಮೈಸೂರು - 570 006

## ಬ್ಲಾಕ್ - 1 : ಸಾಮಾನ್ಯ ಸಮಾಜಶಾಸ್ತ್ರ

ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸುವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

**ರಾಷ್ಟ್ರೀಯ ಶಿಕ್ಷಣ ನೀತಿ 1986**

ಮುಕ್ತ ವಿಶ್ವವಿದ್ಯಾನಿಲಯವು ದೂರಶಿಕ್ಷಣ ಪದ್ಧತಿಯಲ್ಲಿ ಬಹುಮಾಧ್ಯಮಗಳನ್ನು ಉಪಯೋಗಿಸುತ್ತದೆ.

.................................... ವಿದ್ಯಾಕಾಂಕ್ಷಿಗಳನ್ನು ಜ್ಞಾನ ಸಂಪಾದನೆಗಾಗಿ ಕಲಿಕಾ ಕೇಂದ್ರಕ್ಕೆ ಕೊಂಡೊಯ್ಯುವ ಬದಲು, ಜ್ಞಾನ ಸಂಪತನ್ನು ವಿದ್ಯೆ ಕಲಿಯುವವರ ಬಳಿ ಕೊಂಡೊಯ್ಯುವ ವಾಹಕವಾಗಿದೆ.

**ಡಾ|| ಕುಳಂದೈಸ್ವಾಮಿ**

*The Open University system has been initiated in order to augment opportunities for higher education and as an instrument of democratising education.*

***National Education Policy 1986***

*"The Open University system makes use of Multimedia in distance educate system. .................................... It is a vehicle which transports knowledge to the place of learners rather than transport people to the place of learning.*

***Dr. Kulandai Swamy***

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು-570 006

# ಸಮಾಜಶಾಸ್ತ್ರ

## ಎಂ.ಪಿ.ಪಿ ಪತ್ರಸೇತು

ಸ್ನಾತಕೋತ್ತರ
ತರಬೇತಿ
ಕಾರ್ಯಕ್ರಮ

ಬ್ಲಾಕ್ (ನಿಯತಾಂಕ)

# 1

## ಸಾಮಾನ್ಯ ಸಮಾಜಶಾಸ್ತ್ರ

ಘಟಕ -1
ಸಮಾಜಶಾಸ್ತ್ರ ಪರಿಚಯ 1—20

ಘಟಕ -2
ಪ್ರಾಥಮಿಕ ಕಲ್ಪನೆಗಳು 21—32

ಘಟಕ -3
ಸಾಮಾಜಿಕ ಪ್ರಕ್ರಿಯೆಗಳು 33—52

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

ಡಾ. ಎಸ್.ಎಸ್. ರಾಮೇಗೌಡ
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಪ್ರೊ. ಚಂಬಿ ಪುರಾಣಿಕ್
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡಾ. ಆರ್.ಎನ್. ಹಾದಿಮನಿ
ಸಮಾಜಶಾಸ್ತ್ರ ಪ್ರಾಧ್ಯಾಪಕರು — ಸಂಪಾದಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು -6

ಡಾ. ಸತ್ಯನಾರಾಯಣ
ನಿವೃತ್ತ ಸಮಾಜಶಾಸ್ತ್ರ ಪ್ರಾಧ್ಯಾಪಕರು — ಸಂಪಾದಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು -6

ಎನ್. ದೊಡ್ಡಸಿದ್ದಯ್ಯ
ಮುಖ್ಯಸ್ಥರು — ವಿಷಯ ಸಂಯೋಜಕರು
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು -6

## ಪಠ್ಯಕ್ರಮ ನಿರೂಪಕರು — ಬ್ಲಾಕ್ (ನಿಯತಾಂಕ) — 1

ಟಿ. ನಾಗರಾಜು — ಘಟಕ 1
ಸಮಾಜಶಾಸ್ತ್ರ ಪ್ರವಾಚಕ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು-6

ಎನ್. ದೊಡ್ಡಸಿದ್ದಯ್ಯ — ಘಟಕ 2
ಸಮಾಜಶಾಸ್ತ್ರ ಉಪನ್ಯಾಸಕ (ಆಯ್ಕೆಶ್ರೇಣಿ)
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು-6

ಎಂ.ಎಚ್. ಕೃಷ್ಣಪ್ಪ — ಘಟಕ 3
ಸಮಾಜಶಾಸ್ತ್ರ ಉಪನ್ಯಾಸಕ (ಆಯ್ಕೆ ಶ್ರೇಣಿ)
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು-6

## ಮುದ್ರಕರು ಮತ್ತು ಪ್ರಕಾಶಕರು

ಶ್ರೀ ವಿ. ರಾಮಣ್ಣ
ಕುಲಸಚಿವ (ಆಡಳಿತ)

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.**
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 2003**

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಕೋರ್ಸು (ಪಠ್ಯಕ್ರಮ) ಗಳ ಬಗ್ಗೆ ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸಗಂಗೋತ್ರಿ, ಮೈಸೂರು-6 ಇಲ್ಲಿಂದ ಪಡೆಯಬಹುದು.

# ಸ್ನಾತಕೋತ್ತರ ತರಬೇತಿ ಕಾರ್ಯಕ್ರಮ

## ಪಠ್ಯಸೇತು : ಪರಿಚಯ

*ಪ್ರಿಯ ವಿದ್ಯಾರ್ಥಿ,*

ಸಮಾಜಶಾಸ್ತ್ರ ವಿಭಾಗದ ಬೋಧಕ ವರ್ಗದ ಪರವಾಗಿ ನಾನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜಶಾಸ್ತ್ರ ಪದವಿ ಕಾರ್ಯಕ್ರಮಕ್ಕೆ ದಾರಿ ಮಾಡಿಕೊಡುವ ಎರಡು ವರ್ಷಗಳ ಸ್ನಾತಕೋತ್ತರ ತರಗತಿಗೆ ತಮ್ಮನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇನೆ. ಪ್ರಿಯೂನಿವರ್ಸಿಟಿ ಮತ್ತು ಪದವಿ ತರಗತಿಗಳಲ್ಲಿ ಸಮಾಜಶಾಸ್ತ್ರ ಪಠ್ಯಕ್ರಮ ವಿಷಯಗಳಲ್ಲಿ ನೀವು ಶೈಕ್ಷಣಿಕ ತರಬೇತಿ ಹಾಗೂ ಜ್ಞಾನವನ್ನು ಹೊಂದದೇ ಇರುವುದರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸ್ನಾತಕೋತ್ತರ ತರಗತಿಯನ್ನು ಪೂರ್ಣ ಆಸಕ್ತಿಯಿಂದ ತೆಗೆದುಕೊಳ್ಳುವುದಕ್ಕೆ ನಿಮ್ಮನ್ನು ತಯಾರು ಮಾಡಲು ಹಾಗೂ ನಿಮ್ಮ ಸಂವೇದನಾ ಶಕ್ತಿಯನ್ನು ಜಾಗ್ರತಗೊಳಿಸಲು ಈ ಸ್ನಾತಕೋತ್ತರ ತರಬೇತಿ ಕಾರ್ಯಕ್ರಮವನ್ನು ಪಠ್ಯಸೇತುವಾಗಿ ವಿನ್ಯಾಸಗೊಳಿಸಿದೆ. ಸ್ನಾತಕೋತ್ತರ ತರಬೇತಿ ಕಾರ್ಯಕ್ರಮವು ಒಟ್ಟು ಮೂವತ್ತು ಘಟಕಗಳು ಇರುವಂತೆ ಹತ್ತು ಬ್ಲಾಕ್(ನಿಯತಾಂಕ)ಗಳನ್ನು ಒಳಗೊಂಡಿದೆ. ಸಾಂಪ್ರದಾಯಿಕ ಪದವಿ ತರಗತಿಯಲ್ಲಿ ನೀವು ಕಳೆದುಕೊಂಡಿದ್ದನ್ನು ಮತ್ತೆ ಹಿಂದಕ್ಕೆ ಪಡೆಯುವ ಸಲುವಾಗಿ ನಿಮಗೆ ಸಹಾಯ ಮಾಡಲು ಸಮಾಜಶಾಸ್ತ್ರ ಪ್ರಾಧ್ಯಾಪಕರ ಮಾರ್ಗದರ್ಶನದಲ್ಲಿ ಸಮಾಜಶಾಸ್ತ್ರದಲ್ಲಿ ನುರಿತ ಪಠ್ಯಕ್ರಮ ನಿರೂಪಕರು ಸರಳ, ಸುಂದರ ಹಾಗೂ ಸುಲಭವಾಗಿ ಅರ್ಥವಾಗಬಲ್ಲ ಸಂವಹನಾತ್ಮಕ ಬೋಧನಾ ಸಾಮಗ್ರಿಯನ್ನು ಸಿದ್ಧಪಡಿಸಿರುತ್ತಾರೆ. ಸ್ನಾತಕೋತ್ತರ ತರಬೇತಿ ಕಾರ್ಯಕ್ರಮದ ರಚನೆಗೆ ತಕ್ಕಂತೆ ಸಂಕ್ಷಿಪ್ತ ಚರ್ಚೆಗಳಲ್ಲಿ ಯಥೋಚಿತ ದೃಷ್ಟಾಂತಗಳೊಂದಿಗೆ ಸಮಾಜಶಾಸ್ತ್ರದಲ್ಲಿ ಪ್ರಮುಖ ಪರಿಕಲ್ಪನಾತ್ಮಕ ಮತ್ತು ಸೈದ್ಧಾಂತಿಕ ವಿಷಯಗಳನ್ನು ಒಳಗೊಂಡಿರುವಂತೆ ಜಾಗರೂಕತೆ ವಹಿಸಲಾಗಿದೆ. ಹಾಗೆಯೇ, ಈ ಬಗೆಯ ಸ್ನಾತಕೋತ್ತರ ತರಬೇತಿ ಕಾರ್ಯಕ್ರಮವು ಸಮಾಜಶಾಸ್ತ್ರ ಕ್ಷೇತ್ರದ ಮಹತ್ವದ ಭಾಗವುಳ್ಳ ಪತ್ರಿಕೆಗಳನ್ನು ಒಳಗೊಳ್ಳುತ್ತದೆ. ಈ ಪತ್ರಿಕೆಗಳೆಂದರೆ, ಸಾಮಾನ್ಯ ಸಮಾಜಶಾಸ್ತ್ರ, ಭಾರತೀಯ ಸಮಾಜದ ಅಧ್ಯಯನ, ಗ್ರಾಮೀಣ - ನಗರ ಸಮುದಾಯಗಳ ಅಧ್ಯಯನ, ಸಾಮಾಜಿಕ ವಿಸಂಘಟನೆ ಮತ್ತು ಸಮಾಜಶಾಸ್ತ್ರೀಯ ಚಿಂತನೆ. ಸಮಾಜಶಾಸ್ತ್ರದಲ್ಲಿ ಪಳಗಿದ ವಿಶ್ವ ಪ್ರಖ್ಯಾತ ಚಿಂತಕರನ್ನು ಸಣ್ಣ ಪ್ರಮಾಣದಲ್ಲಿ ಪರಿಚಯಿಸಿದ್ದರೂ, ಅದು ಸಮಾಜಶಾಸ್ತ್ರ ಅಧ್ಯಯನದಲ್ಲಿ ಆಳವಾದ ತಾದಾತ್ಮವನ್ನು ಹೊಂದಲು ಆಹಾರವನ್ನು ಒದಗಿಸುವುದರಲ್ಲಿ ಉಪಯುಕ್ತವಾದುದು.

ಹಾಗೆಯೇ ಸ್ನಾತಕೋತ್ತರ ತರಬೇತಿ ಕಾರ್ಯಕ್ರಮಕ್ಕೆ ಅನುಸಾರವಾಗಿ ನಿಮ್ಮ ವ್ಯಾಸಂಗ ಮತ್ತು ಪ್ರತಿಸ್ಪಂದನಗಳು ಸ್ನಾತಕೋತ್ತರ ತರಗತಿಯನ್ನು ನೀವು ಮುಂದುವರಿಸುವ ರೀತಿಯನ್ನು ನಿರ್ಧರಿಸುತ್ತವೆ. ಸ್ನಾತಕೋತ್ತರ ತರಬೇತಿ ಕಾರ್ಯಕ್ರಮದ ಘಟಕಗಳ ಮುಖಾಂತರ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುವಂತೆ ಮತ್ತು ನಿಮ್ಮ ಪ್ರಗತಿ ಪರೀಕ್ಷೆಯ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿ ಕೊಳ್ಳುವಂತೆ ನಿಮಗೆ ಸಲಹೆ ಮಾಡುತ್ತಿದ್ದೇವೆ. ಎಂಪಿಪಿ ಘಟಕಗಳ ಆಳವಾದ ಶೋಧನೆಯ ನಂತರ ನೀವು ಪಠ್ಯಕ್ರಮದ ಅಧ್ಯಯನವನ್ನು ಒಮ್ಮೆ ಪ್ರಾರಂಭಿಸಿದರೆ, ಎಂ.ಎ. ಸಮಾಜಶಾಸ್ತ್ರ ಘಟಕಗಳ ಅಧ್ಯಯನವು ಶೈಕ್ಷಣಿಕವಾಗಿ ಕುತೂಹಲಕರವೂ ಬೌದ್ಧಿಕವಾಗಿ ಸ್ಫೂರ್ತಿದಾಯಕವೂ ಮತ್ತು ಚಿತ್ತಾಕರ್ಷಕವಾಗಿಯೂ ಇರುವುದನ್ನು ಮನಗಾಣುತ್ತೀರಿ.

ಸ್ನಾತಕೋತ್ತರ ತರಬೇತಿ ಕಾರ್ಯಕ್ರಮದ ಸಮಾಜಶಾಸ್ತ್ರ ಪಠ್ಯಕ್ರಮದ ವಿಷಯಗಳು ಈ ಕೆಳಕಂಡಂತೆ ಇವೆ.

## ಬ್ಲಾಕ್ (ನಿಯತಾಂಕ) -1 ಸಾಮಾನ್ಯ ಸಮಾಜಶಾಸ್ತ್ರ

**ಘಟಕ-1** ಸಮಾಜಶಾಸ್ತ್ರ ವ್ಯಾಖ್ಯೆ - ಸ್ವರೂಪ - ವ್ಯಾಪ್ತಿ - ಪ್ರಾಮುಖ್ಯ.

**ಘಟಕ -2** ಪ್ರಾಥಮಿಕ ಕಲ್ಪನೆಗಳು : ಪಾತ್ರ ಮತ್ತು ಅಂತಸ್ತು - ಸಾಮಾಜಿಕ ವ್ಯವಸ್ಥೆ.

**ಘಟಕ -3** ಸಾಮಾಜಿಕ ಪ್ರಕ್ರಿಯೆಗಳು : ಸಹಕಾರ - ಸ್ಪರ್ಧೆ- ಸಂಘರ್ಷ - ಸಂಯೋಜನೆ- ಸಮೀಕರಣ.

## ಬ್ಲಾಕ್ (ನಿಯತಾಂಕ) -2 ಸಾಮಾನ್ಯ ಸಮಾಜಶಾಸ್ತ್ರ

**ಘಟಕ-4** ವಿವಾಹ - ಅರ್ಥ - ವಿಧಗಳು - ಕಾರ್ಯಗಳು.
ಕುಟುಂಬ - ಅರ್ಥ - ವಿಧಗಳು - ಕಾರ್ಯಗಳು.

**ಘಟಕ-5** ಸಾಮಾಜಿಕ ಸ್ತರ ವಿನ್ಯಾಸ : ಅರ್ಥ - ವಿಧಗಳು.

**ಘಟಕ -6** ಸಾಮಾಜಿಕ ಬದಲಾವಣೆ : ವ್ಯಾಖ್ಯೆ - ಬದಲಾವಣೆಯ ಅಂಶಗಳು.

## ಬ್ಲಾಕ್ (ನಿಯತಾಂಕ) - 3 ಭಾರತೀಯ ಸಮಾಜದ ಅಧ್ಯಯನ

**ಘಟಕ -1** ವರ್ಣಾಶ್ರಮಧರ್ಮ ಮತ್ತು ಪುರುಷಾರ್ಥಗಳು.

**ಘಟಕ -2** ಹಿಂದೂ ಅವಿಭಕ್ತ ಕುಟುಂಬ - ಲಕ್ಷಣಗಳು - ಅನುಕೂಲಗಳು ಮತ್ತು ಅನಾನುಕೂಲಗಳು - ಬದಲಾಗುತ್ತಿರುವ ಪ್ರವೃತ್ತಿಗಳು.

**ಘಟಕ -3** ಜಾತಿ ವ್ಯವಸ್ಥೆ- ಅರ್ಥ - ಲಕ್ಷಣಗಳು- ಬದಲಾಗುತ್ತಿರುವ ಪ್ರವೃತ್ತಿಗಳು.

## ಬ್ಲಾಕ್ (ನಿಯತಾಂಕ) - 4 ಭಾರತೀಯ ಸಮಾಜದ ಅಧ್ಯಯನ

**ಘಟಕ -4** ಮಹಿಳಾ ಸ್ಥಾನಮಾನವನ್ನು ಸಶಕ್ತೀಕರಣಗೊಳಿಸುವಲ್ಲಿ ಶಾಸನಗಳ ಪಾತ್ರ.

**ಘಟಕ -5** ಅಲ್ಪಸಂಖ್ಯಾತ ಗುಂಪುಗಳು - ಅರ್ಥ - ವಿಧಗಳು.

**ಘಟಕ -6** ಸಾಮಾಜಿಕ ಚಲನೆ - ಅರ್ಥ - ವಿಧಗಳು - ಸಂಸ್ಕೃತೀಕರಣ - ಪಾಶ್ಚಿಮಾತ್ಯೀಕರಣ - ಆಧುನೀಕರಣ

## ಬ್ಲಾಕ್ (ನಿಯತಾಂಕ) -5 ಗ್ರಾಮೀಣ -ನಗರ ಸಮುದಾಯಗಳ ಅಧ್ಯಯನ

**ಘಟಕ -1** ಗ್ರಾಮೀಣ ಸಮಾಜಶಾಸ್ತ್ರದ ಸ್ವರೂಪ - ವ್ಯಾಪ್ತಿ - ಗ್ರಾಮೀಣ ಸಮುದಾಯದ ಲಕ್ಷಣಗಳು.

**ಘಟಕ-2** ಭಾರತದಲ್ಲಿ ಭೂ ಸುಧಾರಣೆ - ವಿಮರ್ಶಾತ್ಮಕ ಮೌಲ್ಯಮಾಪನ

**ಘಟಕ -3** ಭಾರತದಲ್ಲಿ ಪಂಚಾಯಿತಿ ರಾಜ್ಯ ವ್ಯವಸ್ಥೆ - ಪ್ರಾಚೀನತೆ - ಧ್ಯೇಯಗಳು - ರಚನೆ ಮತ್ತು ಕಾರ್ಯಗಳು - 73ನೆಯ ಸಂವಿಧಾನ ತಿದ್ದುಪಡಿ ಕಾಯಿದೆ.

## ಬ್ಲಾಕ್ (ನಿಯತಾಂಕ) -6 ಗ್ರಾಮೀಣ -ನಗರ ಸಮುದಾಯಗಳ ಅಧ್ಯಯನ

**ಘಟಕ -4** ನಗರ ಸಮಾಜಶಾಸ್ತ್ರದ ಸ್ವರೂಪ- ವ್ಯಾಪ್ತಿ- ಪ್ರಾಮುಖ್ಯ ನಗರ ಸಮುದಾಯದ ಲಕ್ಷಣಗಳು.

**ಘಟಕ -5** ನಗರ ಬೆಳವಣಿಗೆಯ ಸಿದ್ಧಾಂತಗಳು - ಕೇಂದ್ರೀಯ ವಲಯ ಮತ್ತು ಸೆಕ್ಟಾರ್ ಸಿದ್ಧಾಂತಗಳು.

**ಘಟಕ -6** ನಗರ ಸಮಸ್ಯೆಗಳು - ವಸತಿ ಕೊಳಚೆ ಪ್ರದೇಶಗಳು.

## ಬ್ಲಾಕ್(ನಿಯತಾಂಕ) -7 ಸಾಮಾಜಿಕ ವಿಸಂಘಟನೆ

**ಘಟಕ -1** ಸಾಮಾಜಿಕ ವಿಸಂಘಟನೆ - ಪರಿಕಲ್ಪನೆ - ಕಾರಣಗಳು - ಸಾಮಾಜಿಕ ವಿಸಂಘಟನೆ ಮತ್ತು ಸಾಮಾಜಿಕ ಸಮಸ್ಯೆಗಳು.

**ಘಟಕ -2** ಬಾಲಾಪರಾಧ - ಅರ್ಥ - ಕಾರಣಗಳು - ಪುನರ್‌ವಸತಿ ಕ್ರಮಗಳು.

**ಘಟಕ -3** ಅಪರಾಧ-ಅರ್ಥ - ಕಾರಣಗಳು - ಪರಿಣಾಮಗಳು.

## ಬ್ಲಾಕ್ (ನಿಯತಾಂಕ) -8 ಸಾಮಾಜಿಕ ವಿಸಂಘಟನೆ

| | |
|---|---|
| **ಘಟಕ -4** | ವೇಶ್ಯಾವೃತ್ತಿ-ವ್ಯಾಖ್ಯೆ - ಭಾರತದಲ್ಲಿ ವೇಶ್ಯಾವೃತ್ತಿಯ ಪ್ರಾಚೀನತೆ - ಕಾರಣಗಳು - ದುಷ್ಪರಿಣಾಮಗಳು. |
| **ಘಟಕ -5** | ಮದ್ಯ ವ್ಯಸನ-ಅರ್ಥ - ಕಾರಣಗಳು - ದುಷ್ಪರಿಣಾಮಗಳು. |
| **ಘಟಕ -6** | ಜನಸಂಖ್ಯಾ ಸಮಸ್ಯೆ - ಜನಸಂಖ್ಯಾ ಬಾಹುಳ್ಯದ ಕಾರಣಗಳು - ಜನಸಂಖ್ಯಾ ಬಾಹುಳ್ಯದ ದುಷ್ಪರಿಣಾಮಗಳು. |

## ಬ್ಲಾಕ್ (ನಿಯತಾಂಕ) - 9 ಸಮಾಜಶಾಸ್ತ್ರೀಯ ಚಿಂತನೆ

| | |
|---|---|
| **ಘಟಕ -1** | ಸಾಮಾಜಿಕ ಚಿಂತನೆಯ ಬೆಳವಣಿಗೆಯ ಪರಿಚಯ. |
| **ಘಟಕ -2** | ಆಗಸ್ಟ್ ಕಾಮ್ಟ್ - ಜೀವನ ಚಿತ್ರಣ - ಪ್ರಮುಖ ಕೊಡುಗೆಗಳು. |
| **ಘಟಕ -3** | ಎಮಿಲ್ ಡರ್ಖೀಮ್ - ಜೀವನ ಚಿತ್ರಣ - ಪ್ರಮುಖ ಕೊಡುಗೆಗಳು. |

## ಬ್ಲಾಕ್ (ನಿಯತಾಂಕ) -10 ಸಮಾಜಶಾಸ್ತ್ರೀಯ ಚಿಂತನೆ

| | |
|---|---|
| **ಘಟಕ -4** | ಬಸವೇಶ್ವರ - ಜೀವನ ಚಿತ್ರಣ - ಕಾಯಕ ಕಲ್ಪನೆ - ಸಾಮಾಜಿಕ ಸಮಾನತೆ. |
| **ಘಟಕ -5** | ಮೋಹನದಾಸ ಕರಮಚಂದ ಗಾಂಧಿ - ಜೀವನ ಚಿತ್ರಣ - ಸರ್ವೋದಯದ ಪರಿಕಲ್ಪನೆ. |
| **ಘಟಕ -6** | ಬಿ.ಆರ್. ಅಂಬೇಡ್ಕರ್ - ಜೀವನ ಮತ್ತು ಸಾಧನೆ - ವರ್ಣ ವ್ಯವಸ್ಥೆ ಕುರಿತ ಅವರ ವಿಚಾರಗಳು - ಜಾತಿ ವ್ಯವಸ್ಥೆ ಕುರಿತ ಅವರ ವಿಚಾರಗಳು. |

ನೀವು ವಾಸಿಸುತ್ತಿರುವ ವಿಶ್ವದಲ್ಲಿ ಮಾನವ ಮತ್ತು ಸಮಾಜಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಸಂವಹನದ ಉತ್ತೇಜಿತ ಕಾಲವನ್ನು ಮತ್ತು ಉತ್ತಮ ಮಟ್ಟದ ಬೌದ್ಧಿಕ ಅನ್ವೇಷಣೆಯನ್ನು ಪಡೆಯಿರಿ ಎಂದು ಹಾರೈಸುತ್ತೇವೆ.

**ವ್ಯಾಸಂಗ ಯಶಸ್ವಿಯಾಗಲಿ. ಶುಭಾಶಯಗಳು.**

**ಎನ್. ದೊಡ್ಡಸಿದ್ದಯ್ಯ**
**ಮುಖ್ಯಸ್ಥ**
**ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**
**ಮಾನಸಗಂಗೋತ್ರಿ, ಮೈಸೂರು-570 006**

## ಬ್ಲಾಕ್ (ನಿಯತಾಂಕ) — 1

## ಸಮಾಜಶಾಸ್ತ್ರ ಪರಿಚಯ- ಪ್ರಾಥಮಿಕ ಕಲ್ಪನೆಗಳು-ಸಾಮಾಜಿಕ ಪ್ರಕ್ರಿಯೆಗಳು

### ಪರಿಚಯ

ಸ್ನಾತಕೋತ್ತರ ತರಬೇತಿ ಕಾರ್ಯಕ್ರಮದ ಸಮಾಜಶಾಸ್ತ್ರ ಪತ್ರಿಕೆಯಲ್ಲಿನ ಪಠ್ಯಕ್ರಮದ ವಿಷಯಗಳು ಒಂದನೆಯ ಬ್ಲಾಕ್‌ನಿಂದ ಆರಂಭವಾಗಿ ಹತ್ತನೆಯ ಬ್ಲಾಕ್‌ಗೆ ಕೊನೆಗೊಳ್ಳುತ್ತವೆ. ಇಲ್ಲಿ ಆರಂಭವಾಗುವ ಒಂದನೆಯ ಬ್ಲಾಕ್‌ನಲ್ಲಿ ಹೇಗೆ ಸಮಾಜಶಾಸ್ತ್ರದ ಅಧ್ಯಯನವು ಸಮಾಜ ಶಾಸ್ತ್ರದ ವಿದ್ಯಾರ್ಥಿಗಳಿಗೆ ಉಪಯುಕ್ತ ಎಂಬುದು ನಿಮ್ಮ ಅರಿವಿಗೆ ಬರುತ್ತದೆ. ಈ ಬ್ಲಾಕ್‌ನಲ್ಲಿ ಮೂರು ಘಟಕಗಳಿವೆ. ಈ ಘಟಕಗಳನ್ನು ಕುರಿತು ಸಂಕ್ಷಿಪ್ತ ಪರಿಚಯವನ್ನು ಈ ಕೆಳಗೆ ಕೊಟ್ಟಿದೆ.

**ಘಟಕ 1**

ಈ ಘಟಕದಲ್ಲಿ ಸಮಾಜಶಾಸ್ತ್ರವನ್ನು ಕುರಿತು ವಿವಿಧ ವಿದ್ವಾಂಸರು ನೀಡಿರುವ ವ್ಯಾಖ್ಯೆಗಳು ಸಮಾಜಶಾಸ್ತ್ರದ ಸ್ವರೂಪ, ಸಮಾಜಶಾಸ್ತ್ರದ ವ್ಯಾಪ್ತಿಯನ್ನು ವಿವರಿಸುವ ಪಂಥಗಳು, ಸಮಾಜಶಾಸ್ತ್ರವನ್ನು ಅಧ್ಯಯನ ಮಾಡುವುದರಿಂದ ಉಂಟಾಗುವ ಪ್ರಯೋಜನಗಳು ಇವುಗಳನ್ನು ನೀವು ವಿವರವಾಗಿ ಅಧ್ಯಯನ ಮಾಡುವುದರಿಂದ ವಿಚಾರಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದು.

**ಘಟಕ 2**

ಈ ಘಟಕವು ಪಾತ್ರ ಮತ್ತು ಅಂತಸ್ತು ಹಾಗೂ ಸಾಮಾಜಿಕ ವ್ಯವಸ್ಥೆ ಇವು ಹೇಗೆ ಸಮಾಜಶಾಸ್ತ್ರದ ಪ್ರಾಥಮಿಕ ಪರಿಕಲ್ಪನೆಗಳಾಗಿವೆ ಎಂಬುದರ ಮೇಲೆ ಬೆಳಕು ಚೆಲ್ಲುತ್ತದೆ. ವ್ಯಕ್ತಿಯು ಸಮಾಜದಲ್ಲಿ ಯಾವ ಯಾವ ರೂಪದಲ್ಲಿ ಪಾತ್ರ ವಹಿಸುತ್ತಾನೆ, ಪಾತ್ರ ಮತ್ತು ಅಂತಸ್ತುಗಳ ನಡುವಿನ ಸಂಬಂಧ ಅಂತಸ್ತುಗಳಲ್ಲಿ ಎಷ್ಟು ವಿಧಗಳಿವೆ, ಸಾಮಾಜಿಕ ವ್ಯವಸ್ಥೆ ಎಂದರೇನು, ಅದರ ಲಕ್ಷಣಗಳು ಯಾವುವು ಇವುಗಳನ್ನು ಕುರಿತು ಈ ಘಟಕದಲ್ಲಿ ಸ್ಥೂಲವಾದ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ.

**ಘಟಕ 3**

ಈ ಘಟಕವು ಸಾಮಾಜಿಕ ಪ್ರಕ್ರಿಯೆಗಳು ಯಾವುವು, ಸಹಕಾರ ಎಂದರೇನು, ಸಹಕಾರದ ಬಗೆಗಳು, ಸ್ಪರ್ಧೆ ಎಂದರೇನು, ಸ್ಪರ್ಧೆಯ ಪ್ರಕಾರಗಳು, ಘರ್ಷಣೆ ಎಂದರೇನು, ಘರ್ಷಣೆಯ ಬಗೆಗಳು, ಸಂಯೋಜನೆ ಎಂದರೇನು, ಸಂಯೋಜನೆಯ ವಿವಿಧ ರೂಪಗಳು, ಸಮೀಕರಣ ಎಂದರೇನು ಇವುಗಳನ್ನು ಕುರಿತು ಆಳವಾಗಿ ಅಧ್ಯಯನ ಮಾಡುವುದಕ್ಕೆ ನಿಮಗೆ ನೆರವಾಗುತ್ತದೆ.

# ಘಟಕ 1 : ಸಮಾಜಶಾಸ್ತ್ರ ಪರಿಚಯ

## ರಚನೆ

1.0 ಉದ್ದೇಶಗಳು

1.1 ಪರಿಚಯ

1.2 ಸಮಾಜಶಾಸ್ತ್ರ : ವ್ಯಾಖ್ಯೆ

1.3 ಸ್ವರೂಪ

1.3.1 ಸಾಮಾಜಿಕ ವಿಷಯಗಳ ಜಟಿಲತೆ ಮತ್ತು ಅಸ್ಥಿರತೆ

1.3.2 ವಸ್ತುನಿಷ್ಠತೆ ಬೆಳೆಸಿಕೊಳ್ಳಲು ಎಡರು ತೊಡರುಗಳು

1.3.3 ಪ್ರಯೋಗಶಾಲೆ ವಿಧಾನ ಬಳಸಲು ತೊಂದರೆಗಳು

1.3.4 ಪರಿಕಲ್ಪನೆಗಳ ಬಳಕೆ

1.3.5 ಭವಿಷ್ಯೋಕ್ತಿ ನುಡಿ ಅಸಾಧ್ಯ

1.4 ವ್ಯಾಪ್ತಿ

1.4.1 ಔಪಚಾರಿಕ ಪಂಥ

1.4.2 ಸಮನ್ವಯ ಪಂಥ

1.5 ಅಧ್ಯಯನದ ಉಪಯುಕ್ತತೆ

1.5.1 ನಂಬಲರ್ಹ ಜ್ಞಾನ

1.5.2 ಸಾಮಾಜಿಕ ಜೀವನದ ವಿವಿಧ ಮುಖಗಳ ಬಗ್ಗೆ ಅರಿವು

1.5.3 ಸಮಾಜಶಾಸ್ತ್ರ - ಒಂದು ಮಾರ್ಗದರ್ಶಕ ದೃಷ್ಟಿಕೋನ

1.5.4 ಬೌದ್ಧಿಕ ಸಾಧನಗಳು

1.5.5 ಸಹಿಷ್ಣುತಾ ಮನೋಭಾವನೆಯ ವೃದ್ಧಿ

1.5.6 ಸಮಾಜಶಾಸ್ತ್ರದ ವ್ಯಾವಹಾರಿಕ ಮೌಲ್ಯ

1.6 ಸಮಾಜಶಾಸ್ತ್ರದ ಬೆಳವಣಿಗೆ

1.7 ಸಾರಾಂಶ

1.8 ಪ್ರಮುಖ ಪದಗಳು

1.9 ನಿಮ್ಮ ಪ್ರಗತಿ ಪರಿಕ್ಷೆ ಉತ್ತರಗಳು

1.10 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

1.11 ಸಲಹಾ ಗ್ರಂಥಗಳು

## 1.0 ಉದ್ದೇಶಗಳು

ನೀವು ಈ ಘಟಕವನ್ನು ಅಧ್ಯಯನ ಮಾಡಿದ ನಂತರ

- ಸಮಾಜಶಾಸ್ತ್ರದ ಸ್ವರೂಪವನ್ನು ವಿವರಿಸುವಂತಾಗುವಿರಿ
- ಸಮಾಜಶಾಸ್ತ್ರದ ವ್ಯಾಪ್ತಿಯನ್ನು ಪರಿಶೀಲಿಸುವಂತಾಗುವಿರಿ
- ಸಮಾಜಶಾಸ್ತ್ರದ ಮಹತ್ವವನ್ನು ವಿವರಿಸುವಂತಾಗುವಿರಿ

## 1.1 ಪರಿಚಯ

ಈ ಘಟಕದಲ್ಲಿ ಸಮಾಜಶಾಸ್ತ್ರದ ಸ್ವರೂಪ, ಸಮಾಜಶಾಸ್ತ್ರದಲ್ಲಿ ವೈಜ್ಞಾನಿಕ ಪದ್ಧತಿಯ ಅಳವಡಿಕೆ, ಸಮಾಜಶಾಸ್ತ್ರ ಒಂದು ವಿಜ್ಞಾನವಾಗಿ ಹಾಗೂ ಸಮಾಜಶಾಸ್ತ್ರದ ವ್ಯಾಪ್ತಿ ಅಲ್ಲದೆ ಅದರ ಅಧ್ಯಯನದ ಪ್ರಾಮುಖ್ಯತೆಯನ್ನು ಕುರಿತು ತಿಳಿದುಕೊಳ್ಳುತ್ತೇವೆ.

ಮಾನವನು ತನ್ನ ಕ್ರಿಯೆಗಳಲ್ಲಿ ತೊಡಗಿರುವಾಗ ಭೌತಿಕ ಮತ್ತು ಸಾಮಾಜಿಕ ಎಂಬ ಎರಡು ಬಗೆಯ ವಿದ್ಯಾಮಾನಗಳನ್ನು ಸಂಧಿಸಿ ಅವುಗಳನ್ನು ಅರಿಯಲು ಮತ್ತು ನಿಯಂತ್ರಿಸಲು ಪ್ರಯತ್ನಿಸಿದ್ದಾನೆ. ಒಂದು ದೂರದ ನೈಸರ್ಗಿಕ ಶಕ್ತಿಗಳಾದರೆ ಮತ್ತೊಂದು ಸಮೀಪದ ದಿಗ್ಭ್ರಮೆಗೊಳಿಸುವ ಮಾನವನ ವರ್ತನೆಯನ್ನು ನಿರ್ದೇಶಿಸುವ ಸಾಮಾಜಿಕ ಶಕ್ತಿಗಳಾಗಿರುತ್ತವೆ. ಇವೆರಡು ಬಗೆಯ ಪ್ರಮುಖ ವಿದ್ಯಮಾನಗಳ ಬಗ್ಗೆ ಮಾನವನ ಪ್ರಯತ್ನಗಳನ್ನು ಪರಿಶೀಲಿಸಿದಾಗ, ಮಾನವ ತನ್ನ ಪರಿಸರದ ಭೌತಿಕ ಅಂಶಗಳನ್ನು ತಿಳಿಯುವುದರಲ್ಲಿ ಹೆಚ್ಚು ಶೀಘ್ರವಾಗಿ ಪ್ರಗತಿ ಸಾಧಿಸಿರುವುದನ್ನು ಕಾಣುತ್ತೇವೆ. ಸಾಮಾಜಿಕ ವಿದ್ಯಾಮಾನಗಳ ಗ್ರಹಿಕೆಯ ಪ್ರಾಂರಂಭದ ಹಂತಗಳಲ್ಲಿ ಹೆಚ್ಚಿನ ಪ್ರಗತಿ ಕಂಡು ಬರದಿದ್ದರೂ ಇತ್ತೀಚಿನ ವರ್ಷಗಳಲ್ಲಿ ಮಾನವೀಯ ಸಂಬಂಧಗಳನ್ನು ಅಧ್ಯಯನ ಮಾಡುವ ವಿಜ್ಞಾನಗಳ ಬೆಳವಣಿಗೆಯಲ್ಲಿ ಗಮನಾರ್ಹ ಮುನ್ನಡೆ ಸಾಧಿಸಲ್ಪಟ್ಟಿದೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಮಾನವನು ತನ್ನ ಸಾಮಾಜಿಕ ಪರಿಸರವನ್ನು ಗುರುತಿಸಿ ಅದರಲ್ಲಿ ಉಂಟಾಗುವ ಸಮಸ್ಯೆಗಳನ್ನು ಅರಿಯಲು ಪಾರಂಭಿಸಿದನು. ಮಧ್ಯಯುಗ ಮತ್ತು ಆಧುನಿಕ ಕಾಲದ ಆರಂಭದ ಹಂತಗಳಲ್ಲಿ ಸಾಮಾಜಿಕ ವಿದ್ಯಮಾನಗಳ ಬಗ್ಗೆ ಮಾನವನ ವಿಶ್ಲೇಷಣೆ ಮತ್ತು ವಿವರಣೆಗಳು ಬಹುಮಟ್ಟಿಗೆ ತಪ್ಪೆಂದೂ ಮತ್ತು ಊಹಾ ರೂಪವಾಗಿದ್ದವೆಂಬುದು ತಿಳಿಯುತ್ತದೆ. ಆದರೆ ಅನಂತರದ ದಿನಗಳಲ್ಲಿ ಸಾಮಾಜಿಕ ವಿದ್ಯಮಾನಗಳನ್ನು ಅಧ್ಯಯನದಲ್ಲಿ ವೈಜ್ಞಾನಿಕ ಅವಲೋಕನ ಮತ್ತು ವಿಶ್ಲೇಷಣೆಯನ್ನು ಬಳಸಲು ಅನೇಕ ಚಿಂತಕರು, ದಾರ್ಶನಿಕರು ಮಾಡಿದ ಪ್ರಯತ್ನಗಳ ಫಲವಾಗಿ ಸಮಾಜ ವಿಜ್ಞಾನಗಳ ಉಗಮವಾಗಿದೆ. ಪ್ರಾರಂಭದಲ್ಲಿ ಮತ್ತು ನಂತರ ಬಹಳ ಕಾಲದವರೆಗೆ ಮಾನವನ ಎಲ್ಲಾ ಚಟುವಟಿಕೆಗಳೂ - ಆರ್ಥಿಕ, ರಾಜಕೀಯ ಅಥವಾ ಹೆಚ್ಚು ನಿರ್ಧಿಷ್ಟವಾದ ಸಾಮಾಜಿಕವೇ ಆಗಿದ್ದರೂ ಒಂದೇ ಸಮಾಜ ವಿಜ್ಞಾನದ ವಿಷಯವಾಗಿದ್ದವು. ಕಾಲಕ್ರಮದಲ್ಲಿ ಈ ಏಕ ಮಾತ್ರ ಸಮಾಜ ವಿಜ್ಞಾನ ಅನೇಕ ಸಮಾಜ ವಿಜ್ಞಾನಗಳಿಗೆ ಜನ್ಮ ನೀಡಿದ್ದು ಪ್ರತಿಯೊಂದು ವಿಜ್ಞಾನವೂ ಸಾಮಾಜಿಕ ಜೀವನದ ಒಂದು ನಿರ್ಧಿಷ್ಟ ಅಂಶವನ್ನು ವಿಶೇಷವಾಗಿ ಅಭ್ಯಸಿಸುತ್ತವೆ.

ಸಮಾಜಶಾಸ್ತ್ರವು ಒಂದು ಪ್ರತ್ಯೇಕ ಹಾಗೂ ವ್ಯವಸ್ಥಿತವಾದ ವಿಜ್ಞಾನವಾಗಿ ಬೆಳೆಯಲು ಪ್ರಾರಂಭಿಸಿದ್ದು 19ನೇ ಶತಮಾನದಿಂದೀಚೆಗೆ ಅದೂ ಕೂಡ ಫ್ರೆಂಚ್ ದಾರ್ಶನಿಕ ಆಗಸ್ಟ್ ಕಾಂಮ್ಟೆಯ ವಿಚಾರದಾರೆಗಳು ಸಮಾಜ ಶಾಸ್ತ್ರದ ಬೆಳವಣಿಗೆಗೆ ನಾಂದಿಯಾದವು. ಆದರೆ ಕಾಂಮ್ಟೆಗಿಂತ ಮೊದಲು ಸಮಾಜದ ಬಗ್ಗೆ ಯಾರೂ ಚಿಂತನೆ ಮಾಡಿ ವಿಚಾರಗಳನ್ನು ಪ್ರಚುರ ಪಡಿಸಲಿಲ್ಲ ಎಂದು ಅರ್ಥವಲ್ಲ. ಸಾವಿರಾರು ವರ್ಷಗಳ ಹಿಂದಿನಿಂದಲೂ ಅನೇಕ ಚಿಂತನಕಾರರು, ದಾರ್ಶನಿಕರು, ಸಮಾಜದ ಸಮೂಹಗಳ, ಸಂಘ ಸಂಸ್ಥೆಗಳ ಬಗ್ಗೆ ವಿಚಾರಪೂರಿತ ಚಿಂತನೆಗಳನ್ನು ಮಾಡಿದ್ದಾರೆ. ಉದಾ. ಪ್ಲೇಟೋ, ಅರಿಸ್ಟಾಟಲ್, ಮನು, ಕೌಟಿಲ್ಯ, ಕನ್‌ಪ್ಯೂಸಿಯಸ್ ಮುಂತಾದ ಚಿಂತಕರು ಸಮಾಜ, ಕಾನೂನು, ಧರ್ಮ, ರಾಜಕೀಯ ಮುಂತಾದವುಗಳ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಆದರೂ

ಸಮಾಜಶಾಸ್ತ್ರ ಒಂದು ಶಾಸ್ತ್ರೀಯ ಅಧ್ಯಯನವಾಗಿ ಬೆಳೆಯಲು ಪ್ರಾರಂಭಿಸಿದ್ದು 19ನೇ ಶತಮಾನದಿಂದೀಚೆಗೆ ಮಾತ್ರ.

## 1.2 ಸಮಾಜಶಾಸ್ತ್ರ : ವ್ಯಾಖ್ಯೆ

''ಸಮಾಜಶಾಸ್ತ್ರ''ವೆಂಬ ಪದವನ್ನು ಮೊಟ್ಟ ಮೊದಲಿಗೆ ಬಳಕೆಗೆ ತಂದ ಕೀರ್ತಿ ಫ್ರೆಂಚ್ ಚಿಂತನಕಾರ ಆಗಸ್ಟ್ ಕಾಂಮ್ಟೆಗೆಸಲ್ಲುತ್ತದೆ. ಕಾಂಮ್ಟೆ 1839ರಲ್ಲಿ ತನ್ನ ''ಪಾಸಿಟಿವ್ ಫಿಲಾಸಫಿ'' ಎಂಬ ಗ್ರಂಥದಲ್ಲಿ ಸಮಾಜಶಾಸ್ತ್ರ ಎಂಬ ಪದವನ್ನು ಬಳಸಿದನು. ಕಾಂಮ್ಟೆ ಸಮಾಜಶಾಸ್ತ್ರದ ಎಲ್ಲೆಯನ್ನು ಗುರುತಿಸಿ ಅದಕ್ಕೆ ಒಂದು ಪ್ರತ್ಯೇಕ ಅಸ್ತಿತ್ವವನ್ನು ತಂದು ಕೊಟ್ಟಿರುವುದರಿಂದ ಕಾಂಮ್ಟೆಯನ್ನು 'ಸಮಾಜಶಾಸ್ತ್ರದ ಪಿತಾಮಹ'ನೆಂದು ಪರಿಗಣಿಸಲಾಗಿದೆ.

ಸಮಾಜಶಾಸ್ತ್ರವೆಂಬ ಪದವು ಎರಡು ಪದಗಳ ಜೋಡಣೆಯಿಂದ ಉಂಟಾಗಿದೆ. 'ಸೊಷಿಯಸ್' ಎಂಬ ಲ್ಯಾಟಿನ್ ಪದದ ಅರ್ಥ ಸಹವಾಸಿ ಹಾಗೂ 'ಲೋಗಸ್' ಎಂಬ ಗ್ರೀಕ್ ಪದದ ಅರ್ಥ ಮಾತನಾಡುವುದು, ಎಂದರೆ ಸಹವಾಸಿಯೊಡನೆ ಮಾತನಾಡು ಎಂದಾಗುತ್ತದೆ. ಗಿಸ್ ಬರ್ಟ್ ಪ್ರಕಾರ ಸಮಾಜಶಾಸ್ತ್ರ ಎಂಬ ಪದಕ್ಕೆ ಸೊಸೈಟಾಸ್ ಎಂಬ ಲ್ಯಾಟಿನ್ ಪದ ಮತ್ತು 'ಲೋಗಸ್' ಎಂಬ ಗ್ರೀಕ್ ಶಬ್ದದ ಮೂಲ ಪದಗಳಾಗಿವೆ. ಸೊಸೈಟಾಸ್ ಎಂದರೆ ಸಮಾಜ ಲೋಗಸ್ ಎಂದರೆ ಅಧ್ಯಯನ ಅಥವಾ ವಿಜ್ಞಾನವೆಂದಾಗುತ್ತದೆ. ಆದ್ದರಿಂದ ಆಂಗ್ಲ ಪದವಾದ ಸೋಷಿಯಾಲಜಿ ಎಂದರೆ ಸಮಾಜವನ್ನು ಕುರಿತು ಅಧ್ಯಯನ ಅಥವಾ ವಿಜ್ಞಾನವೆಂದಾಗುತ್ತದೆ. ಆದ್ದರಿಂದ ಆಂಗ್ಲ ಪದವಾದ ಸೋಷಿಯಾಲಜಿ ಎಂದರೆ ಸಮಾಜವನ್ನು ಕುರಿತು ಅಧ್ಯಯನ ಮಾಡುವ ಶಾಸ್ತ್ರ ಎಂದಾಗುತ್ತದೆ. ಹರ್ಬರ್ಟ್ ಸ್ಪೆನ್ಸರ್ ತನ್ನ 'ಪ್ರಿನ್ಸಿಪಲ್ಸ್ ಆಫ್ ಸೋಷಿಯಾಲಜಿ' ಎಂಬ ಗ್ರಂಥದ [Herbert Spencer: Principles of Sociology (Chicago, the University of Chicago Press, 1967) ಶಿರೋನಾಮೆಯಾಗಿ ಸೋಷಿಯಾಲಜಿ ಎಂಬ ಪದವನ್ನು ಬಳಸಿದ ನಂತರ ಈ ವಿಜ್ಞಾನಕ್ಕೆ ಸೋಷಿಯಾಲಜಿ ಎಂಬುದು ಸ್ಥಿರವಾದ ಹೆಸರಾಯಿತು.

- 'ಎಲ್.ಎಫ್.ವಾರ್ಡ್‌ರವರು ಸಮಾಜಶಾಸ್ತ್ರ ಸಾಮಾಜಿಕ ವಿಷಯಗಳ ಶಾಸ್ತ್ರವಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

- ಗಿನ್ಸ್ ಬರ್ಗ್‌ರವರ ಮಾತಿನಲ್ಲಿ ಹೇಳುವುದಾದರೆ ಸಮಾಜಶಾಸ್ತ್ರ ಮಾನವನ ಒಡನಾಟ ಮತ್ತು ಪರಸ್ಪರ ಸಂಬಂಧಗಳು ಅವುಗಳ ನಿಯಮ ಹಾಗೂ ಪ್ರಭಾವಗಳ ಅಧ್ಯಯನವಾಗಿದೆ. [Morris Ginsberg : 1. "Sociology - Oxford University press, London 1961. 2. Studies in Sociology, Methuem & Co., Ltd., London 1932].

- ಜೆ.ಎಫ್ ಕ್ಯೂಬರ್ ಪ್ರಕಾರ ಸಮಾಜಶಾಸ್ತ್ರ ಎಂದರೆ ''ಮನವ ಸಂಬಂಧಗಳಿಗೆ ಸಂಬಂಧಪಟ್ಟ ವೈಜ್ಞಾನಿಕ ಜ್ಞಾನದ ಪರಿಚಯವಾಗಿದೆ.''

- ಎಮಿಲಿ ಡರ್ಖಿಮ್ ಪ್ರಕಾರ ಸಾಮಾಜಿಕ ಸಂಸ್ಥೆಗಳ ವಿಜ್ಞಾನವನ್ನು ಸಮಾಜಶಾಸ್ತ್ರವೆಂದು ಹೇಳಿದ್ದಾರೆ. (Durkheim, E: The Rules of Sociological Method., (Eng.Trans), The Free Press: Gleneoe.

- ಮ್ಯಾಕ್ಸ್ ವೆಬರ್ ಪ್ರಕಾರ ಸಮಾಜಶಾಸ್ತ್ರವು ''ಸಾಮಾಜಿಕ ಕ್ರಿಯೆಗಳ ಅಧ್ಯಯನವೆಂದಿದ್ದಾರೆ. (Maxweber: Basic concepts in sociology)

- ಮೆಕೈವರ್ ಮತ್ತು ಪೇಜ್‌ರವರ ಪ್ರಕಾರ ಸಮಾಜಶಾಸ್ತ್ರ ಸಾಮಾಜಿಕ ಸಂಬಂಧಗಳನ್ನು ಅಧ್ಯಯನ ಮಾಡುವ ಶಾಸ್ತ್ರವಾಗಿದೆ. (R.M.MACIVER & C.H. page - Society)

ಮೇಲಿನ ವ್ಯಾಖ್ಯೆಗಳು ಸಮಾಜಶಾಸ್ತ್ರದ ವ್ಯಾಖ್ಯೆಯ ಬಗ್ಗೆ ಸಮಾಜಶಾಸ್ತ್ರಜ್ಞರ ಭಿನ್ನಾಭಿಪ್ರಾಯಗಳನ್ನು ಸ್ಪಷ್ಟಪಡಿಸುತ್ತವೆ. ಪ್ರತಿಯೊಬ್ಬರೂ ತಮ್ಮ ಅರಿವು ಆಸಕ್ತಿಗಳಿಗೆ ಅನುಗುಣವಾಗಿ ಸಮಾಜ ಶಾಸ್ತ್ರವನ್ನು ವಿಶ್ಲೇಷಿಸಿದ್ದಾರೆ. ಒಟ್ಟಿನಲ್ಲಿ ಸಮಾಜಶಾಸ್ತ್ರ ಸಾಮಾಜಿಕ ಸಂಬಂಧಗಳ ಬಗ್ಗೆ ಕುರಿತು

ಅಧ್ಯಯನ ಮಾಡುತ್ತದೆ. ಈ ವ್ಯವಸ್ಥೆಯಲ್ಲಿ ಸಮಾಜ, ಸಂಸ್ಥೆಗಳು, ಸಾಮಾಜಿಕ ಕ್ರಿಯೆಗಳು ಬಹು ಮುಖ್ಯವಾಗಿವೆ. ಸಮಾಜವನ್ನು ಕುರಿತು ಅಧ್ಯಯನ ಮಾಡುವಾಗ ಸಮಾಜಶಾಸ್ತ್ರವು ಸಮಗ್ರ ಸಮಾಜದ ಬಗ್ಗೆ ವಿಚಾರ ಮಾಡುತ್ತದೆ. ಇದು ಸಮಾಜದ ರಚನೆ, ಬೆಳವಣಿಗೆ, ಸ್ವರೂಪ, ಬದಲಾವಣೆ ಮತ್ತು ಪರಸ್ಪರ ಸಂಬಂಧಪಟ್ಟಿರುವ ಅದರ ಭಾಗಗಳನ್ನು ವರ್ಣಿಸುತ್ತದೆ ಮತ್ತು ಸಾಮಾಜಿಕ ವ್ಯವಸ್ಥೆ ಹಾಗೂ ಅವ್ಯವಸ್ಥೆಯ ಸ್ವರೂಪವನ್ನು ವಿವರಿಸುತ್ತದೆ.

ಸಮಾಜವು ಸಂಸ್ಥೆಗಳ ಒಂದು ಸಂಕೀರ್ಣ ವ್ಯವಸ್ಥೆಯಾಗಿದೆ. ಸಂಸ್ಥೆಗಳ ಮೇಲೆ ಗಮನವನ್ನು ಕೇಂದ್ರೀಕರಿಸುವಾಗ, ಸಮಾಜ ಶಾಸ್ತ್ರವು ವಿವಿಧ ಸಂಸ್ಥೆಗಳ ಲಕ್ಷಣ, ಅವುಗಳ ''ರಚನೆ, ಮತ್ತು ಕಾರ್ಯ'' ಗಳನ್ನು ವಿವರಿಸುತ್ತದೆ.

ಸಂಸ್ಥೆಗಳು ಸಮಾಜಿಕ ಸಂಬಂಧಗಳ ಸಂಕೀರ್ಣ ವ್ಯವಸ್ಥೆ. ಸಾಮಾಜಿಕ ಸಂಬಂಧಗಳನ್ನು ಕುರಿತು ಅಧ್ಯಯನ ಮಾಡುವಾಗ ಸಮಾಜ ಶಾಸ್ತ್ರವು ಸಾಮಾಜಿಕ ಸಂಬಂಧಗಳ ವಿಶಿಷ್ಟ ಲಕ್ಷಣಗಳನ್ನು ಅವುಗಳ ವೈವಿಧ್ಯತೆ ಹಾಗೂ ಪ್ರಮಾಣವನ್ನು ವಿವರಿಸುತ್ತದೆ. ಸಾಮಾಜಿಕ ಸಂಬಂಧಗಳನ್ನು ''ಸಾಮಾಜಿಕ ಜೀವನದ ಅಣುಗಳೆಂದು'' ವರ್ಣಿಸಲಾಗಿದೆ.

ಸಾಮಾಜಿಕ ಕ್ರಿಯೆ ಇತರರಿಗೆ ಸಂಬಂಧಿಸಿದ ವ್ಯಕ್ತಿಗಳ ವರ್ತನೆಯನ್ನು ಸೂಚಿಸಿದರೆ, ಸಾಮಾಜಿಕ ಒಡನಾಟವು ಪರಸ್ಪರ ಪ್ರತಿಕ್ರಿಯೆ ತೋರುವ ಮತ್ತು ಪರಸ್ಪರ ವರ್ತನೆಯ ಮೇಲೆ ಪ್ರಭಾವ ಬೀರುವ ಇಬ್ಬರು ಅಥವಾ ಹೆಚ್ಚಿನ ಸಂಖ್ಯೆಯಲ್ಲಿರುವ ವ್ಯಕ್ತಿಗಳಿಗೆ ಅನ್ವಯಿಸುತ್ತದೆ. ಗ್ರೀನ್ ಪ್ರಕಾರ ''ವ್ಯಕ್ತಿಗಳು ಹಾಗೂ ಸಮೂಹಗಳು ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಮತ್ತು ಗುರಿಸಾಧನೆಗಾಗಿ ಮಾಡುವ ಪ್ರಯತ್ನಗಳಲ್ಲಿ ಬೀರುವ ಪರಸ್ಪರ ಪ್ರಭಾವಗಳೇ ಸಾಮಾಜಿಕ ಒಡನಾಟ''. ಸಾಮಾಜಿಕ ಒಡನಾಟವು ಸ್ಪರ್ದೆ ಮತ್ತು ಸಹಕಾರ ಇತ್ಯಾದಿ ರೂಪಗಳಲ್ಲಿ ವ್ಯಕ್ತವಾಗುತ್ತದೆ. ಈ ರೂಪಗಳನ್ನು ಸಾಮಾಜಿಕ ಪ್ರಕ್ರಿಯೆಗಳು ಎಂಬುದಾಗಿ ಕರೆಯಲಾಗುತ್ತದೆ. ವ್ಯಕ್ತಿ ಇತರ ವ್ಯಕ್ತಿಗಳೊಡನೆ ಪರಸ್ಪರ ಕ್ರಿಯೆಯಲ್ಲಿ ತೊಡಗುತ್ತಾನೆ ಹಾಗೂ ವ್ಯಕ್ತಿಗಳು ಪರಸ್ಪರ ಪ್ರಭಾವ ಬೀರುತ್ತಾರೆ. ಎಲ್ಲಾ ಕ್ರಿಯೆಗಳು ಸಾಮಾಜಿಕವಾಗಿರುವುದಿಲ್ಲ. ಸಮಾಜಶಾಸ್ತ್ರ ಕೇವಲ ವ್ಯಕ್ತಿ ಹಾಗೂ ಅವನ ಸಂಪರ್ಕ ಹೊಂದಿರುವ ಇತರರಿಗೆ ಸ್ಪಷ್ಟವಾಗಿ ಅರ್ಥವಾಗುವಂತಹ, ಕ್ರಿಯೆಗಳ ಬಗ್ಗೆ ವಿಚಾರ ಮಾಡುತ್ತದೆ. ಉದಾಹರಣೆಗೆ ಇಬ್ಬರು ವ್ಯಕ್ತಿಗಳು ಒಂದೇ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದರೆ ಅವರ ಸಂಬಂಧ ಭೌತಿಕವಾದದ್ದು. ಆದರೆ ಅವರು ಪರಸ್ಪರರ ಇರುವಿಕೆಯನ್ನು ಗುರುತಿಸಿ ಪರಸ್ಪರ ಪ್ರತಿಕ್ರಿಯಿಸಿದರೆ ಅದು ಸಾಮಾಜಿಕ ಸಂಬಂಧವಾಗುತ್ತದೆ.

ಹೀಗೆ ಸಮಾಜಶಾಸ್ತ್ರ ಸಮಾಜ, ಸಂಸ್ಥೆಗಳು, ಸಾಮಾಜಿಕ ಸಂಬಂಧ ಮತ್ತು ಸಾಮಾಜಿಕ ಕ್ರಿಯೆಗಳ ವಿಜ್ಞಾನವಾಗಿದೆ. ಇದು ವ್ಯಕ್ತಿಯನ್ನು ಸಾಮಾಜಿಕ ಜೀವಿಯನ್ನಾಗಿ ಅಧ್ಯಯನ ಮಾಡುತ್ತದೆ ಹಾಗೂ ವ್ಯಕ್ತಿಯನ್ನು ಸಹ ಜೀವಿಗಳೊಡನೆ ಸಂಬಂಧ ಹೊಂದಿರುವ ಮಾನವ ಜೀವಿಯನ್ನಾಗಿ ಅಧ್ಯಯನ ಮಾಡುತ್ತದೆ.

## 1.3 ಸ್ವರೂಪ

ಸಮಾಜಶಾಸ್ತ್ರ ಸಾಮಾಜಿಕ ಸತ್ಯಾಂಶಗಳನ್ನು, ವೈಜ್ಞಾನಿಕ ಪದ್ಧತಿಗಳನ್ನು ಅನುಸರಿಸಿ ಅಧ್ಯಯನ ಮಾಡುತ್ತದೆ ಎಂಬುದು ಸಮಾಜ ಶಾಸ್ತ್ರಕ್ಕೆ ಅನೇಕ ಚಿಂತಕರು ನೀಡಿರುವ ವ್ಯಾಖ್ಯೆಗಳ ಮೂಲಕ ಸ್ಪಷ್ಟವಾಗುತ್ತದೆ. ಆದ್ದರಿಂದ ಸಮಾಜ ಶಾಸ್ತ್ರವೂ ಒಂದು ಸಾಮಾಜಿಕ ವಿಜ್ಞಾನವೆನಿಸಿಕೊಂಡಿದೆ. ಏಕೆಂದರೆ ಸಮಾಜಶಾಸ್ತ್ರ ವ್ಯಕ್ತಿ ಮತ್ತು ಅವನ ಸಮಾಜವನ್ನು ಕುರಿತು ಅಧ್ಯಯನ ಮಾಡುವಾಗ ವೈಜ್ಞಾನಿಕ ಪದ್ಧತಿಯನ್ನು ಬಳಸುತ್ತದೆ. ವೈಜ್ಞಾನಿಕ ವಿಧಾನವನ್ನು ಬಳಸುವುದರಿಂದ ಮಾನವ ಸಮಾಜದ ಸ್ವರೂಪ, ಕ್ರಿಯೆ ಹಾಗೂ ರಚನೆಯನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ವ್ಯಕ್ತಿಗಳು ತಮ್ಮ ಸಾಮೂಹಿಕ ಜೀವನದಲ್ಲಿ ಎದುರಿಸಬೇಕಾಗಿರುವ ವಾಸ್ತವಿಕ ಸಮಸ್ಯೆಗಳನ್ನು ಬಗೆಹರಿಸುವುದು ಸಾಧ್ಯವಾಗುತ್ತದೆ ಎಂಬುದು ಈ ಶಾಸ್ತ್ರಕ್ಕೆ ಆಧಾರವಾಗಿದೆ.

ಸಮಾಜಶಾಸ್ತ್ರದ ನಿಜ ಸ್ವರೂಪವನ್ನು ಅರ್ಥ ಮಾಡಿಕೊಳ್ಳಬೇಕಾದರೆ ವಿಜ್ಞಾನವೆಂದರೇನು? ಎಂಬುದನ್ನು ಅರಿತುಕೊಳ್ಳಬೇಕಾಗುತ್ತದೆ. ವಿಜ್ಞಾನವೆಂಬ ಪದಕ್ಕೆ ಜ್ಞಾನದ ಯಾವುದಾದರೂ ಶಾಖೆ ಎಂದು ಅರ್ಥವಿದೆ. ಮಧ್ಯ ಯುಗದಲ್ಲಿ ವ್ಯಾಕರಣ, ತರ್ಕಶಾಸ್ತ್ರ ಮತ್ತು ಅಲಂಕಾರ ಶಾಸ್ತ್ರ ಎಂಬ ವಿಜ್ಞಾನ ಶಾಖೆಗಳಿದ್ದವು. ಅನಂತರ ಚತುರ್ಶಾಸ್ತ್ರಗಳಾದ, ಅಂಕಗಣಿತ, ಸಂಗೀತ, ಜ್ಯಾಮಿತಿ ಮತ್ತು ಖಗೋಳಶಾಸ್ತ್ರ ಎಂಬುವ ಏಳು ಸಾಂಸ್ಕೃತಿಕ ವಿಜ್ಞಾನಗಳಾಗಿದ್ದವು. ಅನೇಕರು ವಿಜ್ಞಾನವೆಂದರೆ

''ಜ್ಞಾನದ ವ್ಯವಸ್ಥಿತ ಸಂಚಯ'' ಅಥವಾ ಜ್ಞಾನವನ್ನು ಪಡೆಯುವ ವ್ಯವಸ್ಥಿತ ವಿಧಾನ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಬಿಸಾಂಜ್ ಮತ್ತು ಬಿಸಾಂಜ್‌ರವರು ''ವಿಷಯಕ್ಕಿಂತ ಅಳವಡಿಸಿಕೊಳ್ಳುವ ವಿಧಾನ ವಿಜ್ಞಾನದ ಪ್ರಮಾಣವಾಗುತ್ತದೆ'' ಎಂಬುದಾಗಿ ಹೇಳುತ್ತಾರೆ. 'ವಿಜ್ಞಾನವು ಅರಿವಿನ ಒಂದು ಸಾಧನ'ವೆಂಬುದಾಗಿ ಕ್ಯೂಬರ್ ತಿಳಿಸಿದ್ದಾರೆ. ''ಎಲ್ಲಾ ವಿಜ್ಞಾನಗಳ ಏಕತೆ ಇರುವುದು ಅವುಗಳ ವಿಧಾನದಲ್ಲೇ ಹೊರತು ವಿಷಯದಲ್ಲಲ್ಲ. ಯಾವ ವ್ಯಕ್ತಿಯು ವಾಸ್ತವಾಂಶಗಳನ್ನು ವರ್ಗೀಕರಿಸುತ್ತಾನೋ ಅವುಗಳಿಗಿರುವ ಪರಸ್ಪರ ಸಂಬಂಧವನ್ನು ವೀಕ್ಷಿಸುತ್ತಾನೋ ಮತ್ತು ಅವುಗಳ ಅನುಕ್ರಮಗಳನ್ನು ವರ್ಣಿಸುತ್ತಾನೋ, ಅವನು ವೈಜ್ಞಾನಿಕ ವಿಧಾನವನ್ನು ಬಳಸುವವನಾಗಿರುತ್ತಾನೆ ಮತ್ತು ಅವನೊಬ್ಬ ವಿಜ್ಞಾನಿಯಾಗಿರುತ್ತಾನೆ'' ಎಂಬುದಾಗಿ ಕಾರ್ಲ್ ಪಿಯರಸನ್ ಹೇಳುತ್ತಾರೆ. ಒಟ್ಟಿನಲ್ಲಿ ವಿಜ್ಞಾನ ಎಂಬ ಪದವನ್ನು ಎರಡು ವಿಶಿಷ್ಟವಾದ ಆದರೆ ಪರಸ್ಪರ ಸಂಬಂಧಪಟ್ಟ ಕ್ರಮದಲ್ಲಿ ವಿವರಿಸಬಹುದು.

ವೈಜ್ಞಾನಿಕ ಅವಲೋಕನೆಯ ಮೇಲೆ ಆಧಾರಿತವಾದ ಮತ್ತು ಸಾಮಾನ್ಯೀಕರಣ ಅಥವಾ ನಿಯಮಗಳ ಒಂದು ವ್ಯವಸ್ಥೆಯಾಗಿ ಕ್ರಮಗೊಳಿಸಲ್ಪಟ್ಟ ನಂಬಲರ್ಹವಾದ ಜ್ಞಾನದ ಪರಿಚಯವೇ ವಿಜ್ಞಾನ.

ಈ ಜಗತ್ತಿನ ಬಗ್ಗೆ ಕ್ರಮಬದ್ಧವಾದ ಮತ್ತು ಯಥಾರ್ಥವಾದ ಜ್ಞಾನವನ್ನು ಗಳಿಸಲು ಸಹಾಯಕವಾದ ವಿಧಾನವೇ ವಿಜ್ಞಾನ.

ಸಾಧಾರಣವಾಗಿ ವೈಜ್ಞಾನಿಕ ವಿಧಾನವು ಪಟ್ಟಿ ಮಾಡಲು ಸುಲಭವಾದಂತಹ, ಆದರೆ ಅನುಸರಿಸಲು ಕಷ್ಟವಾದಂತಹ ಅನೇಕ ಹಂತಗಳನ್ನು ಒಳಗೊಂಡಿದೆ. ಉದಾಹರಣೆಗೆ,

**ಸಮಸ್ಯೆ ಆಯ್ಕೆ ಮತ್ತು ಸಮಸ್ಯೆಯ ವ್ಯಾಖ್ಯೆ**

**ಸಂಶೋಧನಾ ನಕ್ಷೆ ತಯಾರು ಮಾಡುವುದು**

**ದತ್ತಾಂಶಗಳ ಸಂಗ್ರಹಣೆ ಮತ್ತು ದಾಖಲೆ**

**ವರ್ಗೀಕರಣ**

**ಉಪಕಲ್ಪನೆಯ ಪರೀಕ್ಷೆ**

**ಸಾಮನ್ಯೀಕರಣ**

**ಭವಿಷ್ಯೋಕ್ತಿ ಮತ್ತು ವ್ಯವಸ್ಥಾಪನೆ.**

ಸಮಾಜಶಾಸ್ತ್ರವನ್ನು ಒಂದು ವಿಜ್ಞಾನವೆಂದು ಕರೆಯಬಹುದೇ ಅಥವಾ ಇದು ಕೇವಲ ಒಂದು ಶಿಕ್ಷಣ ಮಾತ್ರವಾಗಿದೆಯೇ ಎಂಬುದರ ಬಗ್ಗೆ ವಿವಾದಗಳು ನಡೆಯುತ್ತಲೇ ಇವೆ. ಕೆಲವರು ಸಮಾಜಶಾಸ್ತ್ರದ ನಿರ್ಣಯಗಳು ಹಾಗು ಪರಿಶೋಧನೆಗಳು ನಿಖರವಾಗಿರುವದಿಲ್ಲ. ಆದ್ದರಿಂದ ಅವು ಪ್ರಯೋಜನಕಾರಿಯಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಸಮಾಜಶಾಸ್ತ್ರ ನಿಯಂತ್ರಿತ ಪ್ರಯೋಗಗಳ ಮೂಲಕ ತನ್ನ ವಿಷಯಗಳನ್ನು ಅಧ್ಯಯನ ಮಾಡಲಾರದು ಮತ್ತು ಅನೇಕ ಬಗೆಯ ಸಾಮಾಜಿಕ ವಿಷಯಗಳನ್ನು ವಿವರಿಸಲು ಸಹಾಯಕವಾದಂಥಹ ಸಂಘಟಿತ, ವ್ಯಾಪಕ ಸಿದ್ಧಾಂತಗಳನ್ನು ನಿರೂಪಿಸಲಾರದು ಎಂಬ ದೂರುಗಳಿವೆ. ಸಾಮಾಜಿಕ ಅಂಶಗಳು ಬಹು ಶೀಘ್ರವಾಗಿ ಬದಲಾಗುವುದರಿಂದ ಅವುಗಳ ವಸ್ತುನಿಷ್ಟತೆ ಮೌಲ್ಯಾಧಾರಿತ ಹಾಗೂ ಪೂರ್ವಾಗ್ರಹ ಪೀಡಿತವಾಗಿರುವುದರಿಂದ ಹಾಗೂ ನಿಖರ ವಿಶ್ಲೇಷಣೆ ಸಾಧ್ಯವಾಗದೇ ಹೋಗುವಷ್ಟರ ಮಟ್ಟಿಗೆ ಬಹು ಸಂಕೀರ್ಣವಾಗಿರುವುದರಿಂದ ಸಮಾಜಶಾಸ್ತ್ರ ''ಪ್ರಾಕೃತಿಕ ವಿಜ್ಞಾನ''ಗಳಂತೆ ವೈಜ್ಞಾನಿಕ ಅಧ್ಯಯನವಾಗುವುದು ಸಾಧ್ಯವಿಲ್ಲವೆಂದು ಹಲವರು ವಾದಿಸುತ್ತಾರೆ. ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ಕೆಲವು ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ ಎಂಬುದೇ ನಿಜ.

### 1.3.1 ಸಾಮಾಜಿಕ ವಿಷಯಗಳ ಜಟಿಲತೆ ಮತ್ತು ಅಸ್ಥಿರತೆ

ಅತ್ಯಂತ ಜಟಿಲತೆ (ಸಂಕೀರ್ಣ) ವೈವಿಧ್ಯತೆ ಹಾಗೂ ಬದಲಾಗುವ ಪ್ರವೃತ್ತಿ ಸಮಾಜಶಾಸ್ತ್ರವು ಅಧ್ಯಯನ ಮಾಡುವ ವಿಷಯಗಳ ಲಕ್ಷಣಗಳಾಗಿವೆ. ಸಾಮಾಜಿಕ ವಾಸ್ತವಾಂಶಗಳು ಬಹು ಸಂಕೀರ್ಣವಾಗಿರುವುದರಿಂದ ಎಲ್ಲಿಂದ ಹೇಗೆ ಅಧ್ಯಯನ ಮಾಡಬೇಕು ಎಂಬುದೇ ಅನೇಕರಿಗೆ ಗೊಂದಲ ಉಂಟಾಗುವ ಪರಿಸ್ಥಿತಿ ಇರುತ್ತದೆ. ಸಾಧಾರಣವಾಗಿ ಸಾಮಾಜಿಕ ಸನ್ನಿವೇಶಗಳು ಒಂದಕ್ಕೊಂದು ಬಲೆಯಂತೆ ಹೆಣೆದುಕೊಂಡಿರುವುದರಿಂದ ಒಂದು ಅಂಶವನ್ನು ಮಾರ್ಪಡಿಸುವುದೇ ಆಗಲಿ ಅಥವಾ ಒಂದು ಅಂಶದ ನಿರ್ಧಿಷ್ಟ ಅಂಶಗಳನ್ನು ಬೇರ್ಪಡಿಸಿ ಅಧ್ಯಯನ ಮಾಡುವುದಾಗಲೀ ಕಷ್ಟ. ಸಾಮಾಜಿಕ ವಿಷಯಗಳ ಈ ಜಟಿಲತೆ ಹಾಗು ಅಸ್ಥಿರತೆಯೇ ಸಾಮಾಜಿಕ ಅಂಶಗಳ ಅಧ್ಯಯನಕ್ಕೆ ಒಂದು ತೊಡಕಾಗಿದೆ.

### 1.3.2 ವಸ್ತುನಿಷ್ಟತೆ ಬೆಳೆಸಿಕೊಳ್ಳಲು ಎಡರು ತೊಡರುಗಳು

ವಸ್ತು ನಿಷ್ಟತೆ ಎಂದರೆ '' ಒಂದು ನಿರ್ಧಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ವಾಸ್ತವಾಂಶಗಳನ್ನು ಯಾವ ಪೂರ್ವಾಗ್ರಹವಿಲ್ಲದೆ ಅಧ್ಯಯನ ಮಾಡುವ ಯೋಗ್ಯತೆ ಮತ್ತು ಸ್ವಂತ ಇಚ್ಛೆ'' ಎಂದರ್ಥ. ಪ್ರಾಕೃತ ವಿಜ್ಞಾನಿಗಳು ಬಹು ಸುಲಭವಾಗಿ ವಸ್ತು ನಿಷ್ಟತೆಯನ್ನು ಬೆಳೆಸಿಕೊಳ್ಳಬಲ್ಲರು. ಕಾರಣ ಅವರು ತಾವು ಅಧ್ಯಯನ ಮಾಡುವ ವಿಷಯದ ಭಾಗವಾಗಿರುವುದಿಲ್ಲ. ಅವರು ಬಣ್ಣದ ಕನ್ನಡಕವನ್ನು ಹಾಕಿಕೊಂಡು ಜಡವಸ್ತುಗಳಿಗಿರುವ ಭೌತ ಸಂಬಂಧಗಳನ್ನು ವೀಕ್ಷಿಸಬೇಕಿಲ್ಲ. ಅವರು ಒಂದು ರಾಸಾಯನಿಕ ವಸ್ತುವನ್ನು ಪ್ರೀತಿಸಬೇಕೆಂದಿಲ್ಲ ಅಥವಾ ಇನ್ನೊಂದನ್ನು ದ್ವೇಷಿಸಬೇಕೆಂದಿಲ್ಲ. ಸತು ಹಾಗೂ ದುರ್ಬಲ ಜಲಜನಕ, ಹಾಗೂ ಕ್ಲೋರಿನ್ ಸಂಯುಕ್ತ ಆಮ್ಲವನ್ನು ಒಟ್ಟುಗೂಡಿಸಿ ಜಲಜನಕ ಉತ್ಪಾದಿಸಿದರೆ ಅದನ್ನು ಆತ ನೀತಿ ಬಾಹಿರವೆಂದು ಭಾವಿಸುವುದಿಲ್ಲ. ಹೀಗೆ ಪ್ರಾಕೃತಿಕ ವಿಜ್ಞಾನಗಳಲ್ಲಿ ಅವಲೋಕನೆ ವಸ್ತು ನಿಷ್ಟತೆ ಸಾಧ್ಯ. ಆದರೆ ಸಮಾಜ ಶಾಸ್ತ್ರಜ್ಞನಿಗೆ ಈ ಅದೃಷ್ಟ ಲಭ್ಯವಿಲ್ಲ. ಕಾರಣ ಯಾವಾಗಲೂ ಅವನು ಒಂದಲ್ಲ ಒಂದು ರೀತಿಯಲ್ಲಿ ತಾನು ಅಧ್ಯಯನ ಮಾಡುವ ವಿಷಯದ, ಬೇರ್ಪಡಿಸಲಾಗದ ಭಾಗವಾಗಿರುತ್ತಾನೆ. ಅವನು ''ಅವಲೋಕಿಸುವವನೂ, ಅವಲೋಕನಕ್ಕೆ ಒಳಪಡುವವನೂ ಆಗಿರುತ್ತಾನೆ'' ಅವನಿಗೆ ವಸ್ತು ನಿಷ್ಟತೆ ಎನ್ನುವುದು ಸಾಧಿಸಬೇಕಾದ ಗುರಿಯೇ ಹೊರತು, ಅವನ ವೈಜ್ಞಾನಿಕ ಸಂಶೋಧನೆಯಲ್ಲಿ ಇರುವ ಒಂದು ಸ್ಥಿರವಾದ ಸ್ಥಿತಿಯಲ್ಲ. ಸಂಶೋಧಕನು ಸಹ ತನ್ನ ಸಂಸ್ಕೃತಿಯ ಶಿಶುವಾಗಿರುವುದರಿಂದ ಅವನು ಪ್ರಜ್ಞಾ ಪೂರ್ವಕವಾಗಿ ಅಥವಾ ಅಪ್ರಯತ್ನವಾಗಿ ಅದಕ್ಕೆ ತಕ್ಕಂತೆ ಹೊಂದಿಕೊಂಡು ವರ್ತಿಸುತ್ತಾನೆ.

### 1.3.3 ಪ್ರಯೋಗಶಾಲೆ ವಿಧಾನ ಬಳಸಲು ತೊಂದರೆಗಳು

ಪ್ರಾಕೃತಿಕ ವಿಜ್ಞಾನಗಳಲ್ಲಿ ಪ್ರಯೋಗ ಶಾಲೆಗಳಲ್ಲಿ ನಿರ್ಣಾಯಕ ಪ್ರಯೋಗಗಳನ್ನು ನಡೆಸುವುದು ಸಾಧ್ಯ. ಪ್ರಾಕೃತಿಕ ವಿಜ್ಞಾನಿ ಒಂದು ಪ್ರಯೋಗ ಶಾಲೆ ಮತ್ತು ನಿರ್ಧಿಷ್ಟ ಉಪಕರಣಗಳನ್ನು ಬಳಸಿ ನಿಯಂತ್ರಿತ ಪ್ರಯೋಗಗಳ ಮೂಲಕ ತಾನು ನಿರೂಪಿಸುವ ಉಪಕಲ್ಪನೆಗಳನ್ನು ಪರೀಕ್ಷಿಸಬಲ್ಲ. ಆದರೆ ಸಮಾಜ ಶಾಸ್ತ್ರಜ್ಞನು ಅಧ್ಯಯನ ಮಾಡುವ ವಿಷಯಗಳು ಬಹು ಮಟ್ಟಿಗೆ ಹಿಡಿತಕ್ಕೆ ಸಿಕ್ಕುವ ಮತ್ತು ಸ್ಪಷ್ಟವಾದ ಬಾಹ್ಯ ವಸ್ತುಗಳಲ್ಲ ಅಥವಾ ಇಂದ್ರಿಯಗಳ ಮೂಲಕ ನೇರವಾಗಿ ಗುರುತಿಸಲು ಸಾಧ್ಯವಾಗುವಂಥಹ ವಿಷಯಗಳಲ್ಲ. ಸಮಾಜ ಶಾಸ್ತ್ರಜ್ಞನು ತನ್ನ ಪ್ರಯೋಗ ಶಾಲೆಯಲ್ಲಿ ತನ್ನ ಅಧ್ಯಯನ ಘಟಕಗಳನ್ನು ಪ್ರತ್ಯೇಕಿಸಲಾರ. ಪ್ರಯೋಗ ಶಾಲೆಗಳಲ್ಲಿ ಸಂಪ್ರದಾಯ, ಆಚಾರ, ವಿಚಾರಗಳನ್ನು ಅಧ್ಯಯನ ಮಾಡುವುದು ಸಾಧ್ಯವಿಲ್ಲ. ಅವನು ಮಾನವರನ್ನು ಗಿನಿಪಿಗ್ ತರಹ ಪ್ರಯೋಗ ಶಾಲೆಯಲ್ಲಿ ಇಟ್ಟು ಪರೀಕ್ಷಿಸಲಾರ. ವ್ಯಕ್ತಿ ತಾನು ಪ್ರಯೋಗದ ವಿಷಯವಾಗಿರುವುದು ತಿಳಿದಾಗ ಸಹಜ ರೀತಿಯಲ್ಲಿ ವರ್ತಿಸಬಹುದು. ವ್ಯಕ್ತಿ ಒಂದು ಸಣ್ಣ ಸಮೂಹದಲ್ಲಿ ಒಂದು ರೀತಿ ವರ್ತಿಸುತ್ತಾನೆ. ಹಾಗೂ ಒಂದು ದೊಡ್ಡ ಸಮೂಹದಲ್ಲಿ ಒಂದು ರೀತಿ ವರ್ತಿಸುತ್ತಾನೆ. ಆದ್ದರಿಂದ ವ್ಯಕ್ತಿಗಳನ್ನು ಹಾಗೂ ಸಮೂಹಗಳನ್ನು ಅವಲೋಕಿಸುವಾಗ ಸಮಾಜ ಶಾಸ್ತ್ರಜ್ಞಾನ ಅತ್ಯಂತ ಜಾಗರೂಕವಾಗಿರಬೇಕು.

### 1.3.4 ಪರಿಕಲ್ಪನೆಗಳ ಬಳಕೆ

ಸಮಾಜ, ಸಮುದಾಯ, ಸಂಸ್ಕೃತಿ, ಸ್ಥಾನಮಾನ, ಪಾತ್ರ ಹಾಗೂ ಮನೋಭಾವ ಮುಂತಾಗಿ ಸಮಾಜಶಾಸ್ತ್ರದಲ್ಲಿ ಬಳಸಲಾಗುವ ಅನೇಕ ಪದಗಳನ್ನು ದೈನಂದಿನ ನುಡಿಗಳಲ್ಲಿ ಸಾಮಾನ್ಯ ಜನರು ಬಳಸುವುದನ್ನು ನಾವು ಕಾಣಬಹುದು. ಜನಬಳಕೆಯಲ್ಲಿ ವಿವಿಧ ಜನರು ಅವುಗಳಿಗೆ ವಿವಿಧ ಅರ್ಥವನ್ನು ಕೊಡುತ್ತಾರೆ. ಉದಾಹರಣೆಗೆ ಸಂಸ್ಕೃತಿ ಎಂಬ ಪದಕ್ಕೆ ಜನ ಸಾಮಾನ್ಯರ ಪ್ರಕಾರ ಲಲಿತ ಕಲೆಗಳು ಎಂದಾಗಬಹುದು. ಆದರೆ ಸಮಾಜ ಶಾಸ್ತ್ರಜ್ಞರ ಪ್ರಕಾರ ಸಂಸ್ಕೃತಿ ಎಂದರೆ ''ಪರಿಸರದ ಇಲ್ಲಾ ಮಾನವ ನಿರ್ಮಿತ ಅಂಶ ಎಂದರೆ ''ಪರಿಸರದ ಎಲ್ಲಾ ಮಾನವ ನಿರ್ಮಿತ ಅಂಶ'' ಹಾಗೂ ಅವನ ಎಲ್ಲಾ ಸಾಧನೆಗಳು ಎಂದಾಗುತ್ತದೆ. ಹಾಗೆಯೆ ಮುಷ್ಕರದ ಸಮಯದಲ್ಲಿ ''ನ್ಯಾಯ'' ಎಂಬ ಪದಕ್ಕೆ ಮಾಲೀಕ ಒಂದು ಅರ್ಥವನ್ನು ನೀಡಿದರೆ ಕಾರ್ಮಿಕ ಅದಕ್ಕೆ ಸಂಪೂರ್ಣ ವಿರುದ್ಧವಾದ ಅರ್ಥವನ್ನು ಕೊಡುತ್ತಾನೆ. ಆದ್ದರಿಂದ ಸಮಾಜ ಶಾಸ್ತ್ರ ಬಳಸುವ ಭಾವ ರೂಪಗಳನ್ನು ವೈಜ್ಞಾನಿಕವಾಗಿ ಗ್ರಾಹ್ಯವಾಗುವಂತೆ ಮಾಡಬೇಕು. ಅಂದರೆ ವೈಜ್ಞಾನಿಕ ರೀತಿಯಲ್ಲಿ ಅರ್ಥವಾಗುವಂತೆ ರೂಪಿಸಬೇಕು ಮತ್ತು ಸಮಾಜ ಶಾಸ್ತ್ರ ಗಣಿತವನ್ನು ತನ್ನ ಭಾಷೆಯನ್ನಾಗಿ ಅಂಗೀಕರಿಸಿದಾಗ ಅದು ನಿಜವಾದ ವಿಜ್ಞಾನವಾಗಿ ಬೆಳೆಯಬಲ್ಲದು.

### 1.3.5 ಭವಿಷ್ಯೋಕ್ತಿ ನುಡಿ ಅಸಾಧ್ಯ

ಪ್ರಾಕೃತಿಕ ವಿಜ್ಞಾನಿ ವೈಜ್ಞಾನಿಕ ವಿಧಾನಗಳ ಮೂಲಕ ಕೆಲವಾರು ವಿಷಯಗಳ ಬಗ್ಗೆ ಭವಿಷ್ಯೋಕ್ತಿ ನೀಡಬಲ್ಲ. ಉದಾಹರಣೆಗೆ ಚಂದ್ರ ಗ್ರಹಣ, ಸೂರ್ಯಗ್ರಹಣ, ಋತುಗಳು ಮುಂತಾದವುಗಳ ಬಗ್ಗೆ ನಿಖರವಾಗಿ ಹೀಗೆ ಎಂದು ಹೇಳಬಲ್ಲ. ಬೆಂಕಿಗೆ ಕೈ ಹಾಕಿದರೆ ಸುಡುತ್ತದೆ ಎಂಬುದಕ್ಕೆ ಯಾರು ಬೇಕಾದರೂ ಮೊದಲೆ ಹೇಳಬಹುದು. ಆದರೆ ಸಾಮಾಜಿಕ ಘಟನೆಗಳ ಬಗ್ಗೆ ನಿಖರವಾಗಿ ಭವಿಷ್ಯ ನುಡಿಯಲು ಸಾಧ್ಯವಿಲ್ಲ. ಯಾವಾಗ ವಿದ್ಯಾರ್ಥಿಗಳು ಅಥವಾ ಕಾರ್ಮಿಕರು ಮುಷ್ಕರ ಹೂಡುತ್ತಾರೆ, ಯಾವಾಗ ಕೋಮುಗಲಬೆಗಳಾಗುತ್ತವೆ, ಯಾವಾಗ ಯುದ್ಧಗಳಾಗುತ್ತವೆ ಎಂದು ನಿಖರವಾಗಿ ಹೇಳಲು ಸಮಾಜ ಶಾಸ್ತ್ರಜ್ಞನಿಗೆ ಸಾಧ್ಯವಿಲ್ಲ.

ಹೀಗೆ ಸಮಾಜಶಾಸ್ತ್ರ ತಾನು ನಡೆಸುವ ಸಂಶೋಧನೆಯಲ್ಲಿ ಕೆಲವು ತೊಂದರೆಗಳನ್ನು ಎದುರಿಸಬೇಕಾಗುತ್ತದೆ ಹಾಗೂ ಇದು ಪ್ರಾಕೃತಿಕ ವಿಜ್ಞಾನಗಳಂಥ ಒಂದುನಿಖರವಾದ ಶುದ್ಧ ವಿಜ್ಞಾನವಲ್ಲ ಎಂಬುದು ನಿಜವಾದ ಸಂಗತಿ ಆದರೂ ಸಮಾಜ ಶಾಸ್ತ್ರವೂ ಕೂಡ ಸಾಮಾಜಿಕ ಸಂಗತಿಗಳನ್ನು ಅರಿಯುವಲ್ಲಿ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸುವುದರಿಂದ ಇದೂ ಕೂಡ ಒಂದು ವಿಜ್ಞಾನವೇ ಆಗಿದೆ. ಯಾವುದೇ ವಿಜ್ಞಾನವನ್ನು ಅದು ಅನುಸರಿಸುವ ವಿಧಾನದ ಆಧಾರ ಮೇಲೆ ವಿವರಿಸಬಾರದು. ಪ್ರತಿಯೊಂದು ವಿಜ್ಞಾನವೂ ತನ್ನದೇ ಆದ ವಿಧಾನ ಮತ್ತು ಸಾಧನಗಳನ್ನು ಬೆಳೆಸಿಕೊಂಡಿರುತ್ತದೆ. ಇತ್ತೀಚಿಗೆ ಸಮಾಜ ಶಾಸ್ತ್ರಜ್ಞರ ಒಲವು ''ಕಾರ್ಯಕ್ಷೇತ್ರದ'' ಕಡೆಗಿದೆ. ಆರಾಮ ಕುರ್ಚಿಯಲ್ಲಿ ಕುಳಿತು ಚಿಂತನೆ ಮಾಡುವ, ಕೇವಲ ಸಿದ್ಧಾಂತಿಯಾಗಿರುವ ಸಮಾಜ ಶಾಸ್ತ್ರಜ್ಞರಿಗೆ ಇಂದು ಹೆಚ್ಚು ಗೌರವವಿಲ್ಲ. ''ರಂಗಕ್ಕೆ ಹೋಗಿ ಅಥವಾ ಕಾರ್ಯಕ್ಷೇತ್ರಕ್ಕೆ ತೊಡಗಿ'' ಎಂಬ ಕೂಗು ಇತ್ತೀಚಿಗೆ ಹೆಚ್ಚು ಜನ ಪ್ರಿಯವಾಗುತ್ತಿದೆ. ಕಾರ್ಯಕ್ಷೇತ್ರವೆಂದರೆ ವಿಷಯಗಳ ಪ್ರತ್ಯಕ್ಷ ಅವಲೋಕನ ಅಥವಾ ಸಂಗ್ರಹಣೆ. ಸಮಾಜ ಶಾಸ್ತ್ರ ಸಾಮಾಜಿಕ ಅಂಶಗಳನ್ನು ನಿಖರವಾಗಿ ವಿಶ್ಲೇಷಿಸಬೇಕಾದರೆ ಪ್ರಶ್ನಾವಳಿ, ಸಂದರ್ಶನ ಮುಂತಾದ ಅನೇಕ ವಿಧಾನಗಳನ್ನು ಬಳಸುತ್ತಿದೆ. ಹೀಗೆ ಸಮಾಜ ಶಾಸ್ತ್ರ ವಿಜ್ಞಾನ ಎಂಬ ಪದದಲ್ಲಿ ಅಡಕವಾಗಿರುವ ಸಪ್ರಮಾಣತೆಯ ಅವಶ್ಯಕತೆಗಳನ್ನು ನೆರವೇರಿಸುವ ವೈಜ್ಞಾನಿಕ ಅಧ್ಯಯನವಾಗಿದೆ. ಸಮಾಜ ಶಾಸ್ತ್ರೀಯ ಅಧ್ಯಯನ ವೈಜ್ಞಾನಿಕ ಅವಲೋಕನ ಮತ್ತು ವಿಶ್ಲೇಷಣೆ, ವಸ್ತು ನಿಷ್ಪತೆ ಮತ್ತು ವರ್ಣನಾತ್ಮಕ ವಾಸ್ತವಾಂಶ ಸಂಗ್ರಹಣೆ ತುಲನೆ ಮತ್ತು ಮೌಲ್ಯ ಮಾಪನ ಇತ್ಯಾದಿ ವಿಧಾನಗಳನ್ನು ಅನುಸರಿಸುತ್ತದೆ. ಸಮಾಜಶಾಸ್ತ್ರ ಸಾಮಾಜಿಕ ಸತ್ಯಾಂಶಗಳು ಹೇಗಿರುತ್ತವೋ ಹಾಗೆಯೇ ಅವುಗಳ ಬಗ್ಗೆ ಅಧ್ಯಯನ ಮಾಡುವುದರಿಂದ ಇದು ನಿರುಪಾಧಿಕ(catesoricol) ಶಾಸ್ತ್ರವಾಗಿದೆಯೇ ಹೊರತು ಪ್ರಾಮಾಣಿಕ ವಿಜ್ಞಾನವಲ್ಲ. ಸಮಾಜಶಾಸ್ತ್ರ ಒಂದು ಸಾಪೇಕ್ಷವಾದ (ಅಮೂರ್ತ-abstract) ಶಾಸ್ತ್ರವಾಗಿದೆ. ಸಮಾಜ ಶಾಸ್ತ್ರವು ಒಂದು ಅನುಭವಿಕ ಹಾಗೂ ತರ್ಕ ಸಮ್ಮತವಾದ ಶಾಸ್ತ್ರವಾಗಿದೆ.

## 1.4 ವ್ಯಾಪ್ತಿ

ಸಮಾಜಶಾಸ್ತ್ರದ ಅಧ್ಯಯನ ವಿಷಯ ಬಹು ವಿಸ್ತಾರವಾಗಿದೆ. ಒಂದು ವಿಜ್ಞಾನದ ವ್ಯಾಪ್ತಿ ಎಂದರೆ ಅದರ ಕ್ಷೇತ್ರ ವೈಶಾಲ್ಯತೆ ಅಥವಾ ಅದರ ವಿಷಯ ಕ್ಷೇತ್ರ ಎಂದರ್ಥವಾಗುತ್ತದೆ. ಸಾಧಾರಣವಾಗಿ ವಿಜ್ಞಾನಗಳಿಗೆ ತಮ್ಮ ವ್ಯಾಪ್ತಿಯನ್ನು ನಿರ್ಧಿಷ್ಟ ಸಮಸ್ಯೆ ಅಥವಾ ವಿಷಯಗಳಿಗೆ ಸೀಮಿತಗೊಳಿಸಿ ಕೊಳ್ಳುವುದು ಸಾಧ್ಯವಾದಾಗ ಆ ಪ್ರಮಾಣಕ್ಕನುಗುಣವಾಗಿ ಅವುಗಳು ಅಭಿವೃದ್ಧಿ ಹೊಂದಿದವು. ಕೆಲವು ಸಮಾಜಶಾಸ್ತ್ರಜ್ಞರು ಸಮಾಜಶಾಸ್ತ್ರ ಸಮಾಜದ ಸಕಲ ವಿಷಯಗಳನ್ನು ಅಧ್ಯಯನ ಮಾಡಬೇಕು ಎನ್ನುತ್ತಾರೆ. ಇದು ಬಹು ಅಸ್ಪಷ್ಟವಾದ ಅಭಿಪ್ರಾಯವಾಗಿದೆ. ಮತ್ತೆ ಕೆಲವರು ಸಮಾಜ ಶಾಸ್ತ್ರ ಮಾನವನ ಒಡನಾಟ, ಮಾತು ಪರಸ್ಪರ ಸಂಬಂಧ ಸಂಸ್ಥೆಗಳು, ಕಲೆ, ನೀತಿ, ಇತ್ಯಾದಿ ವ್ಯವಸ್ಥೆಗಳ ಸಮಗ್ರ ಕ್ಷೇತ್ರದ ಬಗ್ಗೆ ವಿಚಾರ ಮಾಡಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದು ಬಹು ವ್ಯಾಪಕವಾದ ಅಧ್ಯಯನ ವಿಷಯವಾಗುತ್ತದೆ. ಇನ್ನು ಕೆಲವರು ಸಮಾಜಶಾಸ್ತ್ರ ವ್ಯಕ್ತಿಗಳ ಪ್ರಜ್ಞಾಪೂರ್ವಕವಾದ ಒಡನಾಟಗಳಿಂದ ಉಂಟಾಗುವ ಸಂಬಂಧಗಳನ್ನು ಅಧ್ಯಯನ ಮಾಡಬೇಕು ಎಂಬುದಾಗಿ ಹೇಳುತ್ತಾರೆ.

ಸಮಾಜ ಶಾಸ್ತ್ರದ ವ್ಯಾಪ್ತಿಯನ್ನು ವಿವರಿಸಲು ಎರಡು ಪಂಥಗಳು ಪ್ರತಿಪಾದಿಸಲ್ಪಟ್ಟಿವೆ. ಅವು ಯಾವುವೆಂದರೆ

ಔಪಚಾರಿಕ ಪಂಥ (Formalistic or specialistic school)

ಸಮನ್ವಯ ಪಂಥ (synthetic school)

ಈ ಎರಡು ಪಂಥಗಳು ತಮ್ಮದೇ ಆದ ರೀತಿಯಲ್ಲಿ ಸಮಾಜ ಶಾಸ್ತ್ರದ ವ್ಯಾಪ್ತಿಯನ್ನು ವಿವರಿಸಿವೆ.

### 1.4.1 ಔಪಚಾರಿಕ ಪಂಥ

ಔಪಚಾರಿಕ ಪಂಥ ಅಥವಾ ಸಾಂಪ್ರದಾಯಿಕ ಪಂಥದ ಪ್ರಮುಖ ಪ್ರತಿಪಾದಕರಾದ ಜಾರ್ಜ್ ಸಿಮೆಲ್, ಸ್ಮಾಲ್, ಮಾರ್ಕ್ಸ್‌ವೆಬರ್, ವೀರ್ ಕಾಂಟ್, ವಾನ್‌ವೀಸ್, ಫರ್ಡಿನೆಂಡ್ ಟೋನಿಸ್, ಪಾರ್ಕ್ ಮತ್ತು ಬರ್ಜೆಸ್ ಮೊದಲಾದವರು. ಇವರೆಲ್ಲರೂ ಜರ್ಮನಿಯ ತತ್ವಜ್ಞಾನಿ ಕ್ಯಾಂಟಿನ ವಿಚಾರಗಳಿಂದ ಪ್ರಭಾವಿತರಾದವರೇ ಆಗಿದ್ದಾರೆ. ಇವರ ದೃಷ್ಟಿಯಲ್ಲಿ ಸಾಮಾಜಿಕ ಸಂಬಂಧಗಳ ಪ್ರಕಾರಗಳೇ ಸಮಾಜ ಶಾಸ್ತ್ರದ ವಿಷಯ ವಸ್ತು. ಇವರು ಸಮಾಜಶಾಸ್ತ್ರವನ್ನು ಇತರ ಸಮಾಜ ವಿಜ್ಞಾನಗಳಿಂದ ಭಿನ್ನವಾದುದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಸಮಾಜ ಶಾಸ್ತ್ರವು 'ಶುದ್ಧವೂ' ಮತ್ತು 'ಸ್ವತಂತ್ರವೂ' ಆದ ಶಾಸ್ತ್ರವೆಂದು ಅವರು ಪರಿಗಣಿಸುತ್ತಾರೆ.

**ಜಾರ್ಜ್ ಸಿಮೆಲ್**ರವರು ಹೇಳುವಂತೆ ಸಮಾಜಶಾಸ್ತ್ರವು ಮಾನವನ ನೈಜ ಅಥವಾ ವಾಸ್ತವಿಕ ನಡತೆಯ (Actual behaviour) ಬದಲಾಗಿ ಔಪಚಾರಿಕ ನಡತೆಯನ್ನು (Formal behaviour) ಅಧ್ಯಯನ ಮಾಡಬೇಕು.

ಸಮಾಜಶಾಸ್ತ್ರವು ಮುಖ್ಯವಾಗಿ ಸಾಮಾಜಿಕ ಸಂಬಂಧಗಳನ್ನು ಅಮೂರ್ತ ಸ್ವರೂಪವನ್ನು (abstract forms) ಮಾತ್ರ ಅಭ್ಯಸಿಸುತ್ತದೆ. ಆದರೆ ಸಾಮಾಜಿಕ ಸಂಬಂಧಗಳ ನೈಜ ಸ್ವರೂಪವನ್ನು ಅಂದರೆ ಅವು ಒಳಗೊಂಡಿರಬಹುದಾದ ಆರ್ಥಿಕ, ರಾಜಕೀಯ, ನೈತಿಕ, ಧಾರ್ಮಿಕ, ಕಲಾತ್ಮಕ ಇತ್ಯಾದಿ ಅಂಶಗಳನ್ನು ಸಮಾಜ ಶಾಸ್ತ್ರವು ಅಭ್ಯಸಿಸಬೇಕಾಗಿಲ್ಲ.

ಆದ್ದರಿಂದ, ಪ್ರತಿಯೊಂದು ಸಮೂಹದ ರಚನೆಗೆ ಕಾರಣವಾದ ಸಾಮಾಜಿಕ ಸಂಬಂಧಗಳ ಬಾಹ್ಯರೂಪದ ಅಧ್ಯಯನವು ಹೆಚ್ಚು ಪ್ರಮುಖವಾದುದೇ ಹೊರತು ಅವುಗಳ ಒಳತಿರುಳಲ್ಲ ಎಂದು ಸಿಮೆಲ್ ವಾದಿಸಿದ್ದಾನೆ. ಮಾನವ ಸಂಬಂಧಗಳ ಹೊರರೂಪ ಮುಖ್ಯವೇ ವಿನಃ ಆ ಸಂಬಂಧಗಳ ಘಟಕಾಂಶಗಳನ್ನು ಅಭ್ಯಸಿಸಬೇಕಿಲ್ಲ - ಇದು ಸಿಮೆಲ್‌ನ ವಾದ.

**ಸಿಮ್ಮೆಲ್** ಅಭಿಪ್ರಾಯದಂತೆ ಸಮಾಜಶಾಸ್ತ್ರಕ್ಕೂ ಇತರ ವಿಜ್ಞಾನಿಗಳಿಗೂ ಇರುವ ಸಂಬಂಧವು ರೇಖಾಗಣಿತ ಮತ್ತು ಭೌತ ವಿಜ್ಞಾನಗಳ ನಡುವಣ ಸಾಮ್ಯದಂತೆಯೇ ಇದೆ. ಸಮಾಜ ಶಾಸ್ತ್ರದ ವ್ಯಾಪ್ತಿಯ ಕೆಲವೇ ಸಾಮಾಜಿಕ ಸಂಬಂಧಗಳ ಮತ್ತು ಪ್ರಕ್ರಿಯೆಗಳ ಅಧ್ಯಯನಕ್ಕೆ ಸೀಮಿತವಾಗಿದೆ. ಸಿಮೆಲ್‌ರವರು ಅಂಥ ಕೆಲವು ಸಾಮಾಜಿಕ ಸಂಬಂಧಗಳನ್ನು ತಿಳಿಸಿದ್ದಾರೆ. ಅವು ಯಾವುವೆಂದರೆ ಸ್ಪರ್ಧೆ, ಪ್ರಾಬಲ್ಯ (Domination), ಅನುಕರಣೆ, ಶ್ರಮವಿಭಜನೆ, ಅಧೀನತೆ (subordination) ಇತ್ಯಾದಿ.

**ವೀರ್‌ಕಾಂಟ್** ಎಂಬಾತನು ವ್ಯಕ್ತಿ ವ್ಯಕ್ತಿಗಳನ್ನು ಪರಸ್ಪರ ಒಗ್ಗೂಡಿಸಿರುವ ಮಾನಸಿಕ ಅಂಶಗಳ ರೂಪಗಳನ್ನು ವಿಶ್ಲೇಷಿಸುವುದೇ ಸಮಾಜಶಾಸ್ತ್ರದ ಕಾರ್ಯ ಎಂದು ನುಡಿದ. ಯಾವುದೇ ಸಮಾಜದ ಸಾಮಾಜಿಕ ವ್ಯವಸ್ಥೆಯ ವಿಸ್ತಾರವಾದ ಐತಿಹಾಸಿಕ ಅಧ್ಯಯನ ಮಾಡುವುದು ಸಮಾಜ ಶಾಸ್ತ್ರದ ಉದ್ದೇಶವಲ್ಲ. ಆದರೆ ಒಂದು ನಿರ್ದಿಷ್ಟ ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡಬೇಕಾದಾಗ ಅದು ಸಾಂಪ್ರದಾಯಿಕ ಚೀನಾ ದೇಶದ ಸಾಮಾಜಿಕ ವ್ಯವಸ್ಥೆಯಿರಲಿ ಅಥವಾ ಆಧುನಿಕ ಅಮೇರಿಕಾದ ಸಮಾಜ ವ್ಯವಸ್ಥೆಯಿರಲಿ, ಅದನ್ನೊಂದು ವಿಶಿಷ್ಟ ಪ್ರಕಾರದ ಸಾಮಾಜಿಕ ಸಂಬಂಧಗಳ ರೂಪವೆಂಬುದಾಗಿ ಮಾತ್ರ ತಿಳಿಯಬೇಕೆಂದು ವೀರ್ ಕಾಂಟ್ ಸ್ಪಷ್ಟಪಡಿಸಿದ್ದಾರೆ.

**ಮ್ಯಾಕ್ಸ್ ವೆಬರ್** ಅವರ ಅಭಿಪ್ರಾಯದಲ್ಲಿ ಸಾಮಾಜಿಕ ವರ್ತನೆಯ (Social action) ಅರ್ಥ ವಿವರಣೆಯೇ ಸಮಾಜ ಶಾಸ್ತ್ರದ ಗುರಿಯಾಗಿರಬೇಕು. ಅವರು ಮಾನವನ ಸಾಮಾಜಿಕ ವರ್ತನೆ ಮತ್ತು ಸಾಮಾಜಿಕವಲ್ಲದ ವರ್ತನೆ ಇವುಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟಗೊಳಿಸಿ, ಸಾಮಾಜಿಕ ಬಾಂಧವ್ಯಗಳ ವಿಶ್ಲೇಷಣೆ ಮತ್ತು ವರ್ಗೀಕರಣಗಳು ಸಮಾಜ ಶಾಸ್ತ್ರದ ಮುಖ್ಯ ಕರ್ತವ್ಯಗಳು ಎಂದಿದ್ದಾರೆ.

**ಸ್ಮಾಲ್, ವೋನ್‌ವೀಜ್ ಹಾಗೂ ಟೋನಿಸ್** ಇವರುಗಳು ಸಹ ಬಹುತೇಕ ಇದೇ ಅಭಿಪ್ರಾಯ ವ್ಯಕ್ತಪಡಿಸಿರುವವರು. ಸಮಾಜ ಶಾಸ್ತ್ರವು ಒಂದು ವಿಶೇಷ ಸಮಾಜ ವಿಜ್ಞಾನ ಮತ್ತು ಶುದ್ಧ ವಿಜ್ಞಾನವಾಗಿದೆ. ಅದು ಸಾಮಾಜಿಕ ಸಂಬಂಧಗಳ ಬಾಹ್ಯರೂಪವನ್ನು ಅಧ್ಯಯನ ಮಾಡಬೇಕು. ಸಮಾಜಶಾಸ್ತ್ರದ ಅಧ್ಯಯನ ಕ್ಷೇತ್ರಕ್ಕೆ ಇತಿಮಿತಿಗಳಿರಬೇಕು ಎಂಬಿವೇ ಅಂಶಗಳ ಬಗ್ಗೆ ಇವರುಗಳು ಒಮ್ಮತ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಔಪಚಾರಿಕ ಪಂಥವು ಕೆಳಕಂಡ ಅಂಶಗಳ ಆಧಾರದ ಮೇಲೆ ಟೀಕೆಗೆ ಗುರಿಯಾಗಿದೆ.

ಸಮಾಜ ಶಾಸ್ತ್ರ ಮಾತ್ರ ಸಾಮಾಜಿಕ ಸಂಬಂಧಗಳನ್ನು ಅಧ್ಯಯನ ಮಾಡುವ ಏಕೈಕ ವಿಜ್ಞಾನವೆಂದು ನಂಬಿದ್ದರು. ಆದರೆ ಇತರ ವಿಜ್ಞಾನಗಳೂ ಸಾಮಾಜಿಕ ಸಂಬಂಧಗಳನ್ನು ಅಭ್ಯಸಿಸುತ್ತವೆ, ಎಂಬ ನಿಜ ಸಂಗತಿಯನ್ನು ಮರೆತಿದ್ದಾರೆ. ಉದಾಹರಣೆಗೆ ರಾಜ್ಯಶಾಸ್ತ್ರವು ಅಂತರ ರಾಷ್ಟ್ರೀಯ ಸಂಬಂಧಗಳನ್ನು ಅಧ್ಯಯನ ಮಾಡುವಾಗ ಸಂಘರ್ಷ, ಯುದ್ಧ, ವಿರೋಧ, ಒಪ್ಪಂದ ಹಾಗೂ ಅಂತರ ರಾಷ್ಟ್ರೀಯ ಸಹಕಾರ ಮುಂತಾದ ಸಂಬಂಧಗಳನ್ನು ಅಧ್ಯಯನ ಮಾಡಲೇಬೇಕು.

ಸಮಾಜ ಶಾಸ್ತ್ರ ಶುದ್ಧ ವಿಜ್ಞಾನವೆಂಬುದು ತಪ್ಪು ಕಲ್ಪನೆ, ಸಮಾಜಶಾಸ್ತ್ರವು ಒಂದು ಪ್ರತ್ಯೇಕ ವಿಜ್ಞಾನವೆಂದು, ಅದು ಇತರ ವಿಜ್ಞಾನಗಳೊಡನೆ ಸಂಬಂಧವನ್ನು ಹೊಂದಿಲ್ಲವೆಂದು ಮತ್ತು ಅದು ಒಂದು ಶುದ್ಧ ವಿಜ್ಞಾನವೆಂದು ಔಪಚಾರಿಕ ಪಂಥದವರ ಅಭಿಪ್ರಾಯ. ಆದರೆ ನಿಜ ಸ್ಥಿತಿಯಲ್ಲಿ ಯಾವುದೇ ವಿಜ್ಞಾನವು ಬೇರೆ ವಿಜ್ಞಾನಗಳಿಂದ ಪ್ರತ್ಯೇಕವಾಗಿರಲು ಸಾಧ್ಯವೇ ಇಲ್ಲ. ಸಮಾಜಶಾಸ್ತ್ರಕ್ಕೂ ಇತರ ವಿಜ್ಞಾನಗಳಿಗೂ ಪರಸ್ಪರ ಸಂಬಂಧ ಇದೆ.

ಸಾಮಾಜಿಕ ಸಂಬಂಧವನ್ನು ರೇಖಾಗಣಿತದ ಸಂಬಂಧಕ್ಕೆ ಹೋಲಿಸುವುದು ಸರಿಯಲ್ಲ. ರೇಖಾಗಣಿತ ಮತ್ತು ಭೌತಶಾಸ್ತ್ರಗಳಿರುವ ಸಂಬಂಧದ ಮಾದರಿಯಲ್ಲಿಯೇ ಸಮಾಜಶಾಸ್ತ್ರ ಮತ್ತು ಇತರ ಸಾಮಾಜಿಕ ವಿಜ್ಞಾನಗಳಿಗೆ ಸಂಬಂಧವಿದೆ ಎಂದು ಔಪಚಾರಿಕ ಪಂಥದವರ ವಾದ. ಸಾಮಾಜಿಕ ಸಂಬಂಧಗಳು ಮತ್ತು ರೇಖಾಗಣಿತದ ವಿಧಗಳು ಹೋಲಿಕೆಗೆ ಸಮಂಜಸವಾದುವುಗಳಲ್ಲ. ಏಕೆಂದರೆ ರೇಖಾಗಣಿತದ ರೇಖೆಗಳು ನಿರ್ದಿಷ್ಟವಾದ ಆಕೃತಿ ಅಥವಾ ರೂಪವನ್ನು ಹೊಂದಿವೆ. ಆದರೆ ಸಾಮಾಜಿಕ ಸಂಬಂಧಗಳಿಗೆ ಅಂತಹ ನಿರ್ದಿಷ್ಟ ರೂಪವಿರುವುದಿಲ್ಲ ಹಾಗೂ ಅವು ಬದಲಾಗುತ್ತಲೇ ಇರುತ್ತವೆ.

ಔಪಚಾರಿಕ ಪಂಥದವರು ಮಾನವ ಸಂಬಂಧಗಳ ಅಮೂರ್ತ ಪ್ರಕಾರಗಳನ್ನು (abstract forms) ಮೂರ್ತ ಅಥವಾ ವಾಸ್ತವಿಕ (Cocrete or actual) ಸಂಬಂಧಗಳ ಮಧ್ಯೆ ವ್ಯತ್ಯಾಸ ಕಲ್ಪಿಸಿದ್ದಾರೆ. ಪ್ರಸಿದ್ಧ ಸಮಾಜ ಶಾಸ್ತ್ರಜ್ಞ ಸೊರೊಕಿನ್‌ರವರು ಹೇಳುವಂತೆ ಲೋಟದ ಆಕಾರ ಬದಲಿಸದೆ ನಾವು ಅದರಲ್ಲಿ ಮದ್ಯ, ನೀರು ಅಥವಾ ಸಕ್ಕರೆ ದ್ರಾವಣವನ್ನು ತುಂಬಬಹುದು. ಆದರೆ ಸದಸ್ಯರು ಬದಲಾವಣೆಯಾದರೂ ಸಂಸ್ಥೆಯ ರೂಪ ಬದಲಾಗಲಾರದು ಎಂಬುದನ್ನು ನಾವು ಭಾವಿಸುವುದೂ ಸಾಧ್ಯವಾಗದ ಮಾತು.

ಸಮಾಜಶಾಸ್ತ್ರದ ವ್ಯಾಪ್ತಿಯನ್ನು ಸಂಕುಚಿತಗೊಳಿಸಲಾಗಿದೆ. ಅವರು ಭಾವಿಸಿರುವುದಕ್ಕಿಂತಲೂ ಸಮಾಜ ಶಾಸ್ತ್ರವು ಹೆಚ್ಚು ವಿಶಾಲವಾದ ಕ್ಷೇತ್ರವನ್ನು ಹೊಂದಿದೆ. ಅವರು ಹೇಳುವಂತೆ ಕೆಲವೇ ಬಗೆಯ ಸಂಬಂಧಗಳು ಮಾತ್ರವಲ್ಲದೆ ಮಾನವನ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದಂತೆ ಎಲ್ಲಾ ಬಗೆಯ ಸಾಮಾಜಿಕ ಸಂಬಂಧಗಳನ್ನೂ ಅದು ಅಧ್ಯಯನ ಮಾಡುವುದು.

### 1.4.2 ಸಮನ್ವಯ ಪಂಥ

ಸಮನ್ವಯವಾದದ ಪ್ರತಿ ಪಾದಕರಾದ ಡರ್ಖೀಂ, ಹಾಬ್ ಹೌಸ್ ಮತ್ತು ಸಾರೋಕಿನ್‌ರವರು ಸಮಾಜಶಾಸ್ತ್ರವು ಸಾಮಾಜಿಕ ವಿಜ್ಞಾನಗಳ ಸಮನ್ವಯದಿಂದ ಉಂಟಾಗಿದೆ. ಇದೊಂದು ಸಾಮಾನ್ಯ ವಿಜ್ಞಾನ. ಇದು ಇಲ್ಲಾ ವಿಜ್ಞಾನಗಳಿಗೆ ಮಾತೃ ಸ್ವರೂಪಿಯಾಗಿದೆ. ಇದೊಂದು ವಿಜ್ಞಾನಗಳ ವಿಜ್ಞಾನ. ಇದರಲ್ಲಿ ಎಲ್ಲಾ ವಿಷಯಗಳೂ ಅಡಕವಾಗಿವೆ. ಸಮಾಜಶಾಸ್ತ್ರವು ಎಲ್ಲಾ ವಿಜ್ಞಾನಗಳೊಡನೆಯೂ ಸಂಬಂಧವನ್ನು ಹೊಂದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

**ಹಾಬ್‌ಹೌಸ**ನು ಸಮಾಜಶಾಸ್ತ್ರದ ಕಾರ್ಯಕ್ಷೇತ್ರವನ್ನು ಮೂರು ಶಿರೋನಾಮೆಗಳಲ್ಲಿ ವಿಶ್ಲೇಷಿಸಿದ್ದಾನೆ. ಮೊದಲನೆಯದಾಗಿ, ಸಮಾಜಶಾಸ್ತ್ರ ಸಾಮಾಜಿಕ ಕ್ಷೇತ್ರದ ನಿರ್ದಿಷ್ಟಭಾಗದ ಮೇಲೆ ಕೇಂದ್ರೀಕೃತಗೊಳ್ಳಬೇಕು. ಎರಡನೆಯದಾಗಿ, ಸಾಮಾಜಿಕ ವಿಜ್ಞಾನಗಳ ಸಂಶೋಧನೆ ಮತ್ತು ಫಲಿತಾಂಶಗಳ ಸಮನ್ವಯತೆಯನ್ನು ಸಾಧಿಸಬೇಕು. ಮೂರನೆಯದಾಗಿ, ಸಂಪೂರ್ಣ ಸಾಮಾಜಿಕ ಜೀವನವನ್ನು ಅಧ್ಯಯನ ಮಾಡಬೇಕು ಎಂದು ತಿಳಿಸಿದ್ದಾರೆ.

**ಕಾರ್ಲ್ ಮ್ಯಾನ್ ಹಿಮ್**ನು ಸಮಾಜಶಾಸ್ತ್ರವನ್ನು ಸಾಮಾನ್ಯ ಸಮಾಜಶಾಸ್ತ್ರ ಮತ್ತು ಐತಿಹಾಸಿಕ ಸಮಾಜಶಾಸ್ತ್ರ ಎಂದು ಎರಡು ಭಾಗಗಳಾಗಿ ವಿಂಗಡಿಸಿದ್ದಾನೆ. ಸಾಮಾನ್ಯ ಸಮಾಜಶಾಸ್ತ್ರವು ಮೂಲ ತತ್ವಗಳನ್ನು ವಿವರಿಸಿದರೆ ಐತಿಹಾಸಿಕ ಸಮಾಜಶಾಸ್ತ್ರವು ಸಮಾಜದ ವಿಧಗಳನ್ನು ವಿವರಿಸುತ್ತದೆ ಎಂದು ಹೇಳಿದ್ದಾನೆ.

**ಡರ್ಕೀಂ ಪ್ರಕಾರ;** ಸಮಾಜ ಶಾಸ್ತ್ರದ ವ್ಯಾಪ್ತಿಯನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು.

ವ್ಯಕ್ತಿಗಳ ಜೀವನದ ಭೌಗೋಳಿಕ ಹಾಗೂ ಸಾಮಾಜಿಕ ಜೀವನಕ್ಕೂ ಇರುವ ಸಂಬಂಧ ಮತ್ತು ಅದು ಬೀರುವ ಪ್ರಭಾವ ಮತ್ತು ಜನಸಂಖ್ಯೆ ಸಮಸ್ಯೆಗಳ ಬಗ್ಗೆ ವಿಚಾರ ಮಾಡುವ **ಸಾಮಾಜಿಕ ಆಕೃತಿಯ ರಚನಾಶಾಸ್ತ್ರ**

ಮತ, ಕಾನೂನು, ನೀತಿ, ಆರ್ಥಿಕ ಚಟುವಟಿಕೆ ಹಾಗೂ ಭಾಷೆಗೆ ಸಂಬಂಧಿಸಿದ ಅಂಶಗಳನ್ನೊಳಗೊಂಡ **ಸಾಮಾಜಿಕ ಸ್ವರೂಪ ಶಾಸ್ತ್ರ**

ಸಾಮಾಜಿಕ ವಿಷಯಗಳ ಸಾಮಾನ್ಯ ಸ್ವರೂಪ ಹಾಗೂ ಹೆಚ್ಚು ವಿಶೇಷವಾಗಿರುವ ಸಾಮಾಜಿಕ ಪ್ರಕ್ರಿಯೆಗಳಲ್ಲಿ ವ್ಯಕ್ತವಾಗುವ ಸಾಮಾನ್ಯ ಸಾಮಾಜಿಕ ನಿಯಮಗಳನ್ನು ಅರಿಯಲು ಪ್ರಯತ್ನಿಸುವುದೇ **ಸಾಮಾನ್ಯ ಸಮಾಜಶಾಸ್ತ್ರ**

**ಮಾರಿಸ್ ಗಿನ್ಸ್ ಬರ್ಗ್** ಸಮಾಜಶಾಸ್ತ್ರದ ಕ್ಷೇತ್ರ ಇನ್ನು ಹೆಚ್ಚು ವ್ಯಾಪಕವಾಗಿ ಬೆಳೆಯಬೇಕೆಂದು ಹೇಳುತ್ತಾರೆ.

**ಸಾಮಾಜಿಕ ಆಕೃತಿಯ ರಚನಾ ಶಾಸ್ತ್ರವು** ಸಮಾಜ ಶಾಸ್ತ್ರದ ವ್ಯಾಪ್ತಿಗೆ ಸೇರಿಸಬಹುದಾದ ವಿಷಯಗಳ ಬಗ್ಗೆ ಅಧ್ಯಯನ ಮಾಡುವ ಮತ್ತು ಸಾಮಾಜಿಕ ರಚನೆಯ ಬಗ್ಗೆ ಅಥವಾ ಸಮೂಹ ಹಾಗೂ ಸಂಸ್ಥೆಗಳ ಬಗ್ಗೆ ಅಧ್ಯಯನ ಮಾಡುತ್ತದೆ.

**ಸಾಮಾಜಿಕ ನಿಯಂತ್ರಣವು** ಕಾನೂನು, ನೀತಿ, ಮತ್ತು ಸಂಪ್ರದಾಯ ಹಾಗೂ ಸಾಮಾಜಿಕ ನಿಯಂತ್ರಣಗಳ ಸಾಧನೆಗಳ ಬಗ್ಗೆ ವಿಚಾರ ಮಾಡುತ್ತದೆ.

**ಸಾಮಾಜಿ ಪ್ರಕ್ರಿಯೆಗಳು** ಸಹಕಾರ, ಘರ್ಷಣೆ, ಸಾಮಾಜಿಕ ಸಂಘಟನೆ ಇತ್ಯಾದಿಗಳನ್ನು ಇಲ್ಲಿ ಅಧ್ಯಯನ ಮಾಡಲಾಗುವುದು.

**ರೋಗರುಜಿನ ಶಾಸ್ತ್ರ** ಸಾಮಾಜಿಕ ಅವ್ಯವಸ್ಥೆಯ ಕಾರಣಗಳು ಮತ್ತು ಅವುಗಳ ನಿವಾರಣೋಪಾಯಗಳನ್ನು ಇಲ್ಲಿ ಚರ್ಚಿಸಲ್ಪಡುತ್ತೇವೆ.

ಸ್ಥೂಲವಾಗಿ ಸಮಾಜಶಾಸ್ತ್ರದ ಅಧ್ಯಯನ ಕ್ಷೇತ್ರವನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

ಸಮಾಜಶಾಸ್ತ್ರದ ಪ್ರಮುಖ ಆಸಕ್ತಿ ಸಮಾಜ ಶಾಸ್ತ್ರೀಯ ವಿಶ್ಲೇಷಣೆ. ಅದು ಸಮಾಜ ಶಾಸ್ತ್ರೀಯ ದೃಷ್ಟಿಕೋನದಿಂದ ಮಾನವ ಸಮಾಜ ಮತ್ತು ಸಂಸ್ಕೃತಿಯ ಬಗ್ಗೆ ಸೂಕ್ಷ್ಮ ವಿಶ್ಲೇಷಣೆ ಒದಗಿಸುತ್ತದೆ.

ಸಮಾಜಶಾಸ್ತ್ರವು ಸಮೂಹಗಳು, ಸಂಘಗಳು, ಸಂಘಟನೆಗಳ ಬಗ್ಗೆ ಆಸಕ್ತಿ ವಹಿಸುತ್ತದೆ.

ಸಮಾಜಶಾಸ್ತ್ರ ಕುಟುಂಬ ಮತ್ತು ಬಂಧುತ್ವ, ಧರ್ಮ, ವಿವಾಹ ಮುಂತಾದ ವಿವಿಧ ಬಗೆಯ ಮೂಲ ಭೂತ ಸಾಮಾಜಿಕ ಸಂಸ್ಥೆಗಳ ಹುಟ್ಟು, ಬೆಳವಣಿಗೆ, ರಚನೆ ಹಾಗು ಕಾರ್ಯಗಳ ಬಗ್ಗೆ ಅಧ್ಯಯನ ಮಾಡುತ್ತದೆ.

ಸಮಾಜಶಾಸ್ತ್ರವು ಮೂಲಭೂತ ಸಾಮಾಜಿಕ ಪ್ರಕ್ರಿಯೆಗಳಾದ ಸಹಕಾರ, ಸ್ಪರ್ಧೆ, ಸಂಘರ್ಷ ಮುಂತಾದವುಗಳಲ್ಲೂ ಆಸಕ್ತಿ ವಹಿಸಿದೆ. ಮೇಲಾಗಿ ಹೊಂದಾಣಿಕೆ, ಸ್ವಾಂಗೀಕರಣ, ಕ್ರಾಂತಿ ಮುಂತಾದ ಇತರ ಪ್ರಕ್ರಿಯೆಗಳನ್ನು ಅಧ್ಯಯನ ಮಾಡುತ್ತದೆ.

ಸಮಾಜಶಾಸ್ತ್ರವು ಪರಿಕಲ್ಪನೆಗಳು ಹಾಗೂ ಸಿದ್ಧಾಂತಗಳನ್ನು ರೂಪಿಸುತ್ತದೆ. ಸಾಮಾಜಿಕ ಸ್ತರ ವಿನ್ಯಾಸ, ಅನುವರ್ತನೆ, ಅಪವರ್ತನೆ ಮುಂತಾದ ಕಲ್ಪನೆಗಳನ್ನು ಪ್ರತಿನಿಧಿಸುತ್ತದೆ.

ಸಮಾಜಶಾಸ್ತ್ರಜ್ಞರು ವಿಶೇಷ ಅಧ್ಯಯನಗಳನ್ನು ಮಾಡುವ ಸಾಹಸಕ್ಕೂ ಕೈ ಹಾಕಿದ್ದಾರೆ. ಉದಾಹರಣೆಗೆ: ಸಾಂಸ್ಕೃತಿಕ ಸಮಾಜಶಾಸ್ತ್ರ, ಜ್ಞಾನ ಸಮಾಜ ಶಾಸ್ತ್ರ, ಸಾಹಿತ್ಯ ಸಮಾಜ ಶಾಸ್ತ್ರ ಇತ್ಯಾದಿ.

## 1.5 ಅಧ್ಯಯನದ ಉಪಯುಕ್ತತೆ

ಸಮಾಜಶಾಸ್ತ್ರದ ಅಧ್ಯಯನ ಬಹು ಮಹತ್ವದ್ದಾಗಿದೆ. ಅನೇಕರು ಸಮಾಜಶಾಸ್ತ್ರ ಒಂದು ಪ್ರಯೋಜನಕರವಾದ ವಿಜ್ಞಾನ ಎಂಬುದನ್ನು ನಂಬುವುದಿಲ್ಲ. ಕಾರಣ ಇದು ಪ್ರತಿಯೊಬ್ಬರಿಗೂ ತಿಳಿದಿರುವ ವಿಷಯದ ಬಗ್ಗೆ ಮಾತ್ರ ವಿಚಾರ ಮಾಡುತ್ತದೆ ಎಂಬುದಾಗಿ ಅವರುಗಳು ಅಭಿಪ್ರಾಯ ಪಡುತ್ತಾರೆ. ಇದು ನಡೆಸುವ ಸಂಶೋಧನೆಗಳಿಂದ ಇದರ ಬಗ್ಗೆ ವ್ಯಾಪಕವಾಗಿ ಹರಡಿರುವ ನಂಬಿಕೆಗಳು

ಸತ್ಯವಾದುವುಗಳಲ್ಲವೆಂಬುದು ಸ್ಪಷ್ಟವಾಗುತ್ತದೆ ಮತ್ತು ಇದು ಪರೀಕ್ಷಿಸುವ ಸಾಮಾಜಿಕ ವಿಚಾರಗಳು ಅಗತ್ಯವಾದುವುಗಳು ಎಂಬುದಾಗಿ ತೋರಿಬಂದರೆ, ಆಗ ಈ ಶಾಸ್ತ್ರದ ಅಧ್ಯಯನ ಕೇವಲ ಅವಿವೇಕದ ಪ್ರಯತ್ನ ಹಾಗೂ ವ್ಯರ್ಥ ಕಾರ್ಯ, ಎಂಬುದಾಗಿಯೂ ಮತ್ತು ಅನುಸರಿಸಲು ಯೋಗ್ಯವಾಗಿಲ್ಲದ ಸಂಶೋಧನಾ ಮಾರ್ಗ ಎಂಬ ಅಭಿಪ್ರಾಯಗಳು ಸರಿಯಾದುದಲ್ಲ ಎಂಬುದು ತಿಳಿಯುತ್ತದೆ. ಕಾರಣ ಸಮಾಜಶಾಸ್ತ್ರ ಖಂಡಿತವಾಗಿ ಬಹು ಉಪಯುಕ್ತವಾದ ವಿಜ್ಞಾನವೇ ಆಗಿದೆ ಎಂಬುದನ್ನು ಈ ಶಾಸ್ತ್ರವನ್ನು ಅಧ್ಯಯನ ಮಾಡುವುದರಿಂದ ಬರುವ ಲಾಭವನ್ನು ಪರಿಗಣಿಸುವುದರ ಮೂಲಕ ರುಜುವಾತು ಪಡಿಸಬಹುದು.

### 1.5.1 ನಂಬಲರ್ಹ ಜ್ಞಾನ

ನಿಸ್ಸಂದೇಹವಾಗಿ ಸಮಾಜಶಾಸ್ತ್ರದ ಅಧ್ಯಯನದಿಂದ ಸಂಪದ್ಭರಿತ ಸುಗ್ಗಿಯಂತಹ ಫಲಗಳು ಲಭ್ಯವಾಗುತ್ತವೆ. ಇದು ಒಂದು ಹೊಸ ದೃಷ್ಟಿಕೋನದಿಂದ ಸಾಮಾಜಿಕ ವಿಷಯಗಳನ್ನು ವೀಕ್ಷಿಸುತ್ತದೆ ಮತ್ತು ಇದು ಸಮಗ್ರವಾಗಿ ಸಾಮಾಜಿಕ ಜೀವನವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ''ಒಂದು ಹೊಸ ದೃಷ್ಟಿಕೋನ, ಒಂದು ನೂತನ ಹೊಂದಿಕೆ ಮತ್ತು ನಾವು ಬಾಳುತ್ತಿರುವ ಸಾಮಾಜಿಕ ಪರಿಸರದ ಬಗ್ಗೆ ಇನ್ನೂ ಹೆಚ್ಚು ನಂಬಲರ್ಹವಾದ ಅರಿವು ಇದರಿಂದ ಬರುವ ನೂತನ ಪರಿಣಾಮವಾಗುತ್ತದೆ''. ಸಮಾಜದ ಬಗ್ಗೆ ನಂಬಲರ್ಹವಾದ ಜ್ಞಾನವನ್ನು ನೀಡುವುದೇ ಸಮಾಜಶಾಸ್ತ್ರದ ಪ್ರಥಮ ಉದ್ದೇಶ. ಇದು ಸಾಮಾಜಿಕ ಜೀವನದ ವಿವಿಧ ಮುಖಗಳ ಮೇಲೆ ಬೆಳಕನ್ನು ಬೀರುತ್ತದೆ. ಇದು ನಾವು ವಾಸಿಸುತ್ತಿರುವ ಈ ಜಟಿಲ ಪ್ರಪಂಚವನ್ನು ಅರಿಯಲು ಉಪಯುಕ್ತವಾದ ಒಂದು ಹೊಸ ಮಾರ್ಗ ಹಾಗೂ ದೃಷ್ಟಿಕೋನವನ್ನು ಒದಗಿಸುತ್ತದೆ. ಇದರಲ್ಲೇ ಇದರ ಮೌಲ್ಯವನ್ನು ಕಾಣಬಹುದು.

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನದುದ್ದಕ್ಕೂ ನೂತನ ಸಾಮಾಜಿಕ ಅನುಭವಗಳನ್ನು ಗುರುತಿಸುತ್ತಾನೆ ಮತ್ತು ಅವುಗಳ ಆಧಾರದ ಮೇಲೆ ಅನೇಕ ನೂತನ ವಿಷಯಗಳನ್ನು ಕಲಿತುಕೊಳ್ಳುತ್ತಿರುತ್ತಾನೆ. ಇವುಗಳಲ್ಲಿ ಕೆಲವು ಸತ್ಯವಾದುವು, ಕೆಲವು ಅಸತ್ಯವಾದುವುಗಳು. ಸತ್ಯವೆಂಬ ಕಾಳನ್ನು ಅಸತ್ಯವಾದ ಹೊಟ್ಟಿನಿಂದ ಬೇರ್ಪಡಿಸಬೇಕಾದರೆ ಸಮಾಜಶಾಸ್ತ್ರದ ಸಹಾಯ ಅನಿವಾರ್ಯ. ಇದು ಮಾನವರ ಸಾಮಾಜಿಕ ವಿವೇಚನೆಗೆ, ಅಡ್ಡಿಯಾಗಿರುವ ತಪ್ಪು ತಿಳುವಳಿಕೆ ಮತ್ತು ಮೂಢನಂಬಿಕೆ ಎಂಬ ಕಸವನ್ನು ಗುಡಿಸಿ ಹಾಕಿ, ಚೊಕ್ಕಟ ಮಾಡಲು ಯತ್ನಿಸುತ್ತದೆ. ಹೀಗೆ ಇದು ನಮ್ಮ ಬೌದ್ಧಿಕ ದಿಗಂತವನ್ನು ವಿಸ್ತರಿಸುತ್ತದೆ. ಉದಾಹರಣೆಗೆ, ನಾವು ಒಂದು ಸರಳವಾದ ಸಮಾಜದಲ್ಲಿ ಬಾಳುತ್ತಿದ್ದರೆ ಸಂತೋಷದಿಂದಿರುತ್ತಿದ್ದೆವು ಎಂಬುದಾಗಿ ನಾವು ಹೇಳಬಹುದು. ಆದರೆ ನಾವು ಸರಳ ಸಮಾಜದ ಸದಸ್ಯರಾಗಿಲ್ಲ ಎಂಬುದು ಸರಳವಾದ ಸತ್ಯ. ಸಂಪ್ರದಾಯವನ್ನು ಕಡೆಗಣಿಸುವ ಕ್ಷಿಪ್ರವಾದ ಸಾಮಾಜಿಕ ಪರಿವರ್ತನೆ ಹಾಗೂ ಯಂತ್ರ ಕಲೆಯನ್ನು ಪ್ರಧಾನವಾಗಿ ಉಳ್ಳ ಸಮಾಜದ ಸದಸ್ಯರಾಗಿರುವುದರಿಂದ ನಾವು ಅದರ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಲೇಬೇಕು. ಒಂದು ಸಮಾಜದಲ್ಲಿ ಬಾಳಿದರೆ ಅದು ಹೇಗೆ ಕಾರ್ಯಗಳನ್ನು ನಡೆಸುತ್ತದೆ ಹಾಗೂ ಮುಂದುವರಿಯುತ್ತದೆ ಎಂಬ ವಿಷಯ ವ್ಯಕ್ತಿಗಳಿಗೆ ತಿಳಿಯುತ್ತದೆ ಎಂಬುದು ನಿಜ. ಆದರೆ ಜೀವನದ ಸಾಮಾನ್ಯ ಹವ್ಯಾಸಗಳಲ್ಲಿ ಮುಳುಗಿರುವುದರಿಂದ ಅವರು ಅನೇಕ ವಿಷಯಗಳನ್ನು ತಿಳಿದುಕೊಳ್ಳಲಾರ. ಉದಾಹರಣೆಗೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಆದರೆ ಅದು ಎಷ್ಟು ವೇಗವಾಗಿ ಹೆಚ್ಚುತ್ತಿದೆ ಮತ್ತು ಈ ಸಂಖ್ಯಾವೃದ್ಧಿಯಿಂದ ಉಚ್ಚ ಶಿಕ್ಷಣದ ಮೇಲೆ ಯಾವ ರೀತಿ ಪ್ರಭಾವ ಉಂಟಾಗುತ್ತದೆ ಎಂಬುದನ್ನು ಬಹು ಅತ್ಯಲ್ಪ ಜನರು ಅರ್ಥ ಮಾಡಿಕೊಂಡಿದ್ದಾರೆ. ಅದೇ ಪ್ರಕಾರ ನಾವು ನಮ್ಮ ಸಾಧಾರಣ ಜೀವನವನ್ನು ಅರಿತುಕೊಳ್ಳುವುದಕ್ಕಿಂತ ಹೆಚ್ಚಾಗಿ ನಾವು ನಡೆಸುತ್ತಿರುವ ಸಾಮಾಜಿಕ ಜೀವನದ ಬಗ್ಗೆ ಇನ್ನೂ ಸ್ಪಷ್ಟವಾಗಿ ತಿಳಿದುಕೊಳ್ಳಲು ಸಮಾಜಶಾಸ್ತ್ರವು ನಮಗೆ ಸಹಾಯವನ್ನು ಮಾಡುತ್ತದೆ. ಇದು ಸಮಾಜದ ಸ್ವಾಭಾವಿಕವಾದ ವಿಷಯ. ಅದು ಗುರುತ್ವಾಕರ್ಷಣ ಹಾಗೂ ವಿದ್ಯುಚ್ಛಕ್ತಿಯಷ್ಟೇ ಸ್ವಾಭಾವಿಕವಾಗಿದೆ ಎಂದು ಅರ್ಥಮಾಡಿಕೊಂಡು ಅವಲೋಕಿಸಲು ಪ್ರೋತ್ಸಾಹವನ್ನು ನೀಡುತ್ತದೆ. ಸಮಾಜ ಎಂದರೇನು ಎಂಬುದನ್ನು ಸ್ಪಷ್ಟವಾಗಿ ಅರಿತುಕೊಳ್ಳಲು ಮತ್ತು ಅದರ ಚಟುವಟಿಕೆಗಳನ್ನು ವಿವೇಕಯುತವಾಗಿ ನಿಯಂತ್ರಿಸಿ, ಕ್ರಮಪಡಿಸಿ ನಿರ್ದೇಶಿಸಲು ಮಾನವನ ಸಂಘದ ನಿಯಮಗಳನ್ನು ತಿಳಿದುಕೊಳ್ಳುವುದು ಬಹು ಅವಶ್ಯಕ. ಇಲ್ಲಿಯೂ ಕೂಡ ಸಮಾಜಶಾಸ್ತ್ರ ಉಪಯುಕ್ತವಾಗಿದೆ. ಇಂದು ಸಾಧಾರಣವಾಗಿ ಸಮಾಜಶಾಸ್ತ್ರವು ಸಮಾಜಕ್ಕೆ ಸಂಬಂಧಿಸಿದ ವಸ್ತುನಿಷ್ಠ ಜ್ಞಾನಕ್ಕೆ ಮುಖ್ಯಾಧಾರ, ಕ್ರಿಯೆಗೆ ನಂಬಲರ್ಹವಾದ ಮಾರ್ಗದರ್ಶಿ ಹಾಗೂ ಮಾನವನ ವರ್ತನೆ, ಸಂಬಂಧ ಮತ್ತು ಕ್ರಿಯೆಗಳನ್ನು ಅರಿಯಲು ಅಮೂಲ್ಯವಾದ ದೃಷ್ಟಿಕೋನವಾಗಿದೆ ಎಂಬುದಾಗಿ ಒಪ್ಪಿಕೊಳ್ಳಲಾಗಿದೆ.

### 1.5.2 ಸಾಮಾಜಿಕ ಜೀವನದ ವಿವಿಧ ಮುಖಗಳ ಬಗ್ಗೆ ಅರಿವು

ಸಮಾಜಶಾಸ್ತ್ರ ಸಾಮಜಿಕ ಜೀವನದ ವಿವಿಧ ಮುಖಗಳ ಬಗ್ಗೆ ನಿರ್ಧಿಷ್ಟವಾದ ಅರಿವನ್ನು ಒದಗಿಸುತ್ತದೆ. ಇದು ಬುಡಕಟ್ಟುಗಳ ಸಂಬಂಧಗಳು, ಕುಟುಂಬ, ಶಾಲೆ, ರಾಜ್ಯ, ಜನಸಂಖ್ಯೆ, ಸಮಾಜ ಬದಲಾಗುವ ಹಾಗೂ ಬೆಳೆಯುವ ಕ್ರಮ, ಅನುವಂಶೀಯತೆ ಹಾಗೂ ಪರಿಸರದ ಪ್ರಾಮುಖ್ಯತೆ ಇತ್ಯಾದಿ ವಿಷಯಗಳ ಬಗ್ಗೆ ಹೆಚ್ಚು ಜ್ಞಾನವನ್ನು ಪಡೆಯಲು ಸಹಾಯ ಮಾಡುತ್ತದೆ. ಇದು ಹೇಗೆ ವ್ಯಕ್ತಿಗಳು ವಾಸ್ತವವಾಗಿ ಸಮೂಹದಲ್ಲಿ ಬಾಳುತ್ತಾರೆ, ಹೇಗೆ ಸಮೂಹಗಳು ಅವರ ಮೇಲೆ ಪ್ರಭಾವವನ್ನು ಬೀರುತ್ತವೆ ಮತ್ತು ಅದಕ್ಕೆ ಬದಲಾಗಿ ಹೇಗೆ ವ್ಯಕ್ತಿಗಳು ತಮ್ಮ ಅವಶ್ಯಕತೆಗಳಿಗನುಸಾರವಾಗಿ ಅವುಗಳನ್ನು ಮಾರ್ಪಡಿಸುತ್ತಾರೆ ಎಂಬ ವಿಷಯಗಳನ್ನು ವಿವರಿಸುತ್ತದೆ. ಸಮೂಹಗಳ ಬಗ್ಗೆ ವಿಚಾರ ಮಾಡುವಾಗ ಇದು ಗಾತ್ರ, ಧ್ಯೇಯ ಇತ್ಯಾದಿಗಳ ಆಧಾರದ ಮೇಲೆ ಅನೇಕ ಭೇದಗಳನ್ನು ಗುರುತಿಸುತ್ತದೆ. ಈ ಭೇದ ಗಣನೆಯಿಂದ ಜಾತಿ, ವರ್ಗ ಅಥವಾ ಜನತೆಯ ದರ್ಜೆ ಇತ್ಯಾದಿ ಸ್ತರ ವಿನ್ಯಾಸದ ವಿಭಿನ್ನ ಬಗೆಗಳನ್ನು ವಿಭಿನ್ನ ತೆರನಾದ ಕುಟುಂಬ ಹಾಗೂ ಬೇರೆ ಬೇರೆಯಾದ ಧಾರ್ಮಿಕ ಹಾಗೂ ರಾಜಕೀಯ ಸಮೂಹಗಳನ್ನು ವಿಂಗಡಿಸುವುದಕ್ಕೆ ಸಹಾಯವಾಗುತ್ತದೆ. ''ಕೆಲವು ತರಹದ ಸಮೂಹಗಳು ಉಂಟಾಗಿ, ಮುಂದುವರಿಯಲು ಅಥವಾ ಕಣ್ಮರೆಯಾಗಲು ಕಾರಣವಾದ ಪರಿಸ್ಥಿತಿ ಹಾಗೂ ಅವುಗಳ ನಿರ್ಮಾಣ ಅಥವಾ ಅವನತಿಯ ಕಾರಣದಿಂದ ಬರುವ ಪರಿಣಾಮಗಳ ಬಗ್ಗೆ ಸಾಮಾನ್ಯೀಕರಣಗಳನ್ನು ನಿರೂಪಿಸಲು ಸಾಧ್ಯವಾಗುವಂತೆ ಮಾಡುವುದೇ ಈ ವರ್ಗೀಕರಣಗಳ ಉದ್ದೇಶ''. ಸಮಾಜಶಾಸ್ತ್ರ ವ್ಯಕ್ತಿ ವ್ಯಕ್ತಿಯ ನಡುವೆ, ಸಮೂಹ ಹಾಗೂ ವ್ಯಕ್ತಿಯ ಮಧ್ಯೆ, ಸಮೂಹ ಸಮೂಹಕ್ಕೆ ಸಂಬಂಧಗಳು ಉಂಟಾಗಲು ಹಾಗೂ ಬೆಳೆಯಲು ಕಾರಣವಾದ ಪ್ರಕ್ರಿಯೆ ಮತ್ತು ಈ ಸಂಬಂಧಗಳ ಫಲವಾಗಿ ತಲೆದೋರುವ ಸಂಸ್ಥೆಗಳ ಮೇಲೆ ಬೆಳಕನ್ನು ಬೀರುತ್ತದೆ. ಇದು ವಿಭಿನ್ನ ಬಗೆಯ ಸಾಮಾಜಿಕ ಸಂಸ್ಥೆಗಳನ್ನು ವಿಂಗಡಿಸುತ್ತದೆ, ಅವುಗಳ ಬಗ್ಗೆ ಅರ್ಥ ವಿವರಣೆಯನ್ನು ನೀಡುತ್ತದೆ. ಅವುಗಳ ಸ್ವರೂಪವನ್ನು ವಿವರಿಸುತ್ತದೆ ಮತ್ತು ಅವುಗಳು ವ್ಯಕ್ತಿಗಳನ್ನು ನಿರ್ದೇಶಿಸಿ, ಅವರ ವರ್ತನೆಯನ್ನು ಕ್ರಮಪಡಿಸಿ, ಅವರಿಗೆ ಸ್ಫೂರ್ತಿಯನ್ನು ನೀಡುವ ಕ್ರಮ ಧರ್ಮ, ನೀತಿ ಮುಂತಾಗಿ ವ್ಯವಸ್ಥಿತಗೊಳ್ಳುವ ಭಾವನೆ ಹಾಗೂ ಸಿದ್ಧಾಂತಗಳನ್ನು ವರ್ಗಾಯಿಸುವ ಬಗ್ಗೆ ಮತ್ತು ಈ ವ್ಯವಸ್ಥೆಗಳ ಪ್ರಭಾವಕ್ಕೆ ಒಳಗಾಗುವ ರೀತಿಗಳನ್ನು ವರ್ಣಿಸುತ್ತದೆ. ಈ ಸಂಸ್ಥೆಗಳು ವ್ಯಕ್ತಿಗಳಿಗೆ ಉಪಯುಕ್ತವಾದ ಸಾಮಾಜಿಕ ಸಾಧನಗಳಾಗಿವೆ ಎಂಬುದನ್ನು ಸಮಾಜಶಾಸ್ತ್ರ ಸ್ಪಷ್ಟಪಡಿಸುತ್ತದೆ. ಆದ್ದರಿಂದ ಯಾಂತ್ರಿಕ ಉಪಕರಣಗಳನ್ನು ರಿಪೇರಿ ಮಾಡಿ, ಉತ್ತಮಪಡಿಸಿ, ಅಣಿಯಾಗಿರುವ ತರಹದಲ್ಲೇ ಇವುಗಳನ್ನೂ ಯಾವಾಗಲೂ ದುರಸ್ತಿ ಮಾಡಿ ಉತ್ತಮ ಪಡಿಸಬೇಕು. ಮಾನವರ ಅವಶ್ಯಕತೆಗಳನ್ನು ಪೂರ್ಣವಾಗಿ ನೆರವೇರಿಸಬೇಕಾದರೆ ಸಂಸ್ಥೆಗಳು ತುಕ್ಕು ಹಿಡಿದ ಕಬ್ಬಿಣದಂತಿರಬಾರದು ಮತ್ತು ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ತಕ್ಕಂತೆ ಹೊಂದಿಕೊಳ್ಳಲು ಅಸಮರ್ಥವಾಗಿರಬಾರದು. ಇವುಗಳು ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವಂತಿರಬೇಕು ಮತ್ತು ಗತಿಶೀಲವಾಗಿರಬೇಕು. ಹಳೆಯವು ಎಂಬ ಒಂದೇ ಕಾರಣಕ್ಕಾಗಿ ಇವುಗಳನ್ನು ಒಪ್ಪಿಕೊಳ್ಳ ಕೂಡದು. ಸಮಾಜಶಾಸ್ತ್ರ ಒದಗಿಸುವ ಈ ಉಪಯುಕ್ತ ಜ್ಞಾನ ಅಸಾಧಾರಣವಾದ ಕೊಡುಗೆಯಾಗಿದೆ.

ಸಮಾಜಶಾಸ್ತ್ರೀಯ ಅಧ್ಯಯನಗಳ ಕ್ಷೇತ್ರ, ಸಂಸ್ಥೆ, ಸಾಮಾಜಿಕ ರಚನೆ ಇತ್ಯಾದಿ ಅನೇಕ ವಿಷಯಗಳವರೆಗೆ ವಿಸ್ತರಿಸಿರುವ ಕಾರಣ ಕೈಗಾರಿಕೆ, ಕೂಲಿಕಾರರ ಸಂಬಂಧ, ವ್ಯಾಪಾರ, ಕಾನೂನು, ಸೈನಿಕ ವ್ಯವಸ್ಥೆ ಮುಂತಾದ ಅನೇಕ ವಿಚಾರಗಳಿಗೆ ಸಂಬಂಧಪಟ್ಟ ನೂತನ ವಿಶೇಷ ಸಮಾಜ ವಿಜ್ಞಾನಗಳು ಹಿಂದೆಂದೂ ಅಧ್ಯಯನ ವಸ್ತುಗಳಾಗಿಲ್ಲದ ಸಾಮಾಜಿಕ ಜೀವನದ ಮುಖಗಳನ್ನು ಕ್ರಮಬದ್ಧವಾಗಿ ಪರೀಕ್ಷಿಸುತ್ತವೆ ಮತ್ತು ಹೀಗೆ ಸಮಾಜಶಾಸ್ತ್ರದ ಸಾಮಾನ್ಯ ಜ್ಞಾನಭಂಡಾರಕ್ಕೆ ಕೊಡುಗೆಗಳನ್ನು ನೀಡುತ್ತದೆ. ಹೀಗೆ ಸಮಾಜದ ಬಗ್ಗೆ ಇನ್ನೂ ಹೆಚ್ಚು ಸ್ಪಷ್ಟವಾದ ಚಿತ್ರವನ್ನು ಮೂಡಿಸುವುದಲ್ಲದೆ ವಾಸ್ತವಾಂಶಗಳನ್ನು ನೂತನ ಬೆಳಕಿನಲ್ಲಿ ನೋಡುವುದು ಸಾಧ್ಯವಾಗುತ್ತದೆ''. ಪ್ರತಿಯೊಂದು ಉಪಕ್ಷೇತ್ರವೂ ಸಮಾಜಶಾಸ್ತ್ರೀಯ ದೃಷ್ಟಿಕೋನ ಮತ್ತು ವಿಶ್ಲೇಷಣೆಯ ತತ್ವಗಳನ್ನು ಪುನಃ ವಿವರಿಸುತ್ತದೆ, ಸಂಸ್ಕರಿಸುತ್ತದೆ, ವಿಸ್ತರಿಸುತ್ತದೆ ಮತ್ತು 'ಕಟ್ಟ ಕಡೆಗೆ ಸಮಾಜಶಾಸ್ತ್ರೀಯ ಜ್ಞಾನದ ಪ್ರಧಾನ ಸಂಚಯಕ್ಕೆ ನೂತನ ಭಾವನೆಗಳನ್ನು ಮತ್ತು ಹೆಚ್ಚಿಕೆಯ ವಿಷಯಗಳನ್ನು ಪುನಃ ಒದಗಿಸುತ್ತದೆ'. ತಯಾರಕರು ಮತ್ತು ಪ್ರಚಾರಕರು, ವ್ಯಾಪಾರ ಹಾಗೂ ಸಶಸ್ತ್ರ ಸೇನೆಗಳ ಆಡಳಿತಗಾರರು ಮತ್ತು ಕಾರ್ಯನಿರ್ವಾಹಕರು ಮುಂತಾದವರಿಗೆ ಸಂಬಂಧಪಟ್ಟ ಗಿರಾಕಿ ಹಾಗೂ ವ್ಯವಸ್ಥೆಗಳ ನಿರ್ಧಿಷ್ಟವಾದ ಹಾಗೂ ಯಥಾರ್ಥವಾದ ಅರಿವು ಅವಶ್ಯ. ಇಲ್ಲಿ ಸಮಾಜ ಶಾಸ್ತ್ರ ಬಹು ಸಹಾಯವನ್ನು ಮಾಡುತ್ತದೆ. ಹೀಗೆ ಪಂಡಿತರಿಗಿಂತ ಹೆಚ್ಚಾಗಿ 'ವ್ಯಾವಹಾರಿಕ ವ್ಯಕ್ತಿಗೆ ಸಂಬಂಧಿಸಿದ ಕ್ಷೇತ್ರಗಳಲ್ಲೂ ಸಹ, ತಾನು ನಂಬಲರ್ಹವಾದ ವಾಸ್ತವಾಂಶ ಹಾಗೂ ವಸ್ತುನಿಷ್ಠವಾದ ವಿವರಣೆಗಳನ್ನು ಒದಗಿಸಬಲ್ಲೆವು ಎಂಬ ಸಮಾಜಶಾಸ್ತ್ರಜ್ಞರ ವಾದಗಳನ್ನು ಇಂದು ಹೆಚ್ಚಾಗಿ ಒಪ್ಪಿಕೊಳ್ಳಲಾಗುತ್ತಿದೆ. ಈ ನೂತನ ಬೆಳವಣಿಗೆಗಳ ಫಲವಾಗಿ ಇಂದು ಸಮಾಜಶಾಸ್ತ್ರಜ್ಞರ ವಾದಗಳನ್ನು ಇಂದು ಹೆಚ್ಚಾಗಿ ಒಪ್ಪಿಕೊಳ್ಳಲಾಗುತ್ತಿದೆ. ಈ ನೂತನ ಬೆಳವಣಿಗೆಗಳ ಫಲವಾಗಿ ಇಂದು ಸಮಾಜ ವಿಜ್ಞಾನಿಗಳು ವೈದ್ಯಕೀಯ ಕಾನೂನು, ವ್ಯಾಪಾರ ಮುಂತಾದ ವಿಷಯಗಳಿಗೆ

ಸಂಬಂದಪಟ್ಟ ಶಾಲೆಗಳಲ್ಲಿ ಉಪಾಧ್ಯಾಯರುಗಳಾಗಿ ಮತ್ತು ಆಸ್ಪತ್ರೆ, ಕಾರ್ಖಾನೆ, ಪೌರನಿಯೋಗ ಮತ್ತು ಸೈನ್ಯ ಸಿಬ್ಬಂದಿ ಸಂಸ್ಥೆಗಳಲ್ಲಿ ಸಂಶೋಧಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಸಾಮಾಜಿಕ ವ್ಯವಸ್ಥೆಯ ಒಳಗೇ ಇರುವ ಸಾರ್ವಜನಿಕ ಸಂಬಂಧ, ಸಮೂಹಗಳ ಪರಸ್ಪರ ಸಂಬಂಧ ಹಾಗೂ ನೈತಿಕ ಸ್ಥಿತಿ ಇತ್ಯಾದಿ ವಿಷಯಗಳ ಬಗ್ಗೆ ಅಮೂಲ್ಯವಾದ ಸಲಹೆಗಳನ್ನು ನೀಡುತ್ತಾರೆ.

### 1.5.3 ಸಮಾಜಶಾಸ್ತ್ರ - ಒಂದು ಮಾರ್ಗದರ್ಶಕ ದೃಷ್ಟಿಕೋನ

ಇಷ್ಟು ಮಾತ್ರವಲ್ಲದೆ, ವ್ಯಕ್ತಿಯ ನಿಜವಾದ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಸಮಾಜಶಾಸ್ತ್ರ ನೀಡುವ ಜ್ಞಾನ ಬಹು ಉಪಯುಕ್ತವಾಗಿದೆ. ಇದು ಒದಗಿಸುವ ಮಾರ್ಗದರ್ಶಿ ದೃಷ್ಟಿಕೋನ ನಿಜಕ್ಕೂ ಅಮೂಲ್ಯವಾದುದು. ಇದು ವ್ಯಕ್ತಿ ಹಾಗೂ ಸಮಾಜಕ್ಕಿರುವ ಬೇರ್ಪಡಿಸಲಾಗದ ಸಂಬಂಧ ಮತ್ತು ವ್ಯಕ್ತಿತ್ವದ ಆಂತರಿಕ ಮಹತ್ವ ಹಾಗೂ ಘನತೆ-ಗೌರವಗಳ ಮೇಲೆ ಬೆಳಕನ್ನು ಚೆಲ್ಲಿ ಈ ಪ್ರಮುಖ ವಿಷಯಗಳನ್ನೂ ಎಲ್ಲರ ಗಮನಕ್ಕೆ ತರುತ್ತದೆ. ವ್ಯಕ್ತಿಯು ಒಂದು ಸಾಮಾಜಿಕ ಜೀವನದ ಫಲವಾಗಿದ್ದಾನೆ ಎಂಬುದು ವಸ್ತುಸ್ಥಿತಿ. ಅಂದರೆ ಸಮಾಜವಿಲ್ಲದೆ ಅವನು ಉಳಿಯಲಾರ. ಅವನು ಸಾಮಾಜಿಕವಾಗಿ ಒಪ್ಪಲಾದ ಹಾಗೂ ಅಂಗೀಕೃತವಾದ ಕ್ರಮಗಳಲ್ಲಿ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಯತ್ನಿಸುತ್ತಾನೆ. ಅವನ ಎಲ್ಲಾ ಇಚ್ಛಾನಿಚ್ಛೆ, ಭರವಸೆ, ಮಹಾತ್ವಾಕಾಂಕ್ಷೆ ಇತ್ಯಾದಿಗಳೆಲ್ಲವುಗಳಿಗೆ ಅವನು ಸೇರಿರುವ ಸಾಮಾಜಿಕ ಜಗತ್ತು ಮೂಲಾಧಾರವಾಗಿದೆ. ಸಂಕ್ಷೇಪದಲ್ಲಿ, ಅವನು ಸಾಮಾಜಿಕವಾಗಿ ಒಪ್ಪಲಾದ ರೀತಿಯಲ್ಲಿ ವರ್ತಿಸಲು ತೊಡಗಿದಾಗ ಹಾಗೂ ಅವನ ಕಾರ್ಯರೀತಿಗೆ ಮಾರ್ಗದರ್ಶನವನ್ನು ನೀಡುವ ಮತ್ತು ಅವನ ಅಸ್ತಿತ್ವಕ್ಕೆ, ಜೀವನಕ್ಕೆ ಅರ್ಥವನ್ನು ಕೊಡುವ ಒಂದು ಸಂಸ್ಕೃತಿಯನ್ನು ತನ್ನಲ್ಲಿ ಒಳಗೊಂಡಾಗ ಅವನು ಒಬ್ಬ ಸಾಮಾಜಿಕ ಜೀವಿಯಾಗುತ್ತಾನೆ. ಹೀಗೆ ''ಮಾನವನು ಸಮಾಜದಲ್ಲಿ ತನ್ನ ನಿಜವಾದ ಸ್ವರೂಪವನ್ನು ಪಡೆಯುವ ಜೀವಿ ಮಾತ್ರವಲ್ಲ. ಅವನು ಒಂದಲ್ಲ ಒಂದು ಬಗೆಯ ಸಮಾಜದಲ್ಲಿ ಯಾವಾಗಲೂ ಬಾಳುತ್ತಿರುವ ಒಬ್ಬ ವ್ಯಕ್ತಿಯಾಗಿದ್ದಾನೆ''.

ಆದರೂ ಅವನು ಸಮಾಜದ ನಿಷ್ಕ್ರಿಯವಾದ ಒಂದು ಸಾಧನವಲ್ಲ, ಅಥವಾ ತನ್ನ ನಾಗರೀಕತೆಯ ಕಟ್ಟಳೆಗಳನ್ನು ಯಾಂತ್ರಿಕವಾಗಿ ಪರಿಪಾಲಿಸುವ ಯಂತ್ರದ ಗೊಂಬೆಯಲ್ಲ. ವ್ಯಕ್ತಿ ಹಾಗೂ ಸಮಾಜಕ್ಕಿರುವ ಬಾಂಧವ್ಯ, ಸೂತ್ರದ ಬೊಂಬೆ ಹಾಗೂ ಸೂತ್ರದ ಬೊಂಬೆಯಾಟಗಾರನಿಗಿರುವ ಸಂಬಂಧ ಒಂದೇ ಅಲ್ಲ. ದಾರವನ್ನು ಅಲ್ಲಾಡಿಸಿ ವ್ಯಕ್ತಿಯನ್ನು ಅಲ್ಲಿಂದ ಇಲ್ಲಿಗೆ ಎಳೆದಾಡುವುದು ಸಾಧ್ಯವಿಲ್ಲ. ಅವನನ್ನು ಅವನ ಸಾಮಾಜಿಕ ಸಂಬಂದಗಳಲ್ಲಿ ಸಂಗ್ರಹಿಸಿ, ವಿವರಿಸುವುದು ಸಾಧ್ಯವಿಲ್ಲ. ಕಾರಣ ಅವನಿಗೆ ವಿಶಿಷ್ಟವಾದ ವ್ಯಕ್ತಿತ್ವವಿದೆ. ಅವನಿಗೆ ಹೊಸದನ್ನು ಕಂಡುಹಿಡಿಯುವ ಹಾಗೂ ಸ್ಥಾಪಿತವಾಗಿರುವ ಕ್ರಮಗಳನ್ನು ಉಲ್ಲಂಘಿಸಿ ; ಅವುಗಳಲ್ಲಿ ಬದಲಾವಣೆಯನ್ನುಂಟುಮಾಡಿ, ಹೊಸ ರೀತಿಯನ್ನು ಆಚರಣೆಗೆ ತರುವ ಸಾಮರ್ಥ್ಯವಿದೆ ಮತ್ತು ಅವನು ತನ್ನ ಕ್ರಿಯೆಗಳ ಮೂಲಕ ತನ್ನ ಸಮಾಜದ ಹಾಗೂ ಸಂಸ್ಕೃತಿಯ ಮೇಲೆ ಹೆಚ್ಚು ಗಮನಾರ್ಹವಾದ ರೀತಿಯಲ್ಲಿ ಪ್ರಭಾವವನ್ನು ಬೀರಬಲ್ಲ ಹಾಗೂ ಅವುಗಳನ್ನು ಮಾರ್ಪಡಿಸಬಲ್ಲ. ಆದ್ದರಿಂದ ಅವನು ಕೇವಲ ಒಬ್ಬ ಪ್ರಜೆ, ಒಂದು ಕುಟುಂಬ, ಒಬ್ಬ ವ್ಯಾಪಾರಿ ಅಥವಾ ವೃತ್ತಿ ಸಂಘ, ಒಂದು ಚರ್ಚು, ಒಂದು ಕ್ಲಬ್ಬು ಅಥವಾ ಕೂಟ, ಒಂದು ರಾಷ್ಟ್ರದ ಸದಸ್ಯನು ಮಾತ್ರವಲ್ಲ ಅದಕ್ಕೂ ಹೆಚ್ಚು. ಅವನು ಒಬ್ಬ ವ್ಯಕ್ತಿಯೂ ಸ್ವಪ್ನಜೀವಿಯೂ ಆಗಿದ್ದಾನೆ ಹಾಗೂ ಸೃಷ್ಟಿಸುವವನೂ ಆಗಿದ್ದಾನೆ. ಹೀಗೆ ಸಮಾಜಶಾಸ್ತ್ರ ಮಾನವನ ನಿಜ ಸ್ವರೂಪವನ್ನು ಅರಿಯಲು ಸಹಾಯಮಾಡುತ್ತದೆ ಮತ್ತು ತನ್ನ ಶಕ್ತಿ-ಸಾಮರ್ಥ್ಯಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಬೆಳಸಿಕೊಳ್ಳಲು ಪ್ರತಿಯೊಬ್ಬ ವ್ಯಕ್ತಿಗೂ ಅವಕಾಶವನ್ನು ಒದಗಿಸಿಕೊಡುವುದರ ಅವಶ್ಯಕತೆಯನ್ನು ಎತ್ತಿ ಹಿಡಿದು, ಅದರ ಮಹತ್ವವೇನೆಂಬುದನ್ನು ಸ್ಪಷ್ಟಪಡಿಸುತ್ತದೆ. ಇದು ಸಹವಾಸಿ ಅಥವಾ ಸಾಮಾಜಿಕ ಸಂಬಂಧಗಳನ್ನುಳ್ಳ ವ್ಯಕ್ತಿಯ ಸ್ವರೂಪವನ್ನು ವಿವರಿಸುತ್ತದೆ ಮತ್ತು ವ್ಯಕ್ತಿಗಳ ಸಂಪರ್ಕದಿಂದ ಒಬ್ಬ ವ್ಯಕ್ತಿಯ ಮಾನವ ವೈಲಕ್ಷಣ್ಯ ಬೆಳಕಿಗೆ ಬರುತ್ತದೆ ಮತ್ತು ಎಷ್ಟರಮಟ್ಟಿಗೆ ಈ ಸಂಪರ್ಕಗಳ ಸಂಖ್ಯೆ ಹಾಗೂ ಉತ್ಕೃಷ್ಟತೆ ಹೆಚ್ಚಾಗಿರುತ್ತದೋ ಅಷ್ಟರಮಟ್ಟಿಗೆ ಪ್ರಾಕೃತಿಕ ಜೀವಿಯಾಗಿರುವ ಮಾನವ ನಿಜವಾದ ಮಾನವ ವೈಲಕ್ಷಣ್ಯ ಸಮಾಜಜೀವಿಯಾಗುತ್ತಾನೆ, ಎಂಬುದನ್ನು ವಿಶದಪಡಿಸುತ್ತದೆ.

### 1.5.4 ಬೌದ್ಧಿಕ ಸಾಧನಗಳು

ಸಮಾಜ ಹಾಗೂ ವ್ಯಕ್ತಿಗೆ ಸಂಬಂಧಪಟ್ಟ ವಿಷಯಗಳನ್ನು ಅರಿಯುವ ಕಾರ್ಯವನ್ನು ಸುಗಮಪಡಿಸಲೋಸುಗ ಸಮಾಜಶಾಸ್ತ್ರ ತನ್ನದೇ ಆದ ಭಾವರೂಪಗಳನ್ನು ಬೆಳೆಸಿಕೊಂಡಿದೆ ಮತ್ತು ಆ ಮೂಲಕವಾಗಿ ನಮ್ಮ ಶಬ್ದ ಭಂಡಾರವನ್ನು ವೃದ್ಧಿಪಡಿಸಲು ಕೊಡುಗೆಯನ್ನು ಕೊಡುತ್ತದೆ.

ಭಾವರೂಪವೆಂದರೆ ವಸ್ತು, ವ್ಯಕ್ತಿ, ಪ್ರಕ್ರಿಯೆ ಮತ್ತು ಸಂಬಂಧಗಳ ಒಂದು ನಿರ್ದಿಷ್ಟ ವರ್ಗಕ್ಕೆ ಸೇರಿರುವ ಎಲ್ಲಾ ಸದಸ್ಯರಿಗೆ ಅನ್ವಯವಾಗುವ ಪದ ಎಂಬುದಾಗಿ ವಿವರಿಸಲಾಗಿದೆ. ಸಮಾಜಶಾಸ್ತ್ರ ಗಣಿತ ಶಾಸ್ತ್ರೀಯ ಪರಿಭಾಷೆಯನ್ನು ಬಳಸುವ ಶಾಸ್ತ್ರಗಳಿಗೆ ಸದೃಶ್ಯವಾಗಿಲ್ಲ. ಇದು ಸಾರ್ವಜನಿಕ ವ್ಯವಹಾರದಲ್ಲಿ ಚಲಾವಣೆಯಲ್ಲಿರುವ, ಅಂದರೆ ಪ್ರಯೋಗಿಸಲಾಗುವ ಸಂಸ್ಕೃತಿ, ಸಮಾಜ, ಸಮೂಹ, ಪಾತ್ರ, ಅಂತಸ್ತು, ಕ್ರಿಯೆ, ಅಧಿಕಾರ ಇತ್ಯಾದಿ ಪದಗಳ ಆಧಾರದ ಮೇಲೆ ಒಂದು ಶಬ್ದ ಭಂಡಾರವನ್ನು ಬೆಳಸಿದೆ. ಗ್ರೀಕ್ ಮತ್ತು ಲ್ಯಾಟಿನ್ ಪದಗಳನ್ನು ಮೂಲವಾಗಿ ಉಪಯೋಗಿಸಿಕೊಂಡು ಹೊಸ-ಹೊಸ ಶಬ್ದಗಳನ್ನು ಸೃಷ್ಟಿಸುವುದಕ್ಕೆ ಬದಲಾಗಿ ಇದು ಸಾಮಾನ್ಯವಾದ ಇಂಗ್ಲಿಷ್ ಪದಗಳನ್ನೇ ತೆಗೆದುಕೊಂಡು ಅವುಗಳಿಗೆ ಹೊಸ ಅರ್ಥಗಳನ್ನು, ನೂತನ ಮಹತ್ವವನ್ನು ಕೊಡುತ್ತದೆ. ಹೀಗೆ ಇದು ಒಂದು ಹೊಸ ಶಬ್ದ ಭಂಡಾರವನ್ನು ಕೊಡುತ್ತದೆ. ಹಾಗೂ ಒಂದು ಹೊಸ ಶಬ್ದ ಭಂಡಾರವನ್ನು ಪಡೆಯಲು ಪರಿಚಿತ ಪದಗಳಾಗಿದ್ದರೂ ಸಹ, ಅವುಗಳನ್ನು ವೈಜ್ಞಾನಿಕ ಭಾವರೂಪಗಳ ಸಂಚಯವನ್ನಾಗಿ ಬೆಳಸಿ ನಮ್ಮ ಶಬ್ದ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಸಹಾಯವನ್ನು ಮಾಡುತ್ತದೆ.

ಇಷ್ಟು ಮಾತ್ರವಲ್ಲದೆ ಸಮಾಜಶಾಸ್ತ್ರ ಅಧಿಕ ಜ್ಞಾನದ ಬೆಳಕಿನತ್ತ ಕೊಂಡೊಯ್ಯಲು ಸಹಾಯಕವಾದ ಲೋಕರೂಢಿ, ಲೋಕನೀತಿ ಅಥವಾ ನೈತಿಕ ನಿಯಮ, ಸ್ವಜಾತಿವಾದ, ಔದ್ಯೋಗಿಕ ರೀತಿ ಮುಂತಾದ ನೂತನ ಪದಗಳನ್ನು ಪರಿಚಯ ಮಾಡಿಸಿಕೊಟ್ಟಿದೆ. ವರ್ಷ ವರ್ಷಕ್ಕೆ ಸಮಾಜ ಬದಲಾಗಿ ಬೆಳದಂತೆ, ಸಮಾ[illegible]ತ್ರದ ಶಬ್ದ ಭಂಡಾರವು ಸಹ ನೂತನ ಅರ್ಥಗಳಿಂದ ಕೂಡಿದ ಪರಿಚಿತ ಪದ ಹಾಗೂ ವಿಶಿಷ್ಟವಾದ ಅರ್ಥಗಳನ್ನುಳ್ಳ ಅಪರಿಚಿತ ಶಬ್ದಗಳನ್ನು ಸೇರಿಸಿಕೊಳ್ಳುತ್ತಿರುವುದರಿಂದ ಇನ್ನು ಹೆಚ್ಚು ಅಭಿವೃದ್ಧಿಯನ್ನು ಹೊಂದುತ್ತದೆ. ಸಾಮಾನ್ಯೀಕರಣಗಳನ್ನು ಅನುಮಾನಿಸಲು ಹಾಗೂ ನಿರೂಪಿಸಲು ಸಮಾಜಶಾಸ್ತ್ರೀಯ ಭಾವರೂಪಗಳು ಸಹಾಯ ಮಾಡುತ್ತವೆ. ಉದಾಹರಣೆಗೆ, ದಾರಿತಪ್ಪಿದ ವರ್ತನೆ ಎಂಬ ಭಾವರೂಪ, ಕೇವಲ ಬಾಲಾಪರಾಧಕ್ಕೆ ಮಾತ್ರವಲ್ಲ, ಜೀವನದ ಪ್ರತಿಯೊಂದು ವಿಭಾಗದಲ್ಲೂ ಕಂಡು ಬರುವ ಭ್ರಷ್ಟಾಚಾರ, ವೃತ್ತಿಯಲ್ಲಿ ತೋರುವ ಅಪ್ರಾಮಾಣಿಕತೆ, ಪರೀಕ್ಷೆಗಳಲ್ಲಿ ಮೋಸ ಮಾಡುವುದು ಮತ್ತು ಸಾಮಾಜಿಕ ಪ್ರಮಾಣಗಳಿಗೆ ವಿರೋಧವಾಗಿರುವ ಇತರ ಎಲ್ಲಾ ವ್ಯವಹಾರಗಳಿಗೂ ಅನ್ವಯವಾಗುತ್ತದೆ. ಇದು ವಿಷಯಗಳನ್ನು ವಿಶ್ಲೇಷಿಸಲು ಸಹಾಯ ಮಾಡುವುದಲ್ಲದೆ ನಮ್ಮ ಸಂಶೋಧನೆಗೆ ಸರಿಯಾದ ಮಾರ್ಗವನ್ನು ತೋರುತ್ತದೆ.

### 1.5.5 ಸಹಿಷ್ಣುತಾ ಮನೋಭಾವನೆಯ ವೃದ್ಧಿ

ಸಮಾಜಶಾಸ್ತ್ರ ಎರಡು ವಿಧವಾದ ಬಹುಮುಖ್ಯವಾದ ಜ್ಞಾನದ ಬೆಳವಣಿಗೆಗೆ ಕಾರಣವಾಗುತ್ತದೆ. ಮೊದಲನೆಯದಾಗಿ, ಇದು ನಮ್ಮ ಬಗ್ಗೆ, ಸಮಾಜ ಹಾಗೂ ಸಂಸ್ಕೃತಿಯ ಬಗ್ಗೆ ಇನ್ನೂ ಉತ್ತಮವಾದ ನಂಬಲರ್ಹವಾದ ಜ್ಞಾನವನ್ನು ಪಡೆಯಲು ಸಹಾಯ ಮಾಡುತ್ತದೆ. ಬಾಹ್ಯ ಪ್ರಕೃತಿಯನ್ನು ತನ್ನ ಇಚ್ಛೆಗೆ ತಕ್ಕಂತೆ ಬಗ್ಗಿಸುವುದರಲ್ಲಿ ಮಾನವನು ಅಸಾಧರಣವಾದ ಶಕ್ತಿಯನ್ನು ಗಳಿಸಿದ್ದಾನೆ. ಆದರೂ ಅವನು ಅಷ್ಟೇ ಪ್ರಮಾಣದಲ್ಲಿ ಸಾಮಾಜಿಕ ವಿಷಯಗಳ ಮೇಲೆ ತನ್ನ ಹತೋಟಿ ಅಧಿಕಾರಗಳನ್ನು ಹೆಚ್ಚಿಸಿಕೊಳ್ಳಲು ಶಕ್ತನಾಗಿಲ್ಲ. ಮೊದಲಿನಿಂದ ಯುಗಯುಗಗಳಲ್ಲೂ ಸಾಕ್ರಟೀಸನಂತಹ ವಿವೇಕಿಗಳು ಹಾಗೂ ವಿಜ್ಞಾನಿಗಳು ''ನಿನ್ನನ್ನು ನೀನು ಅರಿತುಕೊ'' ಎಂಬುದಾಗಿ ಮೇಲಿಂದ ಮೇಲೆ ಮಾನವನಿಗೆ ಬುದ್ಧಿವಾದವನ್ನು ಹೇಳುತ್ತಾಲೇ ಇದ್ದಾರೆ. ಆದರೂ ಮಾನವ ಈ ಉಪದೇಶಕ್ಕೆ ಅಷ್ಟಾಗಿ ಕಿವಿಕೊಟ್ಟಂತೆ ಕಾಣುವುದಿಲ್ಲ. ಕಾರಣ ಅವನು ತನ್ನ ಬಗ್ಗೆ ತಿಳಿದುಕೊಳ್ಳುವುದಕ್ಕಿಂತ ಹೆಚ್ಚಾಗಿ ಬಾಹ್ಯ ವಸ್ತುಗಳ ಬಗ್ಗೆ ಹೆಚ್ಚು ಜ್ಞಾನವನ್ನು ಗಳಿಸಿಕೊಂಡಿದ್ದಾನೆ. ಅವನು ತನ್ನ ಸ್ವರೂಪ ಹಾಗೂ ತನ್ನ ಸಹವಾಸಿಗಳ ಬಗ್ಗೆ ಅರಿತುಕೊಂಡಿರುವುದಕ್ಕಿಂತ ಹೆಚ್ಚಾಗಿ ತಾನು ಉಸಿರಾಡುವ ಗಾಳಿ, ಕುಡಿಯುವ ನೀರು ಹಾಗೂ ನಡೆದಾಡುವ ಭೂಮಿಯ ಬಗ್ಗೆ ಹೆಚ್ಚು ವಿಷಯಗಳನ್ನು ಕಲಿತು ಅರ್ಥಮಾಡಿಕೊಂಡಿದ್ದಾನೆ. ಆದರೆ ಇಂದು ಸಮಾಜಶಾಸ್ತ್ರದ ಸಹಾಯದಿಂದ ಅವನು ತನ್ನ ಬಗ್ಗೆ ವಿಶ್ವಾಸನೀಯವಾದ ತಿಳುವಳಿಕೆಯನ್ನು ಪಡೆಯುತ್ತಿದ್ದಾನೆ. ಆದಕ್ಕಾಗಿ ಸಮಾಜಶಾಸ್ತ್ರಕ್ಕೆ ಧನ್ಯವಾದಗಳು ಸಲ್ಲಬೇಕು. ಇದು ತನ್ನ ಸಮಾಜವನ್ನು ವಸ್ತುನಿಷ್ಠವಾದ ಬಗೆಯಲ್ಲಿ ವೀಕ್ಷಿಸಿ, ಅದು ಇರುವ ಅನೇಕ ಸಮಾಜಗಳಲ್ಲಿ ಒಂದಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ವ್ಯಕ್ತಿಗೆ ಸಹಾಯವನ್ನು ಮಾಡುತ್ತದೆ.

ಎರಡನೆಯದಾಗಿ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆಗಳಿಗಿಂತ ಭಿನ್ನವಾದ ಸಮಾಜ ಹಾಗೂ ಸಂಸ್ಕೃತಿಗಳನ್ನು ಹೊಂದಿರುವ ಇತರರನ್ನು ಅರ್ಥಮಾಡಿಕೊಳ್ಳಲು ಸಮಾಜವಿಜ್ಞಾನ ನಮಗೆ ಸಹಾಯವನ್ನು ನೀಡುತ್ತದೆ ಎಂಬುದು ಅಷ್ಟೇ ಗಮನಾರ್ಹವಾದ ವಿಷಯ. ಆದ್ದರಿಂದ ಇತರರನ್ನು ಅರ್ಥಮಾಡಿಕೊಳ್ಳಬೇಕಾದರೆ ಅವರ ಸಾಮಾಜಿಕ ವ್ಯವಸ್ಥೆ ಹಾಗೂ ಸಾಂಸ್ಕೃತಿಕ ಮಾದರಿಗಳನ್ನು ತಿಳಿದುಕೊಳ್ಳಬೇಕಾದುದು ಅವಶ್ಯಕ. ವಾಸ್ತವದಲ್ಲಿ ಅತ್ಯಂತ ಸರಳವಾದ ಮಟ್ಟದಲ್ಲಿ ಜಯವನ್ನು ಗಳಿಸಬೇಕಾದರೆ, ಸಮಗ್ರ ಸಾಮಾಜಿಕ ಸನ್ನಿವೇಶವನ್ನು ಅರ್ಥಮಾಡಿಕೊಳ್ಳಬೇಕಾದುದು ಅಗತ್ಯ.

ಉದಾಹರಣೆಗೆ, ಕೃಷಿಕ ಯಂತ್ರ (Tractor) ಗಳ ಮೂಲಕ ಬೇಸಾಯ ಮಾಡುವ ತಂತ್ರಗಳನ್ನು ಬೇರೆ ಬೇರೆ ಸಮಾಜಗಳಲ್ಲಿ ಜನಪ್ರಿಯವಾಗಿ ಆಚರಣೆಗೆ ತರಬೇಕಾದರೆ, ಅವುಗಳ ಜಮೀನು ವ್ಯವಸ್ಥೆ, ಇತ್ಯಾದಿಗಳ ಬಗ್ಗೆ ಅವಶ್ಯಕವಾಗಿ ತಿಳಿದುಕೊಳ್ಳಬೇಕು. ಈ ತಂತ್ರಗಳು ಇತರ ಸಮಾಜಗಳ ಸದಸ್ಯರಿಗೆ ತಿಳಿದಿರುವ ವಿಷಯಗಳಿಗೆ ಅನುಗುಣವಾಗಿದ್ದರೆ ಮಾತ್ರ ಮತ್ತು ಇರುವ ಪರಸ್ಪರ ವೈಯಕ್ತಿಕ ಸಂಬಂಧಗಳ ಮಾದರಿಗಳನ್ನು ಸ್ಥಾನಪಲ್ಲಟಮಾಡದೇ ಇದ್ದರೆ ಮಾತ್ರ ಆ ಸಮಾಜಗಳನ್ನು ಒಪ್ಪಿಕೊಂಡು ಅನುಸರಿಸುತ್ತವೆ. ಸಮಾಜಶಾಸ್ತ್ರ ಇತರ ಸಮಾಜಗಳ ಬಗ್ಗೆ ನಂಬಲರ್ಹವಾದ ಜ್ಞಾನವನ್ನು ಒದಗಿಸುವುದರ ಮೂಲಕ ಇತರ ಸಾಂಸ್ಕೃತಿಕ ಮೌಲ್ಯಗಳ ಬಗ್ಗೆ ಸಾಧ್ಯವಾದಷ್ಟು ಗೌರವಾದರ ಭಾವನೆಗಳನ್ನು ಬೆಳಸಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ನಾವು ನಿರಾಕರಿಸುವ ಅನೇಕ ಪದ್ಧತಿಗಳು ಇತರ ಸಮಾಜಗಳಲ್ಲಿ ಮೌಲ್ಯಗಳಾಗಿರಬಹುದು, ನಮಗೆ ಒಳ್ಳೆಯದಾಗಿರಬಹುದು, ಇತರರಿಗೆ ಕೆಟ್ಟದಾಗಿರಬಹುದು. ನಮ್ಮ ನಂಬಿಕೆ ಹಾಗೂ ಮೌಲ್ಯಗಳು ನಮಗೆ ಸರಿಯಾಗಿರುತ್ತವೆ. ಅಂದರೆ ಇತರರ ನಂಬಿಕೆ ಹಾಗೂ ಮೌಲ್ಯಗಳು ಅವರಿಗೆ ಸರಿಯಾಗಿರುತ್ತವೆ ಎಂದರ್ಥವಾಗುತ್ತದೆ.

ಹೀಗೆ ಸಮಾಜಶಾಸ್ತ್ರ ಇತರ ಸಮಾಜ ಹಾಗೂ ದೃಷ್ಟಿಕೋನಗಳ ಬಗ್ಗೆ ಸಹಿಷ್ಣುತಾ ಮನೋಭಾವವನ್ನು ಬೆಳಸಿಕೊಳ್ಳುವಂತೆ ಮಾಡುತ್ತದೆ. ಇದು ನಿಜಕ್ಕೂ ಈ ಶಾಸ್ತ್ರ ಮಾಡುವ ಅಮೂಲ್ಯವಾದ ಸೇವೆ, ನೀಡುವ ಅಪೂರ್ವ ಕೊಡುಗೆ; ಇತರರ ಮಾತನಾಡುವ, ಊಟಮಾಡುವ, ಹಾಗೂ ವರ್ತನಾಕ್ರಮಗಳು ವಿಭಿನ್ನವಾಗಿವೆ ಎಂಬ ಕಾರಣಕ್ಕಾಗಿ ಅನೇಕರು ತಮಗಿಂತ ಭಿನ್ನವಾಗಿರುವವರನ್ನು ದ್ವೇಷಿಸುತ್ತಾರೆ ಎಂಬುದಾಗಿ ಚರಿತ್ರೆ ತಿಳಿಸುತ್ತದೆ. ಆದ್ದರಿಂದ ಅವರು ತಮ್ಮ ನಂಬಿಕೆ, ಮತ ಇತ್ಯಾದಿಗಳನ್ನು ಇತರರ ಮೇಲೆ ಹೇರಲು ಪ್ರಯತ್ನಿಸುತ್ತಾರೆ. ಖಾಸಗಿ ನಿರುಂಕುಶ ಪ್ರಭುತ್ವವನ್ನು ನಡೆಸಬೇಕೆಂಬ ಈ ಚಪಲ ಮತ್ತು ಇತರರನ್ನು ತಮ್ಮ ಎರಕದ ಅಚ್ಚಿನಲ್ಲಿ ಒತ್ತಿ ಅಡಕಮಾಡಿ ಆ ಮೂಲಕವಾಗಿ ಸಹಜವಾದ ಸಾಂಸ್ಕೃತಿಕ ಅನೇಕತ್ವ ಅಥವಾ ವೈವಿಧ್ಯವನ್ನು ಜಡವಾದ ನೀರಸವಾದ ಏಕರೂಪತೆಗೆ ಬದಲಾಯಿಸಬೇಕೆಂಬ ಬಯಕೆಯ ಕಾರಣಗಳಿಂದ ಆಗಿಂದಾಗ್ಗೆ ಯುದ್ಧಗಳು ತಲೆದೋರಿವೆ. ಇತರ ನಂಬಿಕೆ, ಆಚರಣೆ ಇತ್ಯಾದಿಗಳನ್ನು ಅರ್ಥಮಾಡಿಕೊಂಡು, ಮೆಚ್ಚುಗೆ ಸೂಚಿಸಲು ಮಾಡುವ ವಾಸ್ತವಿಕ ಪ್ರಯತ್ನವೇ ಸಹಿಷ್ಣುತೆ. ಕೇವಲ ಇತರರ ಅಭಿಪ್ರಾಯಗಳ ಬಗ್ಗೆ ಮಾತ್ರವಲ್ಲ, ಅದಕ್ಕಿಂತ ಹೆಚ್ಚು ಮುಖ್ಯವಾಗಿ, ಅವರ ವಿಶೇಷ ಲಕ್ಷಣ ಹಾಗೂ ಅಸದೃಶ ಗುಣಗಳ ಬಗ್ಗೆಯೂ ಸಹ ಸಹಿಷ್ಣುತೆಯನ್ನು, ಅಂದರೆ ಮೆಚ್ಚುಗೆಯನ್ನು ತೋರಬೇಕೆಂದರ್ಥವಾಗುತ್ತದೆ. ಈ ತರಹದ ಉತ್ತಮ ಮನೋಭಾವ ನಮ್ಮ ಗುಣ ಗ್ರಹಣಶಕ್ತಿಯನ್ನು ಚುರುಕುಗೊಳಿಸುತ್ತದೆ ಮತ್ತು ನಮ್ಮ ನೆರೆಯವರ ದೃಷ್ಟಿಕೋನದ ಬಗ್ಗೆ ನಮಗಿರುವ ಗೌರವವನ್ನು ಹೆಚ್ಚಿಸುತ್ತದೆ. ಸಮಾಜಶಾಸ್ತ್ರವು ಅಂಧಾನುಕರಣೆ ಅಪಾಯಕರವಾದುದು ಎಂಬುದಾಗಿಯೂ ಸಹ ಎಚ್ಚರಿಸುತ್ತದೆ. ಪರಕೀಯ ಪದ್ಧತಿ ಹಾಗೂ ಮೌಲ್ಯಗಳನ್ನು ಗೌರವಿಸಬೇಕೆಂದರೆ, ಅವುಗಳನ್ನು ನಮ್ಮ ಸಮಾಜದಲ್ಲಿ ಅಳವಡಿಸಿಕೊಂಡು ಅನುಸರಿಸಬೇಕೆಂದರ್ಥವಲ್ಲ. ಇನ್ನೊಂದು ಸಮಾಜದ ಸಪ್ರಮಾಣತೆಯನ್ನು ಗುರುತಿಸಿ ಮನ್ನಣೆಯನ್ನು ತೋರಬೇಕೆಂದರೆ ನಮ್ಮದ್ದನ್ನು ನಿರಾಕರಿಸಬೇಕೆಂಬರ್ಥವಲ್ಲ. ನಾವು ಇತರ ಸಮಾಜಗಳಲ್ಲಿರುವ ಅತ್ಯುತ್ತಮ ಅಂಶಗಳನ್ನು ಅಳವಡಿಸಿಕೊಂಡು ನಮ್ಮ ಅಸ್ತಿತ್ವದ ಬೇಲಿಗಳನ್ನು ಬದಲಾಯಿಸಿಕೊಳ್ಳಬಹುದು. ಹೆಚ್ಚಾಗಿರುವ ಅನಾವಶ್ಯಕವಾದ ಭಾಗಗಳನ್ನು ಕತ್ತರಿಸಿ ಹಾಕಿ ಪರಿಷ್ಕರಿಸಿಕೊಳ್ಳಬಹುದು ಮತ್ತು ರೂಪಿಸಿಕೊಳ್ಳಬಹುದು. ಆದರೆ ನಮ್ಮ ಸಂಸ್ಕೃತಿಯ ಪ್ರಮುಖ ಹಾಗೂ ಪ್ರಾಣಸಂರಕ್ಷಕ ಅಂಶಗಳನ್ನು ಮರೆತು ನಮಗೆ ಪರಕೀಯವಾಗಿರುವುದನ್ನು ಅಳವಡಿಸಿಕೊಳ್ಳುವುದು ವಿವೇಕವಲ್ಲ ಎಂಬುದನ್ನು ಸಮಾಜಶಾಸ್ತ್ರ ಸ್ಪಷ್ಟಪಡಿಸುತ್ತದೆ.

ನಮ್ಮ ಸಮಾಜಗಳ ವೈಜ್ಞಾನಿಕ ಪರಿಶೀಲನೆ ಹಾಗೂ ಸಮಾಜಗಳ ತುಲನಾತ್ಮಕ ಅಧ್ಯಯನಗಳ ಮೂಲಕ ಸಮಾಜಶಾಸ್ತ್ರ, ನಮ್ಮ ಸಮಾಜದಲ್ಲಿ ವ್ಯಾಪಕವಾಗಿರುವ ವಿಷಯಗಳೇ ಸಹಜವಾದವು, ಸರಿಯಾದುವು ಎಂಬುದಾಗಿ ಭಾವಿಸುವ ಪ್ರವೃತ್ತಿ : ನಮ್ಮ ಸಮೂಹ, ನಂಬಿಕೆ ಮತ್ತು ಮೌಲ್ಯಗಳೇ ಎಲ್ಲೆಲ್ಲೂ ಮಾನವನಿಗೆ ಪ್ರಮಾಣಗಳಾಗಿವೆ. ಆದ್ದರಿಂದ ಅವುಗಳನ್ನು ಇತರರ ಮೇಲೆ ಹೊರಿಸಬೇಕೆಂಬ ಅರ್ಥವುಳ್ಳ ಸ್ವಜಾತಿವಾದ ಎಂಬುದಾಗಿ ಕರೆಯಲಾದ ಅಭಿಪ್ರಾಯ ಮತ್ತು ಅಪರಿಚಿತವಾದ ಅಥವಾ ಪರಕೀಯವಾದ ಪದ್ಧತಿಗಳು ಅಮಾನುಷವಾದುವು. ಆದ್ದರಿಂದ ಅವುಗಳನ್ನು ಅನುಸರಿಸುವವರು ಮನುಷ್ಯರಿಗಿಂತ ಕೆಳಮಟ್ಟದವರು, ಅಂದರೆ ಮಾನವರಲ್ಲ ಎಂಬ ಭಾವನೆ ಮುಂತಾದ ಆತ್ಮ ಘಾತುಕ ಅಸಹಿಷ್ಣುತೆ, ಅವಿಚಾರಾಭಿಪ್ರಾಯ ಹಾಗೂ ಸಂಕುಚಿತ ಭಾವನೆಗಳನ್ನು ಹೊರಹಾಕಿ ಸ್ವಚ್ಛಪಡಿಸಿಕೊಳ್ಳಲು ನಮ್ಮನ್ನು ಶಕ್ತರನ್ನಾಗಿಸುತ್ತದೆ. ಸಮಾಜಶಾಸ್ತ್ರೀಯ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವುದು ಎಂದರೆ, ಎಲ್ಲಾ ಪೂರ್ವಾಗ್ರಹ ಹಾಗೂ ಬೇರೂರಿರುವ ಅಭಿಪ್ರಾಯಗಳನ್ನು ಯಥೋಚಿತವಾದ ಸಂಶೋಧನೆಯ ಬೆಳಕಿನಲ್ಲಿ ಪುನಃ ಪರಿಕ್ಷಿಸುವುದು ಎಂದರ್ಥ. ಸಮಾಜಶಾಸ್ತ್ರ ನಾವು ಸಾಮಾಜಿಕ ವಿಷಯವನ್ನು ರಿಪಬ್ಲಿಕನ್ ಅಥವಾ ಡೆಮೊಕ್ರಾಟಿಕ್

ಪಕ್ಷದವರಂತೆ ಅಥವಾ ಉತ್ತರಭಾರತೀಯರು ಅಥವಾ ದಕ್ಷಿಣ ಭಾರತೀಯರಂತೆ ನೋಡಬಾರದು. ಆದರೆ ಬೇರೊಂದು ಗ್ರಹದಲ್ಲಿ ಕುಳಿತು ಈ ಭೂಲೋಕದ ಪಂಥ ಹಾಗೂ ಪದ್ಧತಿಗಳನ್ನು ವೀಕ್ಷಿಸುವ ಯಾವ ವಿಧವಾದ ಪೂರ್ವಾಗ್ರಹಗಳು ಇಲ್ಲದೆ, ತೆರೆದ ಬುದ್ಧಿ ಹಾಗೂ ಉದಾರ ಹೃದಯವುಳ್ಳ ವ್ಯಕ್ತಿಗಳಂತೆ ಅವಲೋಕಿಸಬೇಕು ಎಂಬುದಾಗಿ ನಮಗೆ ಭೋದಿಸುತ್ತದೆ. ಬಣ್ಣ ಮತ್ತು ವರ್ಗ, ಮತ ಹಾಗೂ ಪ್ರದೇಶ ಮುಂತಾದ ಅಂಶಗಳ ಮೇಲೆ ಆಧಾರಿತವಾಗಿರುವ ಸಂಕುಚಿತ ಪ್ರಾಂತಾಭಿಮಾನವೆಂಬ ಬಲೆಯಿಂದ ಬಿಡಿಸಿಕೊಳ್ಳಲು ನಮಗೆ ಸಹಾಯಮಾಡುತ್ತದೆ. ಇಂದು ಯಾವ ಸಮಾಜವೂ ಜಡವಾಗಿರಲಾರದು. ನಾವು ಸತತವಾಗಿ ಇತರ ವಿಭಿನ್ನ ಪದ್ಧತಿ, ಮೌಲ್ಯ ಹಾಗೂ ನಂಬಿಕೆಗೆ ಪ್ರಭಾವಕ್ಕೆ ಗುರಿಯಾಗುತ್ತಿದ್ದೇವೆ. ಈ ಪ್ರಭಾವದ ಕಾರಣ ನಾವು ನಮ್ಮ ಪದ್ಧತಿ, ಮೌಲ್ಯ, ನಂಬಿಕೆ, ಸಂಸ್ಕೃತಿ ಇತ್ಯಾದಿಗಳನ್ನು ಪಕ್ಷಪಾತವಿಲ್ಲದ ದೃಷ್ಟಿಯಿಂದ ನೋಡಿ ಅವುಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ಸಮಾಜಶಾಸ್ತ್ರ ಒದಗಿಸುವ ಒಂದು ನೂತನ ದೃಷ್ಟಿಕೋನವನ್ನು ಅಳವಡಿಸಿಕೊಂಡು ನಾವು ನಮ್ಮ ಸಮಾಜವನ್ನು ಇನ್ನೂ ಹೆಚ್ಚು ನಿಷ್ಪಕ್ಷಪಾತವಾದ ಕ್ರಮದಲ್ಲಿ ವೀಕ್ಷಿಸಬಲ್ಲೆವು. ವಸ್ತು ನಿಷ್ಠ ಹಾಗೂ ವಿಮರ್ಶಾತ್ಮಕ ದೃಷ್ಟಿಯನ್ನು ಬೆಳಸಿಕೊಳ್ಳಬಲ್ಲವು ಮತ್ತು ಸಮಾಜದಲ್ಲಿ ಮಾತ್ರವಲ್ಲದೆ ವಿಶ್ವ ಸಮುದಾಯದಲ್ಲಿ ಪರಿಣಾಮಕಾರಿಯಾದ ಹಾಗೂ ಜವಾಬ್ದಾರಿಯುತವಾದ ಪೌರತನ ಅಥವಾ ಸದಸ್ಯತ್ವವನ್ನು ಪಡೆಯಲು ತಕ್ಕ ತರಬೇತಿಯನ್ನು ಪಡೆದುಕೊಳ್ಳಬಲ್ಲವು.

### 1.5.6 ಸಮಾಜಶಾಸ್ತ್ರದ ವ್ಯಾವಹಾರಿಕ ಮೌಲ್ಯ

ಹೀಗೆಂದರೆ '' ಇನ್ನೂ ಹೆಚ್ಚಿನ ಅರಿವು'' ಮತ್ತು ''ಸಮಸ್ಯೆಗಳನ್ನು ಎದುರಿಸಲು ಇನ್ನೂ ಹೆಚ್ಚು ಪರಿಣಾಮಕಾರಿಯಾದ ಕ್ರಮ'' ಎಂಬುದಾಗಿ ಮತ್ತೊಂದರ್ಥವಾಗುತ್ತದೆ. ಸಮಾಜಶಾಸ್ತ್ರ ಇಂದು ಪ್ರಾಕೃತಿಕ ಶಾಸ್ತ್ರಗಳಲ್ಲಿ ಸಾಧ್ಯವಾಗಿರುವ ಅದೇ ವೈಜ್ಞಾನಿಕ ನಿಯಂತ್ರಕ ಶಕ್ತಿಯನ್ನು ಪಡೆಯಬೇಕೆಂದು ಮತ್ತು ಅದಕ್ಕಿಂತ ಮುಖ್ಯವಾಗಿ, ಈ ನಿಯಂತ್ರಣಗಳನ್ನು ಸಮಸ್ತ ಜನಹಿತಕ್ಕಾಗಿ ಉಪಯೋಗಿಸಬೇಕೆಂಬ ಉದ್ದೇಶ ಸಾಧನೆಗೆ ಸಹಾಯ ಮಾಡುತ್ತದೆ. ಈ ಮಹತ್ಕಾರ್ಯದಲ್ಲೇ ಸಮಾಜ ಶಾಸ್ತ್ರದ ನಿಜವಾದ ಬೆಲೆ ಏನೆಂಬುದು ಸ್ಪಷ್ಟವಾಗುತ್ತದೆ. ಸಾಮಾಜಿಕ ಕಾಯಿಲೆ ಹಾಗೂ ಅವುಗಳ ಕಾರಣಗಳ ವೈಜ್ಞಾನಿಕ ಅನ್ವೇಷಣೆ ಮತ್ತು ವೈಜ್ಞಾನಿಕ ತತ್ವಗಳ ಬೆಳಕಿನಲ್ಲಿ ರೋಗಗಳನ್ನು ಪರಿಹರಿಸುವ ಪ್ರಯತ್ನಗಳ ಮೂಲಕ ಸರ್ವರ ಕಲ್ಯಾಣವನ್ನು ಸಾಧಿಸುವುದರಲ್ಲಿ ಸಮಾಜಶಾಸ್ತ್ರದ ವ್ಯವಹಾರಿಕ ಉಪಯುಕ್ತತೆಯನ್ನು ಕಾಣಬಹುದು. ಆ ಮೂಲಕವಾಗಿ ಸಮಾಜಶಾಸ್ತ್ರದ ತತ್ವಗಳ ವ್ಯವಹಾರಿಕ ಪ್ರಯೋಗಗಳನ್ನು ಕಾಣಬಹುದು. ಸಮಾಜಶಾಸ್ತ್ರವು ಅಪರಾಧ, ಬಾಲಾಪರಾಧ, ಕುಡಿತ, ಲೈಂಗಿಕ ಅಪಚಾರ ಇತ್ಯಾದಿ ಸಾಮಾಜಿಕ ರೋಗಗಳ ಬಗ್ಗೆ ವೈಜ್ಞಾನಿಕ ಜ್ಞಾನವನ್ನು ಒದಗಿಸಿದೆ ಮತ್ತು ಈ ಸಮಸ್ಯೆಗಳ ಮೂಲಭೂತ ಸ್ವರೂಪವನ್ನು ಸ್ಪಷ್ಟಪಡಿಸಲು ಮತ್ತು ಯುಕ್ತವಾದ ಪರಿಹಾರಗಳನ್ನು ಸೂಚಿಸಲು ಸಮಾಜಶಾಸ್ತ್ರಜ್ಞರು ಸಮರ್ಥರಾಗಿದ್ದಾರೆ. ಈ ಕೊಡುಗೆಗಳು ನಿಜಕ್ಕೂ ಬಹು ಪ್ರಯೋಜನಕರವಾದುವುಗಳು. ಆದ್ದರಿಂದ ಸಾಮಾಜಿಕ ವಿಷಯಗಳ ಬಗ್ಗೆ ಜ್ಞಾನದ ಒಂದು ಕ್ರಮಬದ್ಧವಾದ ಸಂಚಯವನ್ನು ರಚಿಸಿ, ನಿಯಮಗಳನ್ನು ನಿರೂಪಿಸಿಬಿಟ್ಟ ಮಾತ್ರಕ್ಕೆ ಸಮಾಜಶಾಸ್ತ್ರ ತನ್ನ ಉದ್ದೇಶವನ್ನು ಸಾಧಿಸಿದಂತಾಗುವುದಿಲ್ಲ. ಇದು ಸಮಾಜವನ್ನು ಸುಧಾರಿಸುವ ದಾರಿಯನ್ನೂ ಸಹ ತೋರಬೇಕು. ''ಸಂಕ್ಷೇಪದಲ್ಲಿ, ಮೊದಲು ಸಮಾಜವನ್ನು ಅರ್ಥಮಾಡಿಕೊಳ್ಳುವುದು, ನಂತರ ಸಾಮಾಜಿಕ ಪುರೋಭಿವೃದ್ಧಿಗಾಗಿ ಒಂದು ವೈಜ್ಞಾನಿಕ ಕಾರ್ಯಕ್ರಮವನ್ನು ನಿಯೋಜಿಸಲು ನಮ್ಮನ್ನು ಸಮರ್ಥರನ್ನಾಗಿಸುವುದೇ ಸಮಾಜಶಾಸ್ತ್ರದ ಧ್ಯೇಯವೆಂಬುದಾಗಿ ನಾವು ಹೇಳಬಹುದು''. ಹೀಗೆ ಸಮಾಜಶಾಸ್ತ್ರ ಒಂದು ಸೈದ್ಧಾಂತಿಕವಾದ ಶಾಸ್ತ್ರ ಹಾಗೂ ಒಂದು ಅನ್ವಯಿಕ ವಿಜ್ಞಾನ, ಎರಡೂ ಆಗಿರುವುದು ವಿಸದವಾಗುತ್ತದೆ. ಉದಾಹರಣೆಗೆ, ಸಮಾಜಶಾಸ್ತ್ರಜ್ಞ ತನ್ನ ನೆರೆಯ ಕೊಳೆಗೇರಿಯ ಸಾಮಾಜಿಕ ರಚನೆಯ ಬಗ್ಗೆ ಮಾತ್ರ ವಿಚಾರಮಾಡಿದರೆ ಅವನು ಒಬ್ಬ ಶುದ್ಧ ತಾತ್ವಿಕನಾಗುತ್ತಾನೆ. ಆದರೆ ಅವನು ಆ ಕೊಳಚೆ ಪ್ರದೇಶದಲ್ಲಿ ಹೇಗೆ ಅಪರಾಧ ಅಥವಾ ಬಾಲಾಪರಾದವನ್ನು ನಿವಾರಿಸಬೇಕು ಎಂಬುದರ ಬಗ್ಗೆ ಅಧ್ಯಯನವನ್ನು ಕೈಗೊಂಡರೆ, ಆಗ ಅವನು ಒಬ್ಬ ಅನ್ವಯಿಕ ವಿಜ್ಞಾನಿಯಾಗುತ್ತಾನೆ.

ಹೀಗೆ ಸಮಾಜಶಾಸ್ತ್ರಜ್ಞ ಒಬ್ಬ ವಿಜ್ಞಾನಿಯಾಗಬಲ್ಲ ಮತ್ತು ಅದೇ ಸಮಯದಲ್ಲಿ ತಾನು ಸದಸ್ಯನಾಗಿರುವ ಸಮಾಜದ ಒಳಿತಿಗಾಗಿ ಕೆಲವು ಜವಾಬ್ದಾರಿಗಳನ್ನು ಒಪ್ಪಿಕೊಳ್ಳಬಲ್ಲ. ಸಮರ್ಪಕವಾಗಿರುವ ಉತ್ತರಗಳನ್ನು ನೀಡಲು ಸಾಧ್ಯವಿಲ್ಲದಂತಹ ಸಮಸ್ಯೆಗಳನ್ನು ಸೃಷ್ಟಿಸಲು ಸಹಾಯಕವಾಗಿರುವ ಹಾಗೂ ಹೆಚ್ಚುತ್ತಿರುವ ಜಟಿಲತೆಯಿಂದ ಕೂಡಿರುವ ಆಧುನಿಕ ಸಮಾಜದಲ್ಲಿ ಅವನು ನಂಬಲರ್ಹವಾದ ಜ್ಞಾನವನ್ನು ನೀಡುವ ಒಂದು ಉಪಯುಕ್ತವಾದ ಹಾಗೂ ಅವಶ್ಯಕವಾದ ಆಧಾರವಾಗಬಲ್ಲ ಹಾಗೂ ಪ್ರಧಾನವಾದ ಸಾಮಾಜಿಕ ನೀತಿಗಳಲ್ಲಿ ಆಸಕ್ತನಾಗಿರುವ ಶಾಸಕನಿಗೆ ಮಾರ್ಗದರ್ಶನವನ್ನು ನೀಡಬಲ್ಲ. ಕಾರಣ ಎಲ್ಲಾ ಸಾಮಾಜಿಕ ನೀತಿಯಲ್ಲಿ ಸಮಾಜದ ಇಂದಿನ ಮತ್ತು ಮುಂದಿನ ರಚನೆಯ ಬಗ್ಗೆ ಕೆಲವು ಪ್ರಮಾಣವಿಲ್ಲದೆ ಅಂಗೀಕೃತವಾದ ಭಾವನೆಗಳಿರುತ್ತವೆ.

ಉದ್ದೇಶಗಳನ್ನು ಸಾಧಿಸಲು ಯಾವ ನೀತಿಗಳು ಪರಿಣಾಮಕಾರಿಯಾದವುಗಳು ಎಂಬುದನ್ನು ತೋರುವುದೇ ಒಂದು ಸಮಾಜಕ್ಕೆ ಒಬ್ಬ ವಿದ್ವಾಂಸ ಸಲ್ಲಿಸಬಹುದಾದ ಮಹತ್ವದ ಸೇವೆಗಳಲ್ಲಿ ಒಂದು.

## 1.6 ಸಮಾಜಶಾಸ್ತ್ರದ ಬೆಳವಣಿಗೆ

ಸಮಾಜಶಾಸ್ತ್ರವು ಇತ್ತೀಚೆಗೆ ಬೆಳೆದು ಬಂದ ಅತಿ ತರುಣ ವಿಜ್ಞಾನವಾಗಿದೆ. ಆಗಸ್ಟ್ ಕಾಮ್ಟೆಯವರು ಸಮಾಜಶಾಸ್ತ್ರ ಎಂಬ ಪದವನ್ನು 1837ರಲ್ಲಿ ಮೊದಲಿಗೆ ಬಳಸಿದರು. ಹಿಂದೆ ಮಾನವ ಜ್ಞಾನವು ವಿಭಜನೆಗೊಂಡಿಲ್ಲದೆ ಇದ್ದುದರಿಂದ ಮಾನವ ಜೀವನದ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಕಾನೂನಿನ ಅಂಶಗಳೆಲ್ಲವನ್ನು ಸಾಮಾಜಿಕ ತತ್ವಶಾಸ್ತ್ರ ಎಂಬ ವಿಷಯದ ಅಂಗವಾಗಿ ಅಧ್ಯಯನ ಮಾಡಲಾಗುತ್ತಿತ್ತು. ಎಲ್ಲಾ ಸಾಮಾಜಿಕ ವಿಷಯಗಳನ್ನು ಒಂದೇ ಶೀರ್ಷಿಕೆಯಡಿಯಲ್ಲಿ ಅಭ್ಯಸಿಸಲಾಗುತ್ತಿತ್ತು. ನಂತರ, ಸಮಾಜಶಾಸ್ತ್ರದ ವೈಜ್ಞಾನಿಕ ಬೆಳವಣಿಗೆಗೆ ಕಾರಣರಾದವರಲ್ಲಿ ಆಗಸ್ಟ್ ಕಾಮ್ಟೆ, ಹರ್ಬರ್ಟ್‌ಸ್ಪೆನ್ಸರ್ಸ್ ಡರ್ಖೀಂ ಮತ್ತು ಮಾರ್ಕ್ಸ್‌ವೆಬರ್ ಪ್ರಮುಖರು. ಇವರನ್ನು ಸಮಾಜಶಾಸ್ತ್ರದ ಮೂಲ ಪುರುಷರೆನ್ನುತ್ತಾರೆ. ಆದರೆ, ಕೈಗಾರಿಕಾ ಕ್ರಾಂತಿಯಿಂದೀಚೆಗೆ ಸಮಾಜಶಾಸ್ತ್ರವು ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ, ಯೂರೋಪ್ ಮುಂತಾದ ದೇಶಗಳಲ್ಲಿ ತ್ವರಿತವಾಗಿ ಬೆಳೆಯುತ್ತಿದೆ. ಇದು ಬೋಧನಾ ವಿಷಯವಾಗಿ ಅಮೆರಿಕದಲ್ಲಿ 1876ರಲ್ಲಿ, ಫ್ರಾನ್ಸ್‌ನಲ್ಲಿ 1889ರಲ್ಲಿ ಮತ್ತು ಗ್ರೇಟ್ ಬ್ರಿಟನ್ನಿನಲ್ಲಿ 1907ರಲ್ಲಿ ಪ್ರಾರಂಭಗೊಂಡಿತು. ಭಾರತಕ್ಕೆ ಸಂಬಂಧಿಸಿದಂತೆ ಇದನ್ನು ಹೊಸ ಶಾಸ್ತ್ರವೆನ್ನಬಹುದು. ಇಲ್ಲಿ ಸಮಾಜದ ಅಧ್ಯಯನವು ಬಹಳ ಹಿಂದಿನಿಂದಲೂ ನಡೆದಿದೆ. ಅನೇಕ ತತ್ವಜ್ಞಾನಿಗಳು, ಪಂಡಿತರು, ರಾಜ್ಯಡಳಿತಗಾರರು, ಸಮಾಜ ಸುಧಾರಕರು ಸಮಾಜದ ಅನೇಕ ವಿಷಯಗಳನ್ನು ಅಭ್ಯಸಿಸಿ ವಿಶ್ಲೇಷಿಸಿದ್ದಾರೆ. ನಮ್ಮ ವೇದಗಳು, ಶಾಸ್ತ್ರಪುರಾಣಗಳು ಉಪನಿಷತ್ತುಗಳಲ್ಲಿ ಸಾಮಾಜಿಕ ವಿಶ್ಲೇಷಣೆಯು ಆಗಾಧವಾಗಿದೆ. ಮನುವಿನ ಧರ್ಮಶಾಸ್ತ್ರ, ಕೌಟಿಲ್ಯ ಅರ್ಥಶಾಸ್ತ್ರ, ವಾತ್ಸಾಯನನ ಕಾಮಸೂತ್ರ, ಶುಕ್ರಾಚಾರ್ಯರ ನೀತಿಶಾಸ್ತ್ರ ಇವು ಕಾನೂನು, ನೀತಿ, ಧರ್ಮ, ವಿವಾಹ, ಸಂಸ್ಕೃತಿ ಮುಂತಾದ ವಿಷಯಗಳನ್ನು ಪರಿಶೀಲಿಸಿವೆ. ಇವರ ಬರಹಗಳಲ್ಲಿ ಆರ್ಥಿಕ, ರಾಜಕೀಯ ಹಾಗೂ ಕಾನೂನಿನ ವಿಷಯಗಳನ್ನು ಚರ್ಚಿಸಿದ್ದಾರೆ. ಈ ದೆಸೆಯಲ್ಲಿ ಅಕ್ಬರನ ಆಸ್ಥಾನದ ಪಂಡಿತ ಅಬ್ದುಲ್ ಫಾಜುಲ್‌ನ 'ಎನ್-ಇ-ಆಕ್ಬರಿ' ಎಂಬ ಗ್ರಂಥವು ವಿಶಿಷ್ಟವಾದುದು.

ಸಮಾಜಶಾಸ್ತ್ರವು 1919ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ವಿಷಯವಾಗಿ ಪ್ರಾರಂಭಗೊಂಡಿತ್ತಾದರೂ 1940ರ ವರೆಗೆ ವೈಜ್ಞಾನಿಕ ಅಧ್ಯಯನ ನಡೆದಿರಲಿಲ್ಲ. ಬೊಂಬಾಯಿಂದ ''ಸೋಶಿಯಲಾಜಿಕಲ್ ಬುಲೆಟಿನ್ (Sociological Bulletin) ಹಾಗೂ ಆಗ್ರದ ''ಜರ್ನಲ್ ಆಫ್ ಸೋಶಿಯಲ್ ಸೈನ್ಸ್ (Journal of Social Science) ಎಂಬ ಸಮಾಜಶಾಸ್ತ್ರದ ವಿಚಾರ ಪತ್ರಿಕೆಗಳು ಸಮಾಜಶಾಸ್ತ್ರದ ಬೆಳವಣಿಗೆಗೆ ಭಾರತದಲ್ಲಿ ವೇಗದಿಂದ ನಡೆಯಲು ಸಹಕಾರಿಯಾದುವು. ಪ್ರಖ್ಯಾತ ಭಾರತೀಯ ಸಮಾಜಶಾಸ್ತ್ರಜ್ಞರುಗಳಾದ ಜಿ.ಎಸ್.ಘುರಿಯೆ, ಎಂ.ಎನ್.ಶ್ರೀನಿವಾಸ್, ಕೆ.ಎಂ.ಕಪಾಡಿಯಾ, ಆರ್.ಕೆ.ಮುಖರ್ಜಿ, ಡಿ.ಪಿ.ಮುಖರ್ಜಿ, ಆರ್.ಎನ್.ಸಾಕ್ಸೆನಾ, ಶ್ರೀಮತಿ ಇರಾವತಿ ಕರ್ವೆ, ಡಿ.ಎನ್.ಮಜುಂದಾರ್, ಎಂ.ಎಸ್.ಗೋರೆ, ಎಸ್.ಸಿ.ದುಬೆ, ಪಿ.ಎನ್.ಪ್ರಭು, ಎ.ಆರ್.ದೇಸಾಯಿ ಮೊದಲಾದವರು ಸಮಾಜಶಾಸ್ತ್ರವನ್ನು ಭಾರತೀಯ ನೆಲದಲ್ಲಿ ಬೆಳಸುವಲ್ಲಿ ಮಹತ್ವದ ಪಾತ್ರವಹಿಸಿರುವರು. ಇಂದು ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಮತ್ತು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಸಮಾಜಶಾಸ್ತ್ರವು ಬೋಧನಾ ಮತ್ತು ಸಂಶೋಧನಾ ವಿಷಯವಾಗಿ ಪ್ರಖ್ಯಾತಿ ಹೊಂದುತ್ತಿದೆ.

- **ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ**

1. 'ಸಮಾಜಶಾಸ್ತ್ರ' ಪದವನ್ನು ಯಾರು ಮೊದಲಿಗೆ ಬಳಕೆಗೆ ತಂದವರು ಯಾರು?
2. ಸಮಾಜಶಾಸ್ತ್ರದ ಎರಡು ವ್ಯಾಖ್ಯೆಗಳನ್ನು ವಿವರಿಸಿ.
3. ಸಮಾಜಶಾಸ್ತ್ರದ ವ್ಯಾಪ್ತಿಯನ್ನು ವಿವರಿಸಿ.
4. ಸಮಾಜಶಾಸ್ತ್ರದ ಒಂದೆರಡು ಉಪಯೋಗಗಳನ್ನು ತಿಳಿಸಿ.

- **ಸರಿ ಅಥವಾ ತಪ್ಪು ಗುರುತಿಸಿ**

5. ಆಗಸ್ಟ್‌ಕಾಂಮ್ಟೆಯನ್ನು ಸಮಾಜಶಾಸ್ತ್ರದ ಪಿತಾಮಹನೆಂದು ಕರೆಯುತ್ತಾರೆ.
6. ಸಮಾಜಶಾಸ್ತ್ರವು ಪ್ರಾಣಿ ಸಮಾಜವನ್ನು ಅಧ್ಯಯನ ಮಾಡುತ್ತದೆ.

7. ಸಮಾಜಶಾಸ್ತ್ರದಲ್ಲಿ ಪ್ರಯೋಗ ಶಾಲಾವಿಧಾನಗಳು ಹೆಚ್ಚು ಬಳಕೆಯಲ್ಲಿವೆ.

8. ಸಿಮೆಲ್ ಅವರು ಸಮನ್ವಯ ಪಂಥದ ಪ್ರತಿಪಾದಕರು.

## 1.7 ಸಾರಾಂಶ

19ನೆಯ ಶತಮಾನದ ಪೂರ್ವಾರ್ಧದ ಸುಮಾರಿಗೆ ಸಮಾಜಶಾಸ್ತ್ರದ ಜನನವಾಯಿತು. 1837ಕ್ಕಿಂತ ಹಿಂದೆ ಈ ವಿಜ್ಞಾನವನ್ನು ಸಾಮಾಜಿಕ ತತ್ವಶಾಸ್ತ್ರದಲ್ಲಿ ಅಭ್ಯಸಿಸಲಾಗುತ್ತಿತ್ತು. ಫ್ರಾನ್ಸ್ ಧೇಶದ ಆಗಸ್ಟ್‌ಕಾಮ್ಟೆಯವರು ಸಮಾಜಶಾಸ್ತ್ರ ಎಂಬ ಪದವನ್ನು 1837ರಲ್ಲಿ ಮೊದಲಿಗೆ ಬಳಸಿದರು. ಮುಂದೆ ಹರ್ಬರ್ಟ್‌ಸ್ಪೆನ್ಸರ್, ಡರ್ಖೀಮ್, ಮ್ಯಾಕ್ಸ್‌ವೆಬರ್, ವಾರ್ಡ್, ಲಿಪ್ಲೆ ಮೊದಲಾದವರುಗಳನ್ನು ಸಮಾಜಶಾಸ್ತ್ರವನ್ನು ಪ್ರತ್ಯೇಕವಾದ ಹಾಗೂ ಸ್ವತಂತ್ರವಾದ ಅಧ್ಯಯನ ಶಾಸ್ತ್ರವನ್ನಾಗಿ ಮಾಡುವಲ್ಲಿ ಆರಂಭಿಕ ಯತ್ನವನ್ನು ಮಾಡಿದ ಪ್ರಮುಖ ಚಿಂತಕರುಗಳೆಂದು ಕರೆಯುವುದುಂಟು. ಸಮಾಜಶಾಸ್ತ್ರಕ್ಕೆ ವೈಜ್ಞಾನಿಕತೆಯ ತಳಹದಿಯು ದೊರಕುವಂತೆ ಮಾಡಿದ ಮತ್ತು ಅದಕ್ಕೊಂದು ಸ್ವಂತಿಕೆಯನ್ನು ತಂದುಕೊಟ್ಟ ಈ ಮಹನೀಯರಗಳನ್ನು ಸಮಾಜಶಾಸ್ತ್ರದ ಸ್ಥಾಪಕ ಪಿತಾಮಹರುಗಳೆಂದು ಕರೆಯುವುದು ತೀರಾ ಸಹಜವೆ ಆಗಿದೆ.

ಅನೇಕ ಸಮಾಜಶಾಸ್ತ್ರಜ್ಞರು ಸಮಾಜಶಾಸ್ತ್ರವೆಂದರೇನು ಎಂಬ ಪ್ರಶ್ನೆಗೆ ಉತ್ತರವಾಗಿ ಹಲವಾರು ವ್ಯಾಖ್ಯೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ಮೆಕೈವರ್ ಮತ್ತು ಪೇಜ್ ಅವರು, ಸಾಮಾಜಿಕ ಸಂಬಂಧಗಳನ್ನು ಅಭ್ಯಸಿಸುವ ವಿಜ್ಞಾನವೇ ಸಮಾಜಶಾಸ್ತ್ರವೆಂದು ತಿಳಿಸಿದ್ದಾರೆ. ಆದರೆ ಕಿಂಬಾಲ್ ಯಂಗ್ ರವರು, ಸಮಾಜಶಾಸ್ತ್ರವು 'ಸಮಾಜದಲ್ಲಿನ ಮಾನವನ ವ್ಯವಸ್ಥಿತವಾದ ಮತ್ತು ಕ್ರಮಬದ್ಧವಾದ ಅಧ್ಯಯನ, ಅಂದರೆ ಅವನ ಸಾಮೂಹಿಕ ಜೀವನವನ್ನು ಮತ್ತು ಸಂಪ್ರದಾಯಗಳನ್ನು, ಪರಂಪರೆಗಳನ್ನು, ಸಂಸ್ಥೆಗಳನ್ನು ಮತ್ತು ಸಾಮೂಹಿಕ ಜೀವನದೊಂದಿಗೆ ಕೂಡಿಕೊಂಡ ವಿಚಾರ ವಿಧಾನಗಳನ್ನು ಮತ್ತು ಜೀವನ ಮಾರ್ಗಗಳನ್ನು ಅಭ್ಯಸಿಸುವ ಶಾಸ್ತ್ರ.

ಸಮಾಜಶಾಸ್ತ್ರದ ವ್ಯಾಪ್ತಿಯನ್ನು ವಿವರಿಸಲು ಎರಡು ಪಂಥಗಳು ಪ್ರತಿಪಾದಿಸಲ್ಪಟ್ಟಿವೆ. ಅವು ಯಾವುವೆಂದರೆ,

**ಔಪಚಾರಿಕ ಪಂಥ**

**ಸಮನ್ವಯ ಪಂಥ**

ಇವೆರಡು ಪಂಥಗಳು ತಮ್ಮದೇ ಆದ ರೀತಿಯಲ್ಲಿ ಸಮಾಜಶಾಸ್ತ್ರದ ವ್ಯಾಪ್ತಿಯನ್ನು ವಿವರಿಸಿವೆ.

ಸಮಾಜಶಾಸ್ತ್ರವು ಇತ್ತೀಚೆಗೆ ಬೆಳೆದು ಬಂದು ಅತಿ ತರುಣ ವಿಜ್ಞಾನವಾಗಿದೆ. ಇದು ದಿನೇ ದಿನೇ ಬೆಳೆದು ಅನೇಕ ಶಾಖೆಗಳನ್ನು ಉಪಶಾಖೆಗಳನ್ನು ಹೊಂದಿ ವಿಶ್ವದಾದ್ಯಂತ ವ್ಯಾಪಕವಾಗಿ ಬೆಳೆಯುತ್ತಿರುವ ವಿಜ್ಞಾನವಾಗಿದೆ. ಹೆಚ್ಚುತ್ತಿರುವ ಇದರ ಶಾಖೆಗಳೇ ಈ ಶಾಸ್ತ್ರದ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ. ಸಮಾಜಶಾಸ್ತ್ರವನ್ನು ಅಭ್ಯಸಿಸುವುದರಿಂದ ಅನೇಕ ಉಪಯೋಗಗಳಿವೆ.

ಸಮಾಜಶಾಸ್ತ್ರವು ಮಾನವ ಸಮಾಜವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತದೆ.

ಸಮಾಜಶಾಸ್ತ್ರವು ಮಾನವನ ಸಾಮಾಜಿಕ ನಡವಳಿಕೆಯ ಮೇಲೆ ಬೆಳಕು ಚೆಲ್ಲುತ್ತದೆ.

ಸಮಾಜಶಾಸ್ತ್ರವು ಮಾನವನ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯ ಮಾಡುತ್ತದೆ.

ಸಮಾಜಶಾಸ್ತ್ರದ ಅಧ್ಯಯನದಿಂದ ಇತರ ಸಮಾಜಗಳ ಬಗೆಗೂ ಮಾಹಿತಿ ದೊರಕುವುದು.

ಸಾಮಾಜಿಕ ಸಮಸ್ಯೆಗಳ ನಿರ್ಮೂಲನದಲ್ಲಿ ಸಮಾಜಶಾಸ್ತ್ರದ ಪಾತ್ರ ಮಹತ್ವದಾಗಿದೆ.

ಸಮಾಜಶಾಸ್ತ್ರವು ಒಂದು ಉಪಯುಕ್ತ ಬೋಧನಾ ವಿಷಯವಾಗಿದೆ. ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳ ಪಠ್ಯಕ್ರಮದಲ್ಲಿ ಸಮಾಜಶಾಸ್ತ್ರಕ್ಕೆ ಪ್ರಮುಖ ಸ್ಥಾನ ದೊರೆತಿದೆ. ಭಾರತೀಯ ಆಡಳಿತ ಸೇವೆ (I.A.S.), ಭಾರತೀಯ ವಿದೇಶಾಂಗ ಸೇವೆ (I.F.S.), ಕರ್ನಾಟಕ ಆಡಳಿತ ಸೇವೆ (K.A.S.) ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯವಿಷಗಳಲ್ಲಿ ಸಮಾಜಶಾಸ್ತ್ರವನ್ನು ಒಂದು ವಿಷಯವನ್ನಾಗಿ ಅಂಗೀಕರಿಸಲಾಗಿದೆ. ಆಡಳಿತ ಸೂತ್ರವನ್ನು ಕೈಗೊಳ್ಳುವ ವ್ಯಕ್ತಿಗೂ ಸಮಾಜಶಾಸ್ತ್ರದ ಅರಿವು ಅಗತ್ಯ. ಆದಿವಾಸಿಗಳ ಕಲ್ಯಾಣ, ಸಾಮುದಾಯಿಕ ಅಭಿವೃದ್ಧಿ ಯೋಜನೆ, ಕುಟುಂಬ ಯೋಜನೆ, ಸಮಾಜ ಕಲ್ಯಾಣ ಇಲಾಖೆ, ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ, ಸ್ತ್ರೀ ಮತ್ತು ಮಕ್ಕಳ ಕಲ್ಯಾಣ,

ಗ್ರಾಮೀಣ ಅಭಿವೃದ್ಧಿ ಮುಂತಾದ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲು ಸಮಾಜಶಾಸ್ತ್ರದ ಸಹಾಯ ಅತ್ಯಾವಶ್ಯಕ.

## 1.8 ಪ್ರಮುಖ ಪದಗಳು

- **ವ್ಯಾಖ್ಯೆ** : ಯಾವುದೇ ವಿದ್ಯಮಾನದ ಮೂಲಭೂತ ಸ್ವರೂಪದ ಅರ್ಥ ವಿವರಣೆ.
- **ವ್ಯಾಪ್ತಿ** : ವಿಷಯ ವಸ್ತುವಿನ ಎಲ್ಲೆ.
- **ಧ್ಯೇಯ** : ಅಧ್ಯಯನದ ಗುರಿ
- **ಪರಿಕಲ್ಪನೆ** : ವಿದ್ಯಮಾನದ ಸ್ವರೂಪದ ಬಗ್ಗೆ ಒಟ್ಟಾರೆ ಕಲ್ಪನೆ ನೀಡುವ ಒಂದು ಪದ ಅಥವಾ ಪದ ಸಮುಚ್ಚಯ
- **ಸಂಸ್ಕೃತಿ** : ಯಾವುದೇ ಸಾಮಾಜಿಕ ಗುಂಪಿನ ಜೀವನ ವಿಧಾನ; ಯಾವುದೇ ಸಾಮಾಜಿಕ ಗುಂಪಿನ ಒಟ್ಟಾರೆ ಮಾನವ ನಿರ್ಮಿತ ಪರಿಸರ
- **ರಚನೆ** : ಅಂತರ ಅವಲಂಬಿತ ಅಂಶಗಳ ನಡುವಣ ಸಾಪೇಕ್ಷವಾಗಿ ಸ್ಥಿರವಾದ ಸಂಬಂಧ ವಿನ್ಯಾಸ
- **ಕಾರ್ಯ** : ಸಾಮಾಜಿಕ ಮತ್ತು ಸಾಂಸ್ಕೃತಿಕ ವಿದ್ಯಮಾನಗಳು, ಅವು ನಿರ್ವಹಿಸುವ ಕಾರ್ಯಗಳ ಆಧಾರದ ಮೇಲೆ ಅವುಗಳ ವಿಶ್ಲೇಷಣೆ

## 1.9 ನಿಮ್ಮ ಪ್ರಗತಿ ಪರೀಕ್ಷೆ ಉತ್ತರಗಳು

1. 1.2
2. 1.2
3. 1.4
4. 1.5 ರಿಂದ 1.5.6
5. ಸರಿ
6. ತಪ್ಪು
7. ತಪ್ಪು
8. ತಪ್ಪು

## 1.10 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

(1) ಸಮಾಜಶಾಸ್ತ್ರವನ್ನು ವ್ಯಾಖ್ಯಾನಿಸಿ.

(2) ವಿಜ್ಞಾನವೆಂದರೇನು? ಸಮಾಜಶಾಸ್ತ್ರ ಒಂದು ವಿಜ್ಞಾನವೇ ಎಂಬುದನ್ನು ಪರಿಶೀಲಿಸಿ.

(3) ಸಮಾಜಶಾಸ್ತ್ರದ ವ್ಯಾಪ್ತಿಯನ್ನು ವಿವರಿಸಿ.

(4) ಸಮಾಜಶಾಸ್ತ್ರ ಅಧ್ಯಯನದ ಉಪಯುಕ್ತತೆ ಕುರಿತು ಟಿಪ್ಪಣಿ ಬರೆಯಿರಿ.

- **ಉತ್ತರಗಳು : ನೋಡಿ**

**1)** **1.2**

**2)** **1.3**

**3)** **1.4**

**4)** **1.5**

## 1.11 ಸಲಹಾ ಗ್ರಂಥಗಳು


| | | | |
|---|---|---|---|
| 1. | W.F. Ogburn and M.F. Nimkoff | : | *Sociology* |
| 2. | K.Davis | : | *Human Society* |
| 3. | Maciver and Page | : | *Society* |
| 4. | Bogardus | : | *Sociology* |
| 5. | R.N.Sharma | : | *Principles of Sociology* |
| 6. | ಚ.ನ.ಶಂಕರ ರಾವ್ | : | ಸಮಾಜಶಾಸ್ತ್ರ |
| 7. | ಡಿ.ಕೆ. ಶಿವಣ್ಣ | : | ಸಮಾಜಶಾಸ್ತ್ರ |
| 8. | ಮಾಧವ ಕುಲಕರ್ಣಿ | : | ಸಮಾಜಶಾಸ್ತ್ರ |
| 9. | ನಾರಾಯಣ ಮತ್ತು ವಿಶ್ವ | : | ಸಾಮಾನ್ಯ ಸಮಾಜಶಾಸ್ತ್ರ |



• ಟಿ.ನಾಗರಾಜು, ಪ್ರವಾಚಕ, ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ , ಮೈಸೂರು - 570 006.

# ಘಟಕ 2 : ಪ್ರಾಥಮಿಕ ಪರಿಕಲ್ಪನೆಗಳು

ರಚನೆ

2.0 ಉದ್ದೇಶಗಳು

2.1 ಪರಿಚಯ

2.2 ಪಾತ್ರ

2.3 ಅಂತಸ್ತು

2.4 ವಿಧಗಳು

2.5 ಸಾಮಾಜಿಕ ವ್ಯವಸ್ಥೆ

2.6 ಲಕ್ಷಣಗಳು

2.7 ಸಾಮಾಜಿಕ ರಚನೆ ಮತ್ತು ಸಾಮಾಜಿಕ ಅಂತಸ್ತು ಇವುಗಳ ನಡುವಿನ ಸಂಬಂಧ

2.8 ಸಾರಾಂಶ

2.9 ಪ್ರಮುಖ ಪದಗಳು

2.10 ನಿಮ್ಮ ಪ್ರಗತಿ ಪರೀಕ್ಷೆ ಉತ್ತರಗಳು

2.11 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

2.12 ಸಲಹಾ ಗ್ರಂಥಗಳು

## 2.0 ಉದ್ದೇಶಗಳು

ಈ ಘುಟಕವನ್ನು ಅಧ್ಯಯನ ಮಾಡುವುದರಿಂದ ನಮಗೆ ಕೆಳಕಂಡ ಉದ್ದೇಶಗಳು ವ್ಯಕ್ತವಾಗುತ್ತವೆ.

- ಪಾತ್ರ ಮತ್ತು ಅಂತಸ್ತುಗಳ ಅರ್ಥ.
- ಅಂತಸ್ತುಗಳ ವಿಧಗಳು.
- ಪಾತ್ರ ಮತ್ತು ಅಂತಸ್ತುಗಳ ವ್ಯತ್ಯಾಸಗಳು.
- ಸಾಮಾಜಿಕ ವ್ಯವಸ್ಥೆಯ ಅರ್ಥ, ಲಕ್ಷಣಗಳು ಮತ್ತು ಸಾಮಾಜಿಕ ರಚನೆಯೊಂದಿಗಿನ ಸಂಬಂಧಗಳನ್ನು ಅಧ್ಯಯನ ಮಾಡಲೆತ್ನಿಸಬಹುದು.

## 2.1 ಪರಿಚಯ

ಹಿಂದಿನ ಘುಟಕಗಳಿಂದ ಸಮಾಜಶಾಸ್ತ್ರ ಮತ್ತು ಇತರೆ ಸಾಮಾಜಿಕ ವಿಜ್ಞಾನಗಳಿಗಿರುವ ಸಂಬಂಧಗಳನ್ನು ಅಧ್ಯಯ. ಮಾಡಿದ ತರುವಾಯ ಈ ಘುಟಕದಲ್ಲಿರುವ ಪ್ರಾಥಮಿಕ ಪರಿಕಲ್ಪನೆಗಳಾದ ಪಾತ್ರ ಅಂತಸ್ತು ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ಅಧ್ಯಯನ ಮಾಡಲೆತ್ನಿಸಬಹುದು.

## 2.2 ಪಾತ್ರ

ಸಮಾಜಶಾಸ್ತ್ರದಲ್ಲಿ ಅಭಿವ್ಯಕ್ತಿಯ ದೃಷ್ಟಿಯಿಂದ ಅನೇಕ ಸಾಮಾಜಿಕ ಸಂಗತಿಗಳು, ಪರಿಕಲ್ಪನೆಗಳು ಇತ್ಯಾದಿ ಅಸ್ಪಷ್ಟವಾಗಿವೆ. ಒಂದು ಅರ್ಥದಲ್ಲಿ ಪ್ರಯೋಗಿಸಿದ ಪದಗಳು ವಿವಿಧ ಬಗೆಯ ಅರ್ಥಗಳನ್ನು ಹೊರ ಹೊಮ್ಮಿಸುವುದು ಸಮಾಜಶಾಸ್ತ್ರದಲ್ಲಿ ಸಾಮಾನ್ಯ ಕೇವಲ ಬಾವಾಗೋಚರವಾದ ಕೆಲವು ಪರಿಕಲ್ಪನೆಗಳನ್ನು ಶಬ್ದಗಳಲ್ಲಿ ಹಿಡಿದು, ವಿವರಿಸಲು ಪ್ರಯತ್ನಿಸಿದಾಗ ಅದು ಇನ್ನಷ್ಟು ಅಪಾರ್ಥಕೊಡುವುದೇ ಹೆಚ್ಚು. ಸಾಮಾಜಿಕ ವರ್ತನೆಯ ಬಗ್ಗೆ ಹೆಚ್ಚಿನ ಮುತುವರ್ಜಿಯಿಂದ ಅಧ್ಯಯನ ಮಾಡಲು ಬಯಸುವ ವ್ಯಕ್ತಿಯು ಇಂತಹ ಅರ್ಥಗಳ ಬಗ್ಗೆ ಗ್ರಹಿಸುವುದು ಆವಶ್ಯಕ ಹಾಗೆ ಸ್ಪಷ್ಟತೆಯನ್ನು ಬಯಸುವ ಪರಿಕಲ್ಪನೆಗಳಲ್ಲಿ ಪಾತ್ರವೂ ಒಂದು.

ಪಾತ್ರಗಳು ಸಾಮಾಜಿಕ ಸಮೂಹದ ಸಂಪ್ರದಾಯ ಮತ್ತು ನೈತಿಕ ನಿಯಮಗಳಿಂದ ನಿರೂಪಿಸಲ್ಪಡುತ್ತವೆ. ಪಾತ್ರವೆಂಬುದು ಸಮಾಜದ ವಿಧಿವಿಧಾನಗಳಿಂದ ಪ್ರತಿಷ್ಠಾಪಿಸಲ್ಪಟ್ಟು ವ್ಯಕ್ತಿಗಳಿಂದ ಕಾರ್ಯರೂಪಕ್ಕೆ ಬರುವ ಪರಸ್ಪರಾವಲಂಬಿತ ಚಟುವಟಿಕೆಗಳ ಸಮುಚ್ಚಯವಾಗಿದೆ. ಉದಾ: ಒಂದು ನಾಟಕರಂಗ, ಹವ್ಯಾಸಿಗಳು ಅಥವಾ ವೃತ್ತಿಪರರು ನಾಟಕವೊಂದನ್ನು ಅಭಿನಯಿಸುವಾಗ ಒಬ್ಬೊಬ್ಬರು ಒಂದೊಂದು ಪಾತ್ರವನ್ನು ವಹಿಸುತ್ತಾರೆ. ಆತ ತನ್ನದೇ ಆದ ಸಂಭಾಷಣೆ, ಪ್ರವೇಶ ನಿರ್ಗಮನ ಮುಂತಾದವುಗಳನ್ನು ಹೊಂದಿರುತ್ತಾನೆ. ಅಂತೆಯೇ ಕ್ರಿಡೆಗಳಲ್ಲಿ ಕ್ರೀಡಾಪಟುಗಳಿಗೆ ಆಟದ ನಿಯಮಗಳ ಮೇರೆಗೆ ನಿರ್ಧಿಷ್ಟ ಕಾಲಾವಧಿ ಅಂತರ ಅವರವರ ಜಾಗಗಳು ಮುಂತಾಗಿ ಗೊತ್ತುಪಡಿ ಲಾಗುತ್ತವೆ. ಅದು ಕ್ರಿಕೆಟ್ ಆಟವಾಗಿದ್ದರೆ ನಿರ್ಧಿಷ್ಟವಾಗಿ ಒಬ್ಬ ವಿಕೆಟ್‌ಕೀಪರ್, ಬೌಲರ್, ಆರಂಭದ ಆಟಗಾರ ಮುಂತಾಗಿ ಇರುತ್ತಾರೆ. ಈ ಮೇಲಿನ ನಿದರ್ಶನಗಳಲ್ಲಿ ನಮಗೆ ಕಂಡುಬರುವ ಪ್ರಮುಖ ಸಾಮಾನ್ಯ ಅಂಶಗಳೆಂದರೆ, ಆಟ ಆಡುವಾಗ ಅಥವಾ ನಾಟಕ ಮಾಡುವಾಗ ವ್ಯಕ್ತಿಗಳು ತಮ್ಮ ಸ್ವಂತಿಕೆಯನ್ನು ಬದಗೊತ್ತಿ ಆಯಾ ಸಮೂಹಗಳ

ಅವಶ್ಯಕತೆಗಳಿಗನುಸಾರವಾಗಿ ವರ್ತಿಸುತ್ತಾರೆ. ಲಿಂಟನ್‌ರವರ ಹೇಳಿಕೆಯಂತೆ ಪಾತ್ರವೆಂಬುದು ಸಾಮಾಜಿಕ ಸ್ಥಾನಮಾನದ ಕ್ರಿಯಾಭಾಗವಾಗಿದೆ.

ಸಮಾಜಶಾಸ್ತ್ರಜ್ಞರ ಪ್ರಕಾರ ಸಮೂಹ ಮಧ್ಯಮ ವ್ಯಕ್ತಿಯ ವರ್ತನೆಯನ್ನು ಕಲಾವಿದರ ಅಥವಾ ಕ್ರೀಡಾಪಟುಗಳ ನಿಯಮಾನುಸಾರ ವರ್ತನೆಗೆ ಸಮಾನವೆಂದು ಪರಿಗಣಿಸಲಾಗಿದೆ. ಪಾತ್ರಗಳು ನಿರ್ಧಿಷ್ಟಕಾಲದಲ್ಲಿ ಜರುಗುವ ಮತ್ತೆ ಪುನರಾವರ್ತನಗೊಳ್ಳುವ ವ್ಯಕ್ತಿಗಳ ಅಂತರ್ ಕ್ರಿಯೆಗಳು ಅಥವಾ ಸನ್ನಿವೇಶಗಳಾಗಿವೆ. ಉದಾ: ನಾವು ದಿನ ನಿತ್ಯ ಮಗನಾಗಿ, ಸಹೋದರನಾಗಿ, ಅಥವಾ ಸಹೋದರಿಯಾಗಿ, ಮಗಳಾಗಿ, ವಿದ್ಯಾರ್ಥಿಯಾಗಿ, ಉಪಾದ್ಯಾಯರಾಗಿ, ಉದ್ಯೋಗಿಯಾಗಿ ಹಾಗೂ ಸ್ನೇಹಿತನಾಗಿ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸುತ್ತೇವೆ.

ವ್ಯಕ್ತಿ ಮತ್ತು ಪಾತ್ರ ಎಂಬ ಎರಡು ಬಗೆಯ ಕಲ್ಪನೆಗಳು ಪರಸ್ಪರ ಭಿನ್ನವಾದುವುಗಳು. ಸಾಮಾನ್ಯ ವರ್ತನೆಯ ವಿವರಗಳಿಗೆ ಸಂಬಂಧಪಟ್ಟವುಗಳಾದರೂ ಕೂಡ ವಾಸ್ತವವಾಗಿ ಇವೆರಡು ಪರಿಕಲ್ಪನೆಗಳು ಒಂದರಿಂದ ಮತ್ತೊಂದು ಭಿನ್ನವಾಗಿವೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ನಿತ್ಯ ಜೀವನದಲ್ಲಿ ವಿಭಿನ್ನ ಪಾತ್ರಗಳನ್ನು ನಿರ್ವಹಿಸುವುದು ಮಾತ್ರವಲ್ಲದೆ ಒಂದೇ ದಿನದಲ್ಲಿ ಅನೇಕ ಪಾತ್ರಗಳಿಗೆ ಬದಲಾಯಿಸುವುದು ಸಾಮಾನ್ಯ. ಮನೆಯಲ್ಲಿದ್ದಾಗ ಮಗ, ಮಗಳು, ತಾಯಿ, ತಂದೆ ಮುಂತಾಗಿ ಆಗಿದ್ದರೆ ಅದೇ ವ್ಯಕ್ತಿ ಕಛೇರಿಯಲ್ಲಿ ಅಧಿಕಾರಿ, ಗುಮಾಸ್ತ ಅಥವಾ ಮಾರುಕಟ್ಟೆಯಲ್ಲಿ ಒಬ್ಬ ವ್ಯಾಪಾರಿ ಅಥವಾ ಗಿರಾಕಿಯಾಗಿರಬಹುದು. ಆಸ್ಪತ್ರೆಯಲ್ಲಿ ವೈದ್ಯ ಅಥವಾ ರೋಗಿಯಾಗಿರಬಹುದು. ನ್ಯಾಯಾಲಯದಲ್ಲಿ ನ್ಯಾದಿಧೀಶ ಅಥವಾ ಕಕ್ಷಿದಾರ ಮುಂತಾಗಿ ಪರಿವರ್ತನೆ ಹೊಂದುತ್ತಾ ಇರಬೇಕಾದುದು ಅನಿವಾರ್ಯ. ಈ ಎಲ್ಲಾ ಪಾತ್ರಗಳಲ್ಲೂ ವಿಭಿನ್ನವಾಗಿ ವ್ಯಕ್ತಿಗಳು ವರ್ತಿಸುತ್ತಾರೆ. ಪ್ರೇಮಿಯಾಗಿ ಅನುರಾಗವನ್ನು ವ್ಯಕ್ತಪಡಿಸುವ ವ್ಯಕ್ತಿ ಒಬ್ಬ ನೌಕರನಾಗಿ ಮಾಡಲು ಸಾಧ್ಯವಾಗುವುದಿಲ್ಲ. ಒಂದು ಪಾತ್ರಕ್ಕೆ ನಿರ್ಧಿಷ್ಟ ಪಡಿಸಲಾದ ನಡವಳಿಕೆಯು ಇನ್ನೊಂದು ಪಾತ್ರಕ್ಕೆ ನಿಷೇಧವಾಗಿರಬಹುದು. ಹೆಂಡತಿಗೆ ಪ್ರೀತಿ ತೋರಬೇಕಾದುದು ವಿಹಿತ ಆದರೆ ಅದೇ ಆಪ್ತ ಮಹಿಳಾ ಕಾರ್ಯದರ್ಶಿಗೆ ತೋರಿಸಲಾಗದು ಹಾಗೆ ತೋರುವುದು ಸಮಾಜದಿಂದ ನಿಷೇದಿತವಾಗಿರುತ್ತದೆ. ಹೀಗೆ ವ್ಯಕ್ತಿಯೊಬ್ಬನು ಅನೇಕ ಪಾತ್ರಗಳನ್ನು ನಿರ್ವಹಿಸಬಲ್ಲ ಆದರೆ ಪಾತ್ರವೊಂದು ಇಡೀ ವ್ಯಕ್ತಿಯನ್ನು ಆವರಿಸಿ ಕೊಂಡಿರಲಾರದು ಅದು ಕೇವಲ ಅವನ ವರ್ತನೆಯ ಕೆಲವೇ ನಿರ್ಧಿಷ್ಟ ಭಾಗಗಳಿಗೆ ಅನ್ವಯವಾಗುವಂತದಾಗಿರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಈ ಎರಡು ಪರಿಕಲ್ಪನೆಗಳೂ ಸಹ ಮಾನವ ವರ್ತನೆಯ ಬಗೆಗೆ ಯೋಚಿಸುವಲ್ಲಿನ ಎರಡು ಬೇರೆ ಬೇರೆ ಮಾರ್ಗಗಳಾಗಿವೆ.

ಪ್ರತಿಯೊಂದು ಸಮಾಜದಲ್ಲೂ ವ್ಯಕ್ತಿಯು ತಂದೆಯಾಗಿ, ಮಗನಾಗಿ, ತಾಯಿಯಾಗಿ, ಮಕ್ಕಳಾಗಿ, ಅಧ್ಯಾಪಕನಾಗಿ, ವಿದ್ಯಾರ್ಥಿಯಾಗಿ ವಿವಿಧ ಪಾತ್ರಗಳಲ್ಲಿ ಹೇಗೆ ನಿರ್ವಹಿಸಬೇಕೆಂಬುದರ ಬಗ್ಗೆ ಸಮಾಜ ಜೀವಿಗಳು ನಿರ್ಧಿಷ್ಟ ಆಲೋಚನೆಗಳನ್ನು ಹೊಂದಿರುತ್ತಾರೆ. ಉದಾ:ಒಬ್ಬ ನಿಜವಾದ ವೈದ್ಯ ಕೆಲವು ಕಾರಣಗಳಿಂದ ತನ್ನ ವೃತ್ತಿಯಲ್ಲಿ ಅವಾಂತರ, ಕಲಿಬಿಲಿ ಮಾಡಿಕೊಂಡ ಮಾತ್ರಕ್ಕೆ ಆ ನಕಲಿ ವೈದ್ಯನಾಗಲು ಸಾಧ್ಯವಿಲ್ಲ. ಪಾತ್ರಗಳು ವ್ಯಕ್ತಿಯಲ್ಲಿ ಪರ್ಯಾಯವಾಗಿರುತ್ತವೆ. ಒಬ್ಬನೇ ವ್ಯಕ್ತಿ ಗುರುವಾಗಿ, ತಂದೆಯಾಗಿ, ಅಣ್ಣನಾಗಿ, ಪಕ್ಷದ ಸದಸ್ಯನಾಗಿ, ಸಂಘದ ನೇತಾರನಾಗಿ ನಿರ್ವಹಿಸಬಲ್ಲ, ಅಷ್ಟೇ ಅಲ್ಲದೆ ಪಾತ್ರಗಳು ಪರ್ಯಾಯ ಅಸ್ತಿತ್ವ ಪಡೆಯುವುದು ಮಾತ್ರವಲ್ಲದೆ ಅನೇಕ ವೇಳೆ ವಿವಿಧ ಪಾತ್ರಗಳ ಸಮುಚ್ಛಯವನ್ನು ಕಾಣಬಹುದು. ಈ ಹೊಂದಾಣಿಕೆಯು ಪಾತ್ರ ನಿರೂಪಗಳ "ಇಲ್ಲವೆ ಪಾತ್ರ ನಿರೀಕ್ಷೆಗಳ (Role precriptions or role expectations)ರೂಪದಲ್ಲಿರಬಹುದು. ಈ ಅಂಶವು ಆಧುನಿಕ ಸಾಮಾಜಗಳಿಗಿಂತ ಆದಿವಾಸಿ

ಸಮಾಜಗಳಲ್ಲಿ ಹೆಚ್ಚು ನಿಚ್ಚಳವಾಗಿ ಕಂಡು ಬರುತ್ತದೆ. ಆದಿವಾಸಿ ಸಮಾಜದ ಯುವಕನ ಪತಿಯಾಗಿ, ತಂದೆಯಾಗಿ, ಬೇಟೆಗಾರನಾಗಿ ಹಬ್ಬದ ಸಂದರ್ಭದಲ್ಲಿ ಸತತವಾಗಿ ಕಾಣಬಹುದು. ಆದರೆ ಆತನೊಬ್ಬ ಸ್ತ್ರೀಯಾಗಿ ಅಥವಾ ತಂಡದ ಹಿರಿಯನಾಗಿ ವರ್ತಿಸಲು ಸಾಧ್ಯವಿಲ್ಲ. ಈ ರೀತಿಯಾದ ಕಟ್ಟುನಿಟ್ಟುತನವು ಪಾತ್ರಗಳ ವಿಚಾರದಲ್ಲಿ ನಾವು ಆಧುನಿಕ ಸಮಾಜಗಳಲ್ಲಿ ದುರ್ಬಲವಾಗಿರುವುದನ್ನು ಕಾಣುತ್ತೇವೆ. ವ್ಯಕ್ತಿಯ ವಿದ್ಯಾರ್ಹತೆ ಅಥವಾ ಇತರ ಕಾರಣಗಳಿಂದ ಯುವಕನು ತನಗಿಂತ ಹಿರಿಯರಾದವರನ್ನು ಮೀರಿಸಿ ನಾಯಕನಾಗಬಹುದಾಗಿದೆ. ಕಾರ್ಖಾನೆಯಲ್ಲಿನ ಕಾರ್ಮಿಕರು ಅದರ ಕಾರ್ಮಿಕ ಸಂಘದ ಸದಸ್ಯನಾಗಲೇಬೇಕೆಂದಿಲ್ಲ ಆತನಿಗಿಷ್ಟಬಂದಂತೆ ಆತ ಅದರ ಸದಸ್ಯನಾಗದೆಯೂ ಇರಬಹುದು.

ಪಾತ್ರವು ಅನೇಕ ನಿರೀಕ್ಷೆಗಳಿಂದೊಡಗೂಡಿರುವುದರಿಂದ ಒಂದು ಪಾತ್ರವನ್ನು ಇನ್ನೊಂದು ಪಾತ್ರದ ಸಹಾಯವಿಲ್ಲದೆ ವ್ಯಾಖ್ಯಾನಿಸುವುದು ಅಸಾಧ್ಯ. ಮಕ್ಕಳಿಲ್ಲದ ವ್ಯಕ್ತಿಯು ತಂದೆ ಅಥವಾ ತಾಯಿಯಾಗುವುದು ಸಾಧ್ಯವಿಲ್ಲ. ಕಾರ್ಮಿಕರಿಲ್ಲದೆ ಮಾಲೀಕನಾಗಲು ಸಾಧ್ಯವಿಲ್ಲ. ಇನ್ನೊಂದು ವಿಧದಲ್ಲಿ ಪಾತ್ರಗಳು ಹಕ್ಕು ಮತ್ತು ಕರ್ತವ್ಯಗಳ ಸರಮಾಲೆಯಾಗಿದ್ದು, ವ್ಯಕ್ತಿಗಳ ಪರಸ್ಪರಿಕವಾದ ಸಂಬಂಧಗಳನ್ನು ಅವು ಪ್ರತಿನಿಧಿಸುತ್ತವೆ. ಕೌಟುಂಬಿಕ ವಲಯದಲ್ಲಿ ತಾಯಿ, ತಂದೆ-ಮಕ್ಕಳು ಪರಸ್ಪರ ಕಲೆಯುವ ಕ್ರಿಯೆ ಮಕ್ಕಳ ಜವಾಬ್ದಾರಿ ತಂದೆ ತಾಯಿಗಳಿಗೆ ಹಾಗೂ ವಿಧೇಯತನದ ಕರ್ತವ್ಯ ಮಕ್ಕಳ ಮೇಲೂ ಹಂಚಲ್ಪಡುವುದರಿಂದ ನೆರವೇರುತ್ತದೆ. ರಾಜ್ಯ ಅಥವಾ ಸರ್ಕಾರದ ಕಾರ್ಯ ವಿಧಾನದಲ್ಲಿಯೂ ಇದೇ ಕ್ರಮವನ್ನು ಕಾಣುತ್ತೇವೆ. ಇಂಥ ಪರಿಸ್ಥಿತಿಯಲ್ಲಿಯೂ ಕೂಡ ಕೆಲವು ಪಾತ್ರಗಳು ಸ್ವತಂತ್ರವಾಗಿಯೇ ನೆರವೇರಬಲ್ಲವು. ತಮ್ಮದೇ ಆದ ಸ್ವತಂತ್ರ, ಹಕ್ಕು ಮತ್ತು ಕರ್ತವ್ಯಗಳ ಸಂಹಿತೆಯನ್ನು ಹೊಂದಿರುವ ಕುಟುಂಬ ಸಂಸ್ಥೆ ಅಥವಾ ಧಾರ್ಮಿಕ ಸಂಸ್ಥೆಗಳು ಇತರ ಪಾತ್ರ ಅಥವಾ ಸಂಸ್ಥೆಗಳನ್ನು ಬಹುವಾಗಿ ಅವಲಂಬಿಸುವುದಿಲ್ಲ. ಅಂತೆಯೇ ಬರಿ ವ್ಯವಹಾರಿಕೆಯಿಂದ ಕೂಡಿರುವ ಸ್ಪರ್ಧಾತ್ಮಕ ವಾಣಿಜ್ಯೋದ್ಯಮ, ಅನೇಕ ಮಾನವಿಯ ಮೌಲ್ಯಗಳಿಗೆ ಅಡ್ಡಿ ಪಡಿಸಬಹುದು.

ಅನೇಕ ವಿಧವಾದ ಪಾತ್ರಗಳಲ್ಲಿ ಮನುಷ್ಯರು ತೊಡಗುವುದರಿಂದ ಅದರಲ್ಲಿ ಪಾತ್ರ ವಿವಾದ ಸದಾ ಕಂಡುಬರುತ್ತದೆ. ಉದಾ: ಉದ್ಯೋಗಸ್ಥ ಮಹಿಳೆಯು ಕಛೇರಿ ವೇಳೆಯಲ್ಲೂ ಉದ್ಯೋಗಿಯಾಗಿ ಪೂರ್ಣಾವಧಿ ದುಡಿಯುತ್ತಿರುವಾಗಲೇ ಆಕೆಯು ಮನೆಯಲ್ಲಿ ಗೃಹಿಣಿಯಾಗಿಯೂ ತನ್ನ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ.ಆಕೆಯ ಪತಿಕೂಡ ತನ್ನ ಪತ್ನಿಯು ಒಂದೆಡೆ ಸಂಪಾದಿಸಿರುವುದನ್ನು ಇನ್ನೊಂದೆಡೆ ಗೃಹಕೃತ್ಯವನ್ನು ಕೂಡ ನಿರ್ವಹಿಸಬೇಕೆಂದು ಬಯಸುತ್ತಾನೆ. ಹೀಗಾಗಿ ಮಹಿಳೆಯು ಎರಡು ಕರ್ತವ್ಯಗಳನ್ನು ನಿಭಾಯಿಸಲು ಸಮಯಾವಕಾಶ ಸಾಲದೆ ಅಥವಾ ಏಕ ಕಾಲಕ್ಕೆ ನಿಭಾಯಿಸಲು ಸಾಧ್ಯವಿಲ್ಲದೆ ಸಮಸ್ಯೆಗೀಡಾಗುತ್ತಾಳೆ. ಈ ಸಮಸ್ಯೆಗೆ ಹೆಚ್ಚಾಗಿ ಹೊಣೆಗಾರಳಲ್ಲ ಆದರೆ ಆಕೆಯ ಪಾತ್ರಗಳಿಂದ ಕೂಡಿದ ಒಟ್ಟು ಸಾಮಾಜಿಕ ಸನ್ನಿವೇಶ ಅಂದರೆ ತಪ್ಪು ಅವಳದಲ್ಲ ಸಾಮಾಜದ್ದು. ಇಂತಹ ಸಮಸ್ಯೆಗಳನ್ನು ನಿವಾಹಿಸಲು ಅನೇಕ ಮಾರ್ಗಗಳಿವೆ, ವ್ಯಕ್ತಿ ತನ್ನ ಆದ್ಯ ಕರ್ತವ್ಯಕ್ಕೆ ಹೆಚ್ಚಿನ ಮನ್ನಣೆ ಕೊಟ್ಟು ಪಾತ್ರವನ್ನು ಮೊದಲು ನಿರ್ವಸಬೇಕಾಗುತ್ತದೆ. ಹೆಂಡತಿಯಾದವಳು ಉದ್ಯೋಗಸ್ಥಳಾಗಿದ್ದರೂ ಸಹ ಮೊದಲು ತನ್ನ ಪತಿ ಹಾಗೂ ಮಕ್ಕಳನ್ನು ಸಲಹಿ ನಂತರ ತನ್ನ ಉದ್ಯೋಗಕ್ಕೆ ಪ್ರಾಶಸ್ತ್ಯ ನೀಡುವುದು ಇಂತಹ ಪರಿಹಾರಗಳಲ್ಲಿ ಒಂದು.

## 2.3 ಅಂತಸ್ತು

ಸಾಮಾಜಿಕ ನಡವಳಿಕೆಯು ಅನೇಕ ಸಂಗತಿಗಳನ್ನು ಅವಲಂಬಿಸಿರುತ್ತದೆ. ಅಂತಹುದೇ ಒಂದು

ಸಂಗತಿ ಸಾಮಾಜಿಕ ಅಂತಸ್ತು. ವ್ಯಕ್ತಿ ಯಾರೇ ಆಗಿರಲಿ, ಆ ವ್ಯಕ್ತಿ ಗಂಡಸೋ, ಹೆಂಗಸೋ, ಯಾರ ಕುಟುಂಬಕ್ಕೆ ಸೇರಿದ್ದು, ವೈವಾಹಿಕ ಸ್ಥಾನಮಾನ ಎಂತಹುದು ಆ ವ್ಯಕ್ತಿಯ ಗುಣಾನುಗುಣಗಳೇನು ಇವೇ ಮುಂತಾದ ಸಂಗತಿಗಳು ವ್ಯಕ್ತಿಯ ವರ್ತನೆಯನ್ನು ನಿರ್ಧರಿಸುತ್ತವೆ. ರಾಲ್ಫ್ ಲಿಂಟನ್‌ನು ಸಾಮಾಜಿಕ ದರ್ಜೆಯ ನಿರೂಪಣೆಯನ್ನು ಈ ರೀತಿಯಾಗಿ ಅಭಿಪ್ರಾಯಿಸಿದ್ದಾರೆ. "ಹಕ್ಕು ಹಾಗೂ ಕರ್ತವ್ಯಗಳ ಮೊತ್ತವೇ ಅಂತಸ್ತು"ಅಂದರೆ ಗುಂಪಿನಲ್ಲಿ ವ್ಯಕ್ತಿಯನ್ನು ಗುರುತಿಸುವುದೇ ಅಲ್ಲದೇ ಸಾಮಾಜಿಕ ಜಾಲದಲ್ಲಿ ಆ ವ್ಯಕ್ತಿಯು ಹೊಂದಿರುವ ಪರಸ್ಪರ ಹಕ್ಕು ಮತ್ತು ಕರ್ತವ್ಯಗಳನ್ನು ಸೂಚಿಸುವುದೇ ಆಗಿರುತ್ತದೆ. **[Rolflinton, cultural background of personality, kegan paul,London, 1947.]**ಅಂತಸ್ತು ಎಂದರೆ, ಸ್ಥಾನವನ್ನು ಆಕ್ರಮಿಸಿಕೊಂಡಿರುವವನಿಂದ ಹಾಗೂ ಅವನೊಡನೆ ಸಂಪರ್ಕ ಬೆಳೆಸುವ ವ್ಯಕ್ತಿಗಳಿಂದ ನಿರೀಕ್ಷಿಸುವ ನಡವಳಿಕೆಗಳು.

ಪ್ರತಿಯೊಬ್ಬ ವ್ಯಕ್ತಿಯು ಸಮಾಜದಲ್ಲಿ ಹಲವಾರು ಅಂತಸ್ತುಗಳನ್ನು ಹೊಂದಿರುತ್ತಾನೆ. ವ್ಯಕ್ತಿ ಒಬ್ಬ ಭಾರದತ ಪ್ರಜೆಯಾಗಿರಬಹುದು ಅಥವಾ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕನಾಗಿರಬಹುದು ಆತ ಗಂಡಸಾಗಿರಬಹುದು ಹಾಗೂ ಒಬ್ಬ ಪತಿಯೂ ಆಗಿರಬಹುದು. ಈ ಮೇಲಿನ ಪ್ರತಿಯೊಂದು ಸಮಾಜದಲ್ಲಿ ಅವನ ಅಂತಸ್ತಾಗಿದ್ದು ಅವನ ಸಾಮಾಜಿಕ ಪಾತ್ರದೊಡನೆ ಸಂಬಂಧವಿರುತ್ತದೆ. ವ್ಯಕ್ತಿ ತನ್ನ ಪ್ರತಿಯೊಂದು ಪಾತ್ರದಲ್ಲೂ ವರ್ಚಸ್ಸು ಹಾಗೂ ಪಾತ್ರ ನಡವಳಿಕೆಗಳನ್ನು ನಿರ್ಧರಿಸುತ್ತಾನೆ. ವ್ಯಕ್ತಿಯ ನಡವಳಿಕೆಯು ಆತನ ಸ್ಥಾನಮಾನದ ಮೇಲೆ ಪ್ರಭಾವ ಬೀರುತ್ತಾನೆ. ಸಾಮಾಜಿಕ ರಚನೆಯಲ್ಲಿ ಪ್ರತಿಯೊಬ್ಬರಿಗೂ ಸ್ಥಾನವಿದೆ ಎಂಬ ಅಂಶವು ಸಮಾಜದಲ್ಲಿ ಶಿಸ್ತನ್ನೂ ತರಬಲ್ಲದಾಗಿದೆ. ಇದೇ ಅಂಶವು ಸಾಮಾಜಿಕ ಸನ್ನಿವೇಶಗಳಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಮಾರ್ಗದರ್ಶನ ಮಾಡುವುದರ ಜೊತೆಗೆ ಸಮಾಜದಲ್ಲಿ ವ್ಯಕ್ತಿಯ ಆಸೆ ಆಕಾಂಕ್ಷೆಗಳನ್ನು ನಿರೂಪಿಸಿ ನಿಯಂತ್ರಿಸುತ್ತದೆ. ಸಮಕಾಲೀನ ಸಮಾಜದಲ್ಲಿ ಸಾಮಾಜಿಕ ವ್ಯವಸ್ಥೆ ತರುವುದರಲ್ಲಿ ಸಾಮಾಜಿಕ ಅಂತಸ್ತಿನ ಪಾತ್ರ ಬಹಳ ಕಿರಿದಾಗಿದೆ ಎಂದು ಹೇಳಬಹುದು. ಇಷ್ಟಾದರೂ ನಾವು ವಿರೋಧಾಭಾಸವೆಂದರೆ ಜನ ಸಾಮಾಜಿಕ ಅಂತಸ್ತಿಗಾಗಿ ಆಶಿಸುತ್ತಿರುವುದು ಇವತ್ತಿಗೂ ಕೂಡ ಅಂತಸ್ತು ಮರ್ಯಾದೆಯನ್ನು ಗಳಿಸುವ ಆಸೆಯು ಮಾನವನಲ್ಲಿ ಒಂದು ಪ್ರವೃತ್ತಿಯಾಗಿ ಮಾರ್ಪಡಿಸಿದೆ.

## 2.4 ವಿಧಗಳು

ಸಮಾಜಶಾಸ್ತ್ರಜ್ಞರು ಎರಡು ವಿಧವಾದ ಅಂತಸ್ತುಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ

- ವಿದಿತ ಅಂತಸ್ತು
- ಸಾಧಿತ ಅಂತಸ್ತು

ವಿಧಿತ ಅಂತಸ್ತಿನಲ್ಲಿ ವ್ಯಕ್ತಿಯು ಉತ್ತರಾಧಿಕಾರದ ಮೂಲಕ ಸ್ಥಾನವನ್ನು ಕಳಿಸಿಕೊಂಡಿರುತ್ತಾನೆ. ಇಲ್ಲಿ ಸ್ಥಾನಮಾನವು ಸ್ವಯಂ ಶಕ್ತಿಯಿಂದ ಪಡೆದುಕೊಂಡಾದ್ದಾಗಿರುವುದಿಲ್ಲ. ಉದಾಹರಣೆಗೆ, ಗ್ರಾಮೀಣ ಭಾರತದಲ್ಲಿ ಪಟೇಲನ ಮನೆಯಲ್ಲಿ ಹುಟ್ಟಿದ ಹಿರಿಯ ಪುತ್ರ ಪಟೇಲಗಿರಿಯನ್ನು ಪಡೆಯುತ್ತಾನೆ. ಸಮಾಜದಲ್ಲಿ ಈತನ ಭವಿಷ್ಯ, ಸ್ಥಾನಮಾನಗಳು ಹುಟ್ಟಿನಿಂದಲೇ ನಿರ್ಧರಿತವಾಗಿರುತ್ತವೆ. ಇಂತಹ ಸಂದರ್ಭಗಳಲ್ಲಿ ವ್ಯಕ್ತಿಯ ಗುಣ ಕನಿಷ್ಟವಾಗಿರುತ್ತದೆ. ವ್ಯಕ್ತಿಯ ಸ್ಥಾನಮಾನ ಹುಟ್ಟಿನಿಂದಲೇ ಸ್ಥಾಪಿತವಾಗಿರುತ್ತಾದ್ದರಿಂದ ಇಲ್ಲಿ ಸಾಮಾಜಿಕ ಅಂತಸ್ತುಗಳು ಸಮಾಜದಿಂದ ಸಮಾಜಕ್ಕೆ ಬೇರೆಯಾಗಿರುತ್ತವೆ. ಉದಾಹರಣೆಗೆ, ಆಧುನಿಕ ಸಮಾಜದಲ್ಲಿ ಜನರು

ಸಾಧಿತ ಸ್ಥಾನಮಾನಗಳಿಗೆ ಹೆಚ್ಚಿನ ಗೌರವ ಕೊಡುತ್ತಾರೆ. ಆಧಿನಿಕ ಸಮಾಜದಲ್ಲಿನ ವಾಣಿಜ್ಯ ವ್ಯವಹಾರಗಳು, ವಿಪರೀತ ಶ್ರಮ ವಿಭಜನೆ, ನಗರ ಜೀವನ ಸ್ಥಿತಿಗಳು ಮತ್ತು ಸಾಮಾಜಿಕ ಬದಲಾವಣೆಗಳು ವಿಧಿತ ಅಂತಸ್ತಿಗಿಂತ ಸಾಧಿತ ಅಂತಸ್ತಿನ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತವೆ.

ಜಾತಿ ಪದ್ಧತಿಯು ಪ್ರಧಾನವಾದ ಭಾರತದಲ್ಲಿ ಹಲವಾರು ಕಾರಣಗಳಿಂದಾಗಿ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿನ ಕೆಳಗಿನ ಅಂತಸ್ತಿನವರೂ ಮೇಲಿನ ಅಂತಸ್ತಿನವರ ಮಟ್ಟದಲ್ಲಿ ಜೀವನ ನಡೆಸುತ್ತಿರುವುದನ್ನು ನೋಡಬಹುದು. ಆಧುನಿಕ ಕೈಗಾರಿಕಾ ಸಮಾಜದ ಮುಖ್ಯ ಲಕ್ಷಣವೆಂದರೆ, ಕೆಲವೊಂದು ಸಾಧನೆಗಳನ್ನು ಅಸ್ತೀಕರಿಸುವುದೇ ಅಲ್ಲದೆ ಅಂತಸ್ತು ಸಾಮಾಜಿಕ ಚಲನೆಯ ಗುಣವೇ ಆಗಿದೆ. ಅಮೇರಿಕಾದಂತಹ ಸಮಾಜದಲ್ಲಿ ಒಂದು ಅಂತಸ್ತಿನಿಂದ ಇನ್ನೊಂದು ಅಂತಸ್ತಿಗೆ ಸಾಧನೆಯ ಮೂಲಕ ಮೇಲೇರಲು ಸಾಧ್ಯವಿದೆ. ಈ ರೀತಿಯ ಅವಕಾಶಗಳು ಇರುವಾಗ ತಮಗಿಷ್ಟ ಬಂದ ಅಂತಸ್ತಿಗೆ ಸೇರಲು ಆಶಿಸುವ ವ್ಯಕ್ತಿಗಳು ಪ್ರಸ್ತುತ ಅಂತಸ್ತಿನ ಪಾತ್ರವನ್ನು ಎಷ್ಟರ ಮಟ್ಟಿಗೆ ಉತ್ತಮವಾಗಿ ನಿರ್ವಹಿಸಬಹುದೊ ಅಷ್ಟು ಉತ್ತಮವಾಗಿ ನಿರ್ವಹಿಸಿ ಅಂತಸ್ತನ್ನು ಉತ್ತಮಪಡಿಸಿಕೊಳ್ಳುತ್ತಾರೆ.

ವಿಧಿತ ಮತ್ತು ಸಾಧಿತ ಅಂತಸ್ತುಗಳೆರಡನ್ನು ಪ್ರತಿಯೊಂದು ಸಮಾಜದಲ್ಲೂ ಕಾಣಬಹುದಾಗಿದೆ. ಸೈದ್ಧಾಂತಿಕವಾಗಿ ಇವೆರಡೂ ವಿರೋಧವಾಗಿದ್ದರೂ ಕಾರ್ಯಚಟುವಟಿಕೆಗಳಲ್ಲಿ ಒಂದು ಇನ್ನೊಂದನ್ನು ಅವಲಂಬಿಸಿವೆ. ಇದರಿಂದಾಗಿಯೇ ಇವು ಸಮಾಜಕ್ಕೆ ಅಗತ್ಯವಾಗಿವೆ. ವ್ಯಕ್ತಿ ಜೀವನದಲ್ಲಿ ವಿಧಿತ ಅಂತಸ್ತು ಮೊದಲಿಗೆ ಒಂದು ಸಾಂಸ್ಕೃತಿಕ ಪರಂಪರೆ ವರ್ಗಾವಣೆಯನ್ನು ಉಂಟುಮಾಡುವಾಗ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ವ್ಯಕ್ತಿಯು ಮೊದಲು ವಿಧಿತ ಅಂತಸ್ತನ್ನು ನೀಡುವ ತನ್ನ ಕುಟುಂಬದ ಬಗೆಗೆ ಗಮನಗೊಟ್ಟು ನಂತರ ಗುಂಪಿನ ಬಗೆಗೆ ಯೋಚಿಸುತ್ತಾನೆ. ಏಕೆಂದರೆ, ಸಾಧಿತ ಅಂತಸ್ತನ್ನು ನೀಡಿದ ಸುರಕ್ಷತೆಯನ್ನು ವಿದಿತ ಅಂತಸ್ತು ಕೊಡುತ್ತದೆ ಆದರೆ ಸಾಧಿತ ಅಂತಸ್ತು ಸರಿಯಾದ ಸ್ಥಳದಲ್ಲಿ ಸರಿದೂಗುವ ವ್ಯಕ್ತಿಯನ್ನು ಇರಿಸುವಾಗ ಮುಖ್ಯವಾಗಿದೆ. ಮುಖ್ಯಸ್ಥನ ಕುಟುಂಬಕ್ಕೆ ಹುಟ್ಟಿದ ಪ್ರತಿಯೊಬ್ಬ ಪುರುಷನೂ ಆಸ್ಥಾನಕ್ಕೆ ಸರಿಯಾಗಿ ಹೊಂದಿಕೊಂಡು ಹೋಗುವನೆಂದು ಹೇಳಲಾಗುವುದಿಲ್ಲ. ಜವಾಬ್ದಾರಿಯುತ ಸ್ಥಾನವು ವ್ಯಕ್ತಿಯಿಂದ ಹೆಚ್ಚಿನ ಬುದ್ಧಿವಂತಿಕೆ ಹಾಗೂ ಶ್ರಮವನ್ನು ನಿರೀಕ್ಷಿಸುತ್ತದೆ. ಉದಾಹರಣೆಗೆ, ದೈವೀಕೃಪೆಯಿಂದ ರಾಜ್ಯವಾಳುವ ದೊರೆಯು ರಾಜನಿಗೆ ಯುಕ್ತವಾದ ನಡವಳಿಕೆಯನ್ನು ಕಲಿತಿರುವುದು ಅವಶ್ಯಕ. ವಿಧಿತ ಅಂತಸ್ತು ಸುರಕ್ಷತೆಯನ್ನು ಕೊಟ್ಟರೆ ಸಾಧಿತ ಅಂತಸ್ತಿನಲ್ಲಿ ಇದನ್ನು ಕಾಣುವುದಿಲ್ಲ. ವ್ಯಕ್ತಿಯು ಸದಾ ಸ್ಪರ್ಧೆಯಲ್ಲಿ ನಿರತನಾಗಿರಲು ಇಚ್ಛಿಸುವುದಿಲ್ಲ. ಇದರಿಂದಾಗಿಯೇ ಕೂಲಿಕಾರರು, ವೃತ್ತಿಬಾಂಧವರು ಒಟ್ಟುಗೂಡಿರುವುದನ್ನು ನೋಡುವುದು ಇದಕ್ಕೆ ವ್ಯತಿರಿಕ್ತವಾಗಿ ಸಾಧಿತ ಅಂತಸ್ತು ಸರಿಯಾದ ಸ್ಥಳಗಳಲ್ಲಿ ಸರಿಹೊಂದುವ ವ್ಯಕ್ತಿಯನ್ನು ಇಟ್ಟು ವ್ಯಕ್ತಿಯು ತನ್ನ ಸ್ಥಾನಮಾನಗಳನ್ನು ಇನ್ನೂ ಉತ್ತಮಪಡಿಸಿಕೊಳ್ಳಲು ಪ್ರೋತ್ಸಾಹಿಸುತ್ತದೆ. ಸ್ಪರ್ಧೆಗಳಿಲ್ಲದ ಕಡೆಗಳಲ್ಲಿ ವ್ಯಕ್ತಿ ತನ್ನ ಕರ್ತವ್ಯ ಮಾಡದೆಯೇ ಪರಿಣಾಮ ಪಡೆಯಲು ಸಾಧ್ಯವಿರುತ್ತದೆ. ಬದಲಾಗುತ್ತಿರುವ ನಮ್ಮ ಸಮಾಜದಲ್ಲಿ ~~ಕೆಲವೊಮ್ಮೆ ಸಾಧಿತ ಅಂತಸ್ತು ವಿಧಿತ ಅಂತಸ್ತಿನ ಮೇಲೆ ಅತಿಕ್ರಮಣ ಮಾಡುತ್ತದೆ. ಸಾಮರ್ಥ್ಯವುಳ್ಳ~~ ಸ್ತ್ರೀ, ಲಿಂಗ, ವಯಸ್ಸು ಮತ್ತು ರಕ್ತ ಸಂಬಂಧಗಳ ಪಾತ್ರಗಳನ್ನು ಮೀರಿ ಪುರುಷನ ಅಂತಸ್ತಿಗೆ ~~ಏರಬಲ್ಲವಳಾಗಿದ್ದಾಳೆ. ಅಂತೆಯೇ ಕಿರಿಯ ವಯಸ್ಕರು ಸ್ವಸಾಮರ್ಥ್ಯದಿಂದ ಹಿರಿಯ ಹುದ್ದೆಗೇರಲು,~~ ಶ್ರೀಮಂತನಾಗಲು ಸಾಧ್ಯತೆಗಳಿವೆ.

## 2.5 ಸಾಮಾಜಿಕ ವ್ಯವಸ್ಥೆ: ಅರ್ಥ

ಅನ್ಯೋನ್ಯ ಕ್ರಿಯೆಗಳ ಕ್ರಮಬದ್ಧವಾದ ವ್ಯವಸ್ಥಿತ ಏರ್ಪಾಡೇ ಸಾಮಾಜಿಕ ವ್ಯವಸ್ಥೆಯಾಗಿರುತ್ತದೆ. ಪರಸ್ಪರರಿಗೆ ಅನ್ಯೂನ್ಯ ಸಂಬಂಧಗಳ ಜಾಲವೇ ಸಮಾಜ. ಬಹು ಸಂಖ್ಯಾತ ವ್ಯಕ್ತಿಗಳು ಒಟ್ಟಾರೆಯಾಗಿ ಇಟ್ಟುಕೊಂಡಿರುವ ಸಾಂಸ್ಕೃತಿಕ ನಿಯಮ ಹಾಗೂ ಅರ್ಥಗಳಿಗೆ ಅನುಗುಣವಾಗಿ ಪರಸ್ಪರ ಪ್ರತಿಸ್ಪಂಧಿಸುವುದೇ ಸಾಮಾಜಿಕ ವ್ಯವಸ್ಥೆ ಎಂಬುದಾಗಿ ವ್ಯಾಖ್ಯಾನಿಸಬಹುದು.

ಸಾಮಾಜಿಕ ವ್ಯವಸ್ಥೆಯ ಅಂಗಭಾಗಗಳೆಂದರೆ ವ್ಯಕ್ತಿಗಳು ಈ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಪಾತ್ರವಿರುತ್ತದೆ. ಅವನು ಅನ್ಯೋನ್ಯ ಸಂಬಂಧಗಳಲ್ಲಿ ಭಾಗಿಯಾಗಿರುತ್ತಾನೆ. ಇತರ ವ್ಯಕ್ತಿಗಳ ವರ್ತನೆಯ ಮೇಲೆ ಪ್ರಭಾವ ಬೀರುವಂತವನಾಗಿರುತ್ತಾನೆ. ಇತರ ವರ್ತನೆಗಳಿಂದ ಪ್ರಭಾವಿತನಾಗಿರುತ್ತಾನೆ. ವ್ಯಕ್ತಿಗಳ ಮತ್ತು ಗುಂಪುಗಳ ವರ್ತನೆ ಯಾವಾಗಲೂ ಸಾಮಾಜಿಕ ಸಂಸ್ಥೆಗಳಿಂದ ನಿಯಂತ್ರಿತವಾಗಿರುತ್ತವೆ. ವಿವಿಧ ಗುಂಪುಗಳು ಸ್ವತಂತ್ರವಾಗಿ ಪ್ರತ್ಯೇಕಿತ ರೀತಿಯಲ್ಲಿ ಕಾರ್ಯನಿರ್ವಹಿಸಲಾರವು. ಯಾವುದೇ ಒಂದು ವರ್ಗೀಕೃತ ವ್ಯವಸ್ಥೆಯ ಸಂಗತ ಭಾಗಗಳಾಗಿ ಮಾತ್ರ ಅವು ಕಾರ್ಯ ನಿರ್ವಹಿಸಬಲ್ಲವು. ಸಾಮಾಜಿಕ ನಿಯಮಗಳಿಗೆ ಅವು ಬದ್ಧವಾಗಿರಲೇಬೇಕು. ಈ ಗುಂಪುಗಳ ಅನ್ಯೋನ್ಯ ಕ್ರಿಯೆಯ ಹಾಗೂ ಅಂತರ್ ಸಂಬಂಧಗಳ ಮೂಲಕ ಒಂದು ವ್ಯವಸ್ಥೆ ವಿನ್ಯಾಸಕೊಳ್ಳುತ್ತದೆ ಅದನ್ನೇ ಸಾಮಾಜಿಕ ವ್ಯವಸ್ಥೆ ಎನ್ನಬಹುದು.

ಅನೇಕ ಅಂಶಗಳ ಕ್ರಮಬದ್ಧ ವ್ಯವಸ್ಥಿತ ಏರ್ಪಾಡಾಗಿರುವುದರಿಂದ ಸಾಮಾಜಿಕ ವ್ಯವಸ್ಥೆಯನ್ನು ಒಂದು ಸಂಘಟನೆ ಎನ್ನಬಹುದು. ಆದರೆ ಸಂಘಟನೆಯ ರೀತಿಗಿಂದ ಭಿನ್ನವಾಗಿ ಇದು ತನ್ನ ಅಂಗಗಳ ಅನ್ಯೂನ್ಯ ಕ್ರಿಯೆ ಹಾಗೂ ಕಾರ್ಯತ್ಮಕ ಅಂತರ್ ಸಂಬಂಧಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ. ಸಾಮಾಜಿಕ ವ್ಯವಸ್ಥೆಯೊಳಗೆ ಅನೇಕ ಉಪವ್ಯವಸ್ಥೆಗಳಿರುತ್ತವೆ. ರಾಜಕೀಯ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ, ಶೈಕ್ಷಣಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ ಇತ್ಯಾದಿ. ಈ ಎಲ್ಲಾ ಉಪವ್ಯವಸ್ಥೆಗಳಲ್ಲಿಯೂ ಅನ್ಯೋನ್ಯ ಕ್ರೀಯೆಗೆ ಒಳಗಾಗುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಕಾರ್ಯವನ್ನು ನಿರ್ವಹಿಸಬೇಕಾಗಿರುತ್ತದೆ.

## 2.6 ಲಕ್ಷಣಗಳು

- **ಸಾಮಾಜಿಕ ವ್ಯವಸ್ಥೆಯು ಸಾಮಾಜಿಕ ಅನ್ಯೂನ್ಯ ಕ್ರಿಯೆಗಳನ್ನು ಆಧರಿಸಿದೆ.**

ಸಾಮಾಜಿಕ ವ್ಯವಸ್ಥೆಯು ಹಲವಾರು ವ್ಯಕ್ತಿಗಳ ಅನ್ಯೊನ್ಯಕ್ರಿಯೆಗಳು ಒಂದು ವ್ಯವಸ್ಥೆಯನ್ನು ಸೃಷ್ಟಿಸುತ್ತವೆ. ಇಂತಹ ವ್ಯವಸ್ಥೆಯನ್ನು ಸಾಮಾಜಿಕ ವ್ಯವಸ್ಥೆ ಎಂಬುದಾಗಿ ಕರೆಯುತ್ತಾರೆ. ಸಾಮಾಜಿಕ ವ್ಯವಸ್ಥೆಯು ಒಬ್ಬ ವ್ಯಕ್ತಿ ಕ್ರಿಯೆಯಿಂದ ಸೃಷ್ಟಿಯಾಗಲಾರದು. ಸಾಮಾಜಿಕ ವ್ಯವಸ್ಥೆಯು ಸೃಷ್ಟಿಯಾಗಲು ಅನೇಕ ವ್ಯಕ್ತಿಗಳ ಅನ್ಯೋನ್ಯ ಕ್ರಿಯೆಗಳು ಅಗತ್ಯವಾಗುತ್ತವೆ.

- **ಅನ್ಯೊನ್ಯ ಕ್ರಿಯೆಯು ಅರ್ಥ ಪೂರ್ಣವಾಗಿರಬೇಕು**

ಸಾಮಾಜಿಕ ವ್ಯವಸ್ಥೆಯು ಅರ್ಥಪೂರ್ಣ ಅನ್ಯೋನ್ಯ ಕ್ರಿಯೆಗಳ ಸಂಘಟನೆಯಾಗಿದೆ. ಗೊತ್ತುಗುರಿಯಿಲ್ಲದ, ಅರ್ಥಪೂರ್ಣವಲ್ಲದ ಅನ್ಯೋನ್ಯ ಕ್ರಿಯೆಗಳು ಸಾಮಾಜಿಕ

ವ್ಯವಸ್ಥೆಯನ್ನುಸೃಷ್ಟಿಸುತ್ತವೆ. ಸಂಪ್ರದಾಯಗಳು, ಪದ್ಧತಿಗಳು, ನೈತಿಕ ನಿಯಮಗಳು, ಕಾನೂನುಗಳು, ಸಂಸ್ಥೆಯಂತಹುಗಳಲ್ಲಿ ಸಾಮಾಜಿಕ ಸಂಬಂಧಗಳು ಅಭಿವ್ಯಕ್ತಿಯನ್ನು ಕಾಣಬಹುದು. ಸಾಮಾಜಿಕ ವ್ಯವಸ್ಥೆಯು ಕ್ರಮವಾಗಿ ವ್ಯವಸ್ಥೆಗೊಳಿಸಲಾದ ಅನೇಕ ಸಾಮಾಜಿಕ ಸಂಬಂಧಗಳ ಅಭಿವ್ಯಕ್ತಿಯನ್ನು ಬಿಂಬಿಸುತ್ತವೆ.

- **ಸಾಮಾಜಿಕ ವ್ಯವಸ್ಥೆಯು ಏಕತೆಯನ್ನು ತರುತ್ತದೆ**

ಅಂಗ ಭಾಗಗಳಾದ ಸಂಸ್ಥೆಗಳು, ಪದ್ಧತಿಗಳು, ಸಂಪ್ರದಾಯಗಳು, ಕ್ರಮಗಳು ಮತ್ತು ಕಾನೂನುಗಳು ಯಾವ ಯಾವ ರೀತಿಯಲ್ಲಿಯೂ ಸಂಘಟಿತವಾದರೆ ಸಾಮಾಜಿಕ ವ್ಯವಸ್ಥೆಯಾಗಲಾರದು. ಸಾಮಾಜಿಕ ವ್ಯವಸ್ಥೆ ಒಂದು ಸ್ಥಿತಿ ಉಂಟಾಗುವುದು ಅಂಗಭಾಗಗಳು ಸಮಗ್ರ ರೀತಿಯಲ್ಲಿ ವ್ಯವಸ್ಥೆಗೊಂಡಾಗ ಮಾತ್ರ. ಸಾಮಾಜಿಕ ವ್ಯವಸ್ಥೆಯಲ್ಲಿ ಅನ್ಯೂನ್ಯಕ್ರಿಯೆ ನಡೆಸುವ ಅಂಗ ಭಾಗಗಳಲ್ಲಿ ಕ್ರಮಬದ್ಧತೆಯಿರುತ್ತದೆ.

ಕಾರ್ಯಾತ್ಮಕ ಸಂಬಂಧಗಳ ಆಧಾರದ ಮೇಲೆ ಸಾಮಾಜಿಕ ವ್ಯವಸ್ಥೆಯ ಭಾಗಗಳು ಪರಸ್ಪರ ಸಂಬಂಧಿತವಾಗಿರುತ್ತವೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ಅಂಗಕ್ಕೂ ನಿರ್ದೇಶಿತ ಪಾತ್ರವಿರುತ್ತದೆ. ಈ ಪಾತ್ರವನ್ನು ಅದು ನಿಯಮಾನುಸಾರವಾಗಿ ನಿರ್ವಹಿಸುತ್ತದೆ. ಇಂತಹ ವಿವಿಧ ಅಂಗಗಳು ಕಾರ್ಯಾತ್ಮಕ ಸಂಬಂಧಗಳ ಮೇಲೆ ಒಗ್ಗೂಡಿರುತ್ತವೆ. ನಿಜವಾದ ಅರ್ಥದಲ್ಲಿ ಸಾಮಾಜಿಕ ವ್ಯವಸ್ಥೆಯು ಪರಸ್ಪರ ಅವಲಂಬಿತ ಮತ್ತು ಅನ್ಯೂನ್ಯ ಕ್ರಿಯೆ ನಡೆಸುವ ಘಟಕಗಳ ಏರ್ಪಾಡೇ ಆಗಿದೆ. ಈ ರೀತಿಯಾದ ಕಾರ್ಯಾತ್ಮಕ ಸಂಬಂಧಗಳನ್ನು ಸಾಮಾಜಿಕ ವ್ಯವಸ್ಥೆಯ ಪರಿಕಲ್ಪನೆಯಲ್ಲಿ ಅತ್ಯಂತ ಮಹತ್ವದ ಸ್ಥಾನ ನೀಡಿದ್ದಾರೆ.

- **ಸಾಮಾಜಿಕ ವ್ಯವಸ್ಥೆಯು ಸಾಂಸ್ಕೃತಿಕ ವ್ಯವಸ್ಥೆಯ ಜೊತೆ ಸಂಬಂಧವನ್ನು ಹೊಂದಿದೆ.**

ಸಾಮಾಜಿಕ ವ್ಯವಸ್ಥೆಯು ಸಾಂಸ್ಕೃತಿಕ ವ್ಯವಸ್ಥೆಯ ಜೊತೆ ನಿಕಟವಾದ ಸಂಬಂಧವನ್ನು ಹೊಂದಿದೆ. ಸಂಸ್ಕೃತಿಯು ಸಮಾಜದಲ್ಲಿರುವ ವ್ಯಕ್ತಿಗಳ ಅಂತರ್ ಸಂಬಂಧಗಳು ಮತ್ತು ಅನ್ಯೂನ್ಯ ಪ್ರಕ್ರಿಯೆಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸುತ್ತವೆ. ಅಂತರ್ ಸಂಬಂಧಗಳು ಮತ್ತು ಅನ್ಯೊನ್ಯ ಕ್ರಿಯೆಗಳನ್ನಲ್ಲದೆ ಇವುಗಳ ಮಧ್ಯೆ ಸಮತೋಲನ ಸ್ಥಿತಿ ಮತ್ತು ಅನ್ಯೊನ್ಯ ಸಂಬಂಧಗಳನ್ನು ಕಾಪಾಡುತ್ತದೆ.

- **ಸಾಮಾಜಿಕ ವ್ಯವಸ್ಥೆಯು ಪರಿಸರ ಅಂಶಗಳನ್ನೊಳಗೊಂಡಿದೆ**

ಯಾವುದೇ ಸಾಮಾಜಿಕ ವ್ಯವಸ್ಥೆಯು ನಿರ್ಧಿಷ್ಟ ಕಾಲ, ನಿರ್ಧಿಷ್ಟ ಭೂಪ್ರದೇಶ ಮತ್ತು ನಿರ್ಧಿಷ್ಟ ಸಮಾಜಕ್ಕೆ ಸಂಬಂಧಿಸಿದೆ. ಅದರ ಅರ್ಥ ಸಾಮಾಜಿಕ ವ್ಯವಸ್ಥೆಯು ಎಲ್ಲಾ ಕಾಲಗಳಲ್ಲೂ ಎಲ್ಲಾ ಭೂ ಪ್ರದೇಶಗಳಲ್ಲೂ ಹಾಗೂ ಎಲ್ಲಾ ಸಮಾಜದಲ್ಲೂ ಒಂದೇ ಆಗಿರುವುದಿಲ್ಲ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಕಾಲ ಬದಲಾದಂತೆ ಸಾಮಾಜಿಕ ವ್ಯವಸ್ಥೆಯು ಬದಲಾಗುತ್ತದೆ. ಕೆಲವು ಧರ್ಮಗಳಲ್ಲಿ ವ್ಯವಸ್ಥೆ ಸ್ಥಗಿತವಾಗಿರದೆ ಚಲನಾಶೀಲವಾಗಿರುತ್ತದೆ. ಈ ಬದಲಾವಣೆಯಿಂದಾಗಿ ಸಾಮಾಜಿಕ ಸಮತೋಲನ ಕಳೆದು ಹೋಯಿತು ಎಂಬ ಅರ್ಥದಲ್ಲಿ ಕೆಲವು ಸಂದರ್ಭಗಳಲ್ಲಿ ಸಮತೋಲನಕ್ಕೆ ಧಕ್ಕೆಯುಂಟಾಗುವುದು. ಸಾಮಾಜಿಕ ಬದಲಾವಣೆಗಳುಂಟಾದಾಗ್ಯೂ ಸಾಮಾಜಿಕ ವ್ಯವಸ್ಥೆಯು ನಿರಂತರವಾಗಿ ಮುಂದುವರಿಯುತ್ತದೆ. ಗಂಡ ಹೆಂಡತಿ ಪಾತ್ರಗಳಲ್ಲಿ ಅನೇಕ

ಬದಲಾವಣೆಗಳುಂಟಾಗಬಹುದು. ರೂಢಿಯಲ್ಲಿ ಬದಲಾವಣೆಗಳುಂಟಾದರೂ ಕೌಟುಂಬಿಕ ವ್ಯವಸ್ಥೆಯು ಕೊನೆಗೊಂಡಿಲ್ಲ. ಸಾಮಾಜಿಕ ವ್ಯವಸ್ಥೆಯ ಸ್ವ ಹೊಂದಾಣಿಕೆ ಮಾಡಿಕೊಳ್ಳುವ ಗುಣವನ್ನು ಹೊಂದಿದೆ.

## 2.7 ಸಾಮಾಜಿಕ ರಚನೆ ಮತ್ತು ಸಾಮಾಜಿಕ ವ್ಯವಸ್ಥೆಯ ನಡುವಿನ ಸಂಬಂಧ

ಸಾಮಾಜಿಕ ರಚನೆ ಮತ್ತು ಸಾಮಾಜಿಕ ವ್ಯವಸ್ಥೆ ಈ ಎರಡು ಪರಿಕಲ್ಪನೆಗಳು ಪರಸ್ಪರ ಸಂಬಂಧಿಸಿವೆ. ಸಾಮಾಜಿಕ ವ್ಯವಸ್ಥೆಯು ಸಾಮಾಜಿಕ ರಚನೆಯ ಕಾರ್ಯಾತ್ಮಕ ವಿಷಯಕ್ಕೆ ಸಂಬಂಧಿಸಿದೆ. ಸಾಮಾಜಿಕ ರಚನೆ ಮತ್ತು ಸಾಮಾಜಿಕ ವ್ಯವಸ್ಥೆಯು ಕಾರ್ಯಪ್ರವೃತ್ತರಾಗಲು ಸಾಮಾಜಿಕ ರಚನೆಯು ಸಾಧನವಾಗಿರುತ್ತದೆ. ಯಾವುದೇ ಸಾಮಾಜಿಕ ರಚನೆಯ ಮೌಲ್ಯವು ಅದು ಯಾವ ರೀತಿ ಕಾರ್ಯವನ್ನು ನಿರ್ವಹಿಸುತ್ತದೆ ಎಂಬುದನ್ನು ಆಧರಿಸಿದೆ. ಯಾವಾಗ ಸಾಮಾಜಿಕ ರಚನೆಯು ಸರಿಯಾದ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುವುದೋ ಆಗ ನಾವು ಅದನ್ನು ಮಾರ್ಪಡು ಮಾಡಲು ಪ್ರಯತ್ನಿಸುತ್ತೇವೆ. ಉದಾಹರಣೆಗೆ, ಕುಟುಂಬವು ತನ್ನ ಉದ್ದೇಶನ್ನು ಪೂರೈಸಲು ವಿಫಲವಾದಾಗ ಅದನ್ನು ಮಾರ್ಪಾಡಿಸುತ್ತೇವೆ. ಬಹು ಪತ್ನಿತ್ವ ಕುಟುಂಬಕ್ಕೆ ಬದಲಾಗಿ ಏಕ ಪತ್ನಿತ್ವ ಕುಟುಂಬಕ್ಕೆ ಆದ್ಯತೆ ನೀಡುತ್ತೇವೆ. ಶೈಕ್ಷಣಿಕ ವ್ಯವಸ್ಥೆಯು ತನ್ನ ಉದ್ದೇಶಗಳನ್ನು ಈಡೇರಿಸಲು ವಿಫಲವಾದರೆ ಅದನ್ನು ಮಾರ್ಪಡಿಸಬಹುದು. ಕಾರ್ಯವಿಲ್ಲದ ರಚನೆಯು ಉಪಯೋಗವಿಲ್ಲದ್ದು ಮತ್ತು ಕಾರ್ಯವು ಯಾವಾಗಲೂ ಸಾಮಾಜಿಕ ರಚನೆಯ ಮೂಲಕವೇ ರಚಿತವಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಸಾಮಾಜಿಕ ರಚನೆ ಮತ್ತು ಸಾಮಾಜಿಕ ವ್ಯವಸ್ಥೆಗಳೆರಡೂ ಜೊತೆ ಜೊತೆಯಾಗಿ ಹೋಗುತ್ತವೆ. ಸಾಮಾಜಿಕ ರಚನೆ ಮತ್ತು ಸಾಮಾಜಿಕ ವ್ಯವಸ್ಥೆಗಳ ನಡುವೆ ಬೇರೊಂದು ರೀತಿಯ ಸಂಬಂಧವಿದೆ. ನೆರವೇರಬೇಕಾದ ಕಾರ್ಯಗಳ ಸ್ವರೂಪವು ಸಾಮಾಜಿಕ ರಚನೆಯ ಮೇಲೆ ಪ್ರಭಾವ ಬೀರುತ್ತದೆ. ಹಾಗೆಯೇ ರಚನೆಯಿಂದ ಅದು ನಿರ್ವಹಿಸುವ ಕಾರ್ಯದ ಮೇಲೆ ಪ್ರಭಾವವನ್ನು ಬೀರುತ್ತದೆ. ಸಾಮಾಜಿಕ ವ್ಯವಸ್ಥೆಯು ಪ್ರಜಾಪ್ರಭುತ್ವದ ರೀತಿಯಲ್ಲಿ ಕಾರ್ಯನಿರ್ವಹಿಸಬೇಕಾದರೆ ಸಾಮಾಜಿಕ ರಚನೆಯ ವಿವಿಧ ಭಾಗಗಳು ಪ್ರಜಾ ಪ್ರಭುತ್ವದ ಆಧಾರದ ಮೇಲೆ ವ್ಯವಸ್ಥಿತಗೊಂಡಿರಬೇಕು.

ಯಾವುದೇ ರಾಜ್ಯವು ಪ್ರಜಾಪ್ರಭುತ್ವದ ರಚನೆಯನ್ನು ಹೊಂದಿರದೆ ಪ್ರಜಾ ಪ್ರಭುತ್ವ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸಲಾರದು. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ನಮ್ಮಲ್ಲಿ ರಾಜ್ಯವು ರಚನಾತ್ಮಕವಾಗಿ ನಿರಂಕುಶ ಪ್ರಭುತ್ವದ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುತ್ತದೆ. ಸಾಂಪ್ರದಾಯಿಕ ಕುಟುಂಬವು ಆಧುನಿಕ ಅವಶ್ಯಕತೆಗಳನ್ನು ಪೂರೈಸಲು ಶಕ್ತವಾಗಲಾರದು. ಆದ್ದರಿಂದ ಆಧುನಿಕ ಯುಗದಲ್ಲಿ ಕುಟುಂಬದ ರಚನೆಯಲ್ಲಿ ಬದಲಾವಣೆಉಂಟಾಗಿದೆ. ಬದಲಾಗುತ್ತಿರುವ ಸಮಾಜದ ಅವಶ್ಯಕತೆಗಳನ್ನು ಪೂರೈಸುವಲ್ಲಿ ಬದಲಾದ ಸಾಮಾಜಿಕ ರಚನೆ ವಿಫಲಗೊಳ್ಳುತ್ತಿದೆ.

ಸಾಮಾಜಿಕ ರಚನೆಯನ್ನು ನಿಯಂತ್ರಿಸಲು ನಿಯಮಗಳು ಅಗತ್ಯವೇ ಸರಿ ಆದರೆ ಸಾಮಾಜಿಕ ರಚನೆಯ ಘಟಕಗಳಿಗೆ ತಮ್ಮ ಸೃಜನಶೀಲ ಸಾಮರ್ಥ್ಯವನ್ನು ಬಳಸಿಕೊಳ್ಳಲು ಅವಕಾಶ ನೀಡುವುದೂ ಅಷ್ಟೇ ಅಗತ್ಯವಾಗಿದೆ.

- **ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ**

1. ಪಾತ್ರ ಎಂದರೇನು ?

2. ಅಂತಸ್ತು ಎಂದರೇನು ?

3. ಅಂತಸ್ತಿನ ಎರಡು ವಿಧಗಳು ಯಾವುವು ?

4. ಅಂತಸ್ತು ಮತ್ತು ಸಾಮಾಜಿಕ ರಚನೆಗಳಿಗಿರುವ ಸಂಬಂಧಗಳನ್ನು ತಿಳಿಸಿ ?

5. ಸಾಮಾಜಿಕ ವ್ಯವಸ್ಥೆಯ ಲಕ್ಷಣಗಳನ್ನು ತಿಳಿಸಿ ?

- **ಸರಿ ಅಥವಾ ತಪ್ಪು ಗುರುತಿಸಿ**

6. ಸಾಮಾಜಿಕ ಪಾತ್ರಗಳು ಸಂಪ್ರದಾಯ ಮತ್ತು ನೈತಿಕ ನಿಯಮಗಳಿಂದ ನಿರೂಪಿಸಲ್ಪಡುತ್ತವೆ.

   ಸರಿ ☐ ತಪ್ಪು ☐

7. ವಿಧಿತ ಮತ್ತು ಸಾಧಿತ ಅಂತಸ್ತುಗಳೆರಡನ್ನು ಪ್ರತಿಯೊಂದು ಸಮಾಜದಲ್ಲಿ ಕಾಣಲಾಗದು.

   ಸರಿ ☐ ತಪ್ಪು ☐

8. ಸಾಮಾಜಿಕ ವ್ಯವಸ್ಥೆಯು ಏಕತೆಯನ್ನು ತರುತ್ತದೆ.

   ಸರಿ ☐ ತಪ್ಪು ☐

## 2.8 ಸಾರಾಂಶ

ಮಾನವನು ಸನ್ನಿವೇಶಗಳಿಗೆ ತಕ್ಕಂತೆ ವಿವಿಧ ಪಾತ್ರಗಳನ್ನು ನಿರ್ವಹಿಸುತ್ತಾನೆ. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಅನೇಕ ಸ್ಥಾನಮಾನಗಳನ್ನು ಹೊಂದಿರುತ್ತಾರೆ. ಸಾಮಾಜಿಕ ರಚನೆಯು ಯಾವುದೇ ಪುನರಾವರ್ತಿತ ಸಾಮಾಜಿಕ ನಡವಳಿಕೆಗಳ ನಮೂನೆಯಾಗಿದೆ. ಸಾಮಾಜಿಕ ವ್ಯವಸ್ಥೆ ಎಂಬುದು ಕ್ರಮಬದ್ಧ, ವ್ಯವಸ್ಥಿತ ಏರ್ಪಾಟಾಗಿರುವ ಸಾಮಾಜಿಕ ಅಂತರ್ ಸಂಬಂಧಗಳಾಗಿವೆ.

## 2.9 ಪ್ರಮುಖ ಪದಗಳು

**ಸಾಮಾಜಿಕ ಪಾತ್ರ** : ನಿಗದಿತ ಕಾಲದಲ್ಲಿ ವ್ಯಕ್ತಿಗಳ ನಡುವೆ ನಿರಂತರವಾಗಿ ಅಂತರ್ ಕ್ರಿಯೆಗಳ ಸನ್ನಿವೇಶಗಳಿಗೆ ಸಾಮಾಜಿಕ ಪಾತ್ರವೆನ್ನುತ್ತಾರೆ.

**ಸಾಮಾಜಿಕ ಅಂತಸ್ತು** : ಸಮಾಜದಲ್ಲಿ ವ್ಯಕ್ತಿಗಳು ಕೆಲವು ಹಕ್ಕುಗಳು ಮತ್ತು ಹೊಣೆಗಾರಿಕೆಗಳನ್ನಾಧಾರಿತ ಚಟುವಟಿಕೆಗಳನ್ನು ಸಾಮಾಜಿಕ ಅಂತಸ್ತು ಎಂದು ಕರೆಯುತ್ತಾರೆ.

**ವಿಧಿತ ಅಂತಸ್ತು** : ವ್ಯಕ್ತಿಗಳು ಸಮಾಜದಲ್ಲಿ ಹೊಂದಿರುವ ಅನುವಂಶೀಯ ಸ್ಥಾನಮಾನವನ್ನು ವಿಧಿತ ಅಂತಸ್ತು ಎಂದು ಕರೆಯುತ್ತಾರೆ.

## 2.10 ನಿಮ್ಮ ಪ್ರಗತಿ ಪರೀಕ್ಷೆ ಉತ್ತರಗಳು

1. 2.2
2. 2.3
3. 2.4
4. 2.6.1
5. 2.6
6. ಸರಿ
7. ತಪ್ಪು
8. ಸರಿ

## 2.11 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

1. ಸಾಮಾಜಿಕ ಪಾತ್ರವನ್ನು ಕುರಿತು ಟಿಪ್ಪಣಿಯೊಂದನ್ನು ಬರೆಯಿರಿ ?
2. ಸಾಮಾಜಿಕ ಅಂತಸ್ತಿನ ಎರಡು ವಿಧಗಳನ್ನು ಕುರಿತು ಚರ್ಚಿಸಿ ?
3. ಸಾಮಾಜಿಕ ವ್ಯವಸ್ಥೆಯ ಲಕ್ಷಣಗಳಾವುವು ?
4. ಸಾಮಾಜಿಕ ಅಂತಸ್ತು ಮತ್ತು ಸಾಮಾಜಿಕ ರಚನೆ ಇವುಗಳ ನಡುವಿನ ಸಂಬಂಧವನ್ನು ಸಂಕ್ಷಿಪ್ತವಾಗಿ ಬರೆಯಿರಿ ?

- **ಉತ್ತರಗಳು : ನೋಡಿ**

1. 2.2
2. 2.4
3. 2.6
4. 2.6.1

## 2.12 ಸಲಹಾ ಗ್ರಂಥಗಳು


1. **R.N. Sharma** : ***Principles of Sociology*** : Bombay, Media Promoters and Publishers, 1993.

2. **Ogburn and Nimkoff** : ***A Hand book of Sociology,*** Eurasia Publishing House, New Delhi , 1979.

3. MacIver R.M. and Charles H Page : ***Society an Introductory Analysis*** Delhi, Macmillan, 1850

4. **Pascual Gisbert** : ***Fundamentals of Sociology,*** New Delhi, Orient longmans Ltd: 1957.

5. **Kingsley Devis** : ***Human Society,*** Macmillan Company New York, 1948.

6. **Shankar Rao C.N.** : ***Sociology- Primary Principles,*** S. Chand & Company Ltd, Ramnagar, New Delhi - 2000.

7. **Morris Ginsberg** : ***Sociology,*** Surjeet Publications, 1934.

8. **Arnold. W. Green** : ***Sociology, Analysis of Life in Modern Society,*** New York, Mcgrawhill, 1956.

9. **Vidya Bhushan** and **Sachideva** : ***An Introduction to Sociology :*** Allahabad, Kitab,Mahal, 1998.


---


**• ಎನ್. ದೊಡ್ಡಸಿದ್ದಯ್ಯ, ಅಧ್ಯಾಪಕ (ಆಯ್ಕೆ ಶ್ರೇಣಿ ), ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು -570 006**


---

## ಘಟಕ 3 : ಸಾಮಾಜಿಕ ಪ್ರಕ್ರಿಯೆಗಳು

**ಸಂರಚನೆ**


3.0 ಉದ್ದೇಶಗಳು

3.1 ಪರಿಚಯ

3.2 ಸಹಕಾರ

3.2.1 ಸಹಕಾರದ ಬಗೆಗಳು

3.2.2 ಸಹಕಾರದ ಪ್ರಾಮುಖ್ಯ

3.3 ಸ್ಪರ್ಧೆ

3.3.1 ಸ್ಪರ್ಧೆಯ ಪ್ರಕಾರಗಳು

3.4 ಘರ್ಷಣೆ

3.4.1 ಘರ್ಷಣೆಯ ವಿಧಗಳು

3.4.2 ಘರ್ಷಣೆಯ ಪ್ರಾಮುಖ್ಯ

3.5 ಸಂಯೋಜನೆ

3.5.1 ಸಂಯೋಜನೆಯ ವಿಧಾನಗಳು

3.6 ಸಮೀಕರಣ

3.6.1 ಸಮೀಕರಣ ಮತ್ತು ಸಂಯೋಜನೆಗಳ ನಡುವಿನ ವ್ಯತ್ಯಾಸಗಳು

3.6.2 ಸಮೀಕರಣಕ್ಕೆ ಉತ್ತೇಜನ ನೀಡುವ ಅಂಶಗಳು

3.6.3 ಸಮೀಕರಣಕ್ಕೆ ಅಡ್ಡಿಯನ್ನುಂಟುಮಾಡುವ ಅಂಶಗಳು

3.7 ಸಾರಾಂಶ

3.8 ಪ್ರಮುಖ ಪದಗಳು

3.9 ನಿಮ್ಮ ಪ್ರಗತಿ ಪರೀಕ್ಷೆ ಉತ್ತರಗಳು

3.10 ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

3.11 ಸಲಹಾ ಗ್ರಂಥಗಳು

## 3.0 : ಉದ್ದೇಶಗಳು

ಈ ಅಧ್ಯಾಯ ಭಾಗದ ಮುಕ್ತಾಯದಲ್ಲಿ :

- ಸಾಮಾಜಿಕ ಪ್ರಕ್ರಿಯೆಯ ಮುನ್ನುಡಿಯಾಗಿ ಸಾಮಾಜಿಕ ಒಡನಾಟದ (ಅಂತಃಕ್ರಿಯೆಯ) ಅರ್ಥವನ್ನು ಅರ್ಥಮಾಡಿಕೊಳ್ಳುವಿರಿ.
- ಸಾಮಾಜಿಕ ಪ್ರಕ್ರಿಯೆ ಎಂಬುದರ ಅರ್ಥವನ್ನು ಗ್ರಹಿಸುವಿರಿ.
- ಸಹಕಾರ ಪ್ರಕ್ರಿಯೆಯ ಮೂಲಕ ಹೇಗೆ ವ್ಯಕ್ತಿಗಳು ಸಾಮಾನ್ಯ ಗುರಿಯನ್ನು ತಲುಪುತ್ತಾರೆಂಬುದನ್ನು ತಿಳಿಯುವಿರಿ.
- ಮಾನವ ಜೀವನದಲ್ಲಿ ಸ್ಪರ್ಧೆಯು ಹೇಗೆ ಹೋರಾಟದ ಬಗೆಯಾಗಿದೆ ಎಂಬುದನ್ನು ಅರಿತುಕೊಳ್ಳುವಿರಿ.
- ಘರ್ಷಣೆಯ ಪ್ರಕ್ರಿಯೆ ಮತ್ತು ಅದರ ಬಗೆಗಳನ್ನು ತಿಳಿದುಕೊಳ್ಳುವಿರಿ.
- ಸಂಯೋಜನೆಯ ಅರ್ಥ ಮತ್ತು ವಿಧಾನಗಳನ್ನು ಅರ್ಥಮಾಡಿಕೊಳ್ಳಲು ಶಕ್ತರಾಗುವಿರಿ.
- ಸಮೀಕರಣದ ಅರ್ಥ ಮತ್ತು ಅದಕ್ಕೆ ಉತ್ತೇಜನಕಾರಿಯಾದ ಮತ್ತು ಅಡ್ಡಿಯನ್ನುಂಟುಮಾಡುವ ಅಂಶಗಳ ಅರಿವು ನಿಮಗೆ ಬರುವುದು.

## 3.1 : ಪರಿಚಯ

ನೀವು ಅಧ್ಯಯನ ಮಾಡಿದ ಹಿಂದಿನ ಭಾಗದಲ್ಲಿ ಸಮಾಜಶಾಸ್ತ್ರದ ಕೆಲವು ಪರಿಕಲ್ಪನೆಗಳ ಬಗೆಗೆ ಜ್ಞಾನವನ್ನು ಗಳಿಸಿದ್ದೀರಿ. ಇಲ್ಲಿ ನೀವು ಸಾಮಾಜಿಕ ಪ್ರಕ್ರಿಯೆಗಳ ಬಗೆಗೆ ಕಲಿಯುವಿರಿದ್ದೀರಿ. ಸಾಮಾಜಿಕ ಪ್ರಕ್ರಿಯೆಗಳ ಅರ್ಥವನ್ನು ತಿಳಿದುಕೊಳ್ಳುವ ಮೊದಲು ಸಾಮಾಜಿಕ ಒಡನಾಟದ (ಅಂತಃಕ್ರಿಯೆಯ) ಅರ್ಥವನ್ನು ಗ್ರಹಿಸುವುದು ಸೂಕ್ತ. ಯಾವುದೆ ಸಮಾಜದಲ್ಲಿ ಎಲ್ಲಾ ಘಟಕಗಳು ಅವರು ವ್ಯಕ್ತಿಗಳಾಗಿರಲಿ ಅಥವಾ ವ್ಯಕ್ತಿಗಳ ಗುಂಪುಗಳೆ ಆಗಿರಲಿ ನಿರಂತರವಾಗಿ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮತ್ತು ಕೆಲವು ಪೂರ್ವ ನಿರ್ಧರಿತ ಗುರಿಗಳನ್ನು ಗಳಿಸುವುದರಲ್ಲಿ ನಿರತರಾಗಿರುತ್ತಾರೆ. ಈ ಎರಡು ಕಾರ್ಯಗಳ ನಿರ್ವಹಣೆಯ ಪ್ರಕ್ರಿಯೆಯಲ್ಲಿ ಪರಸ್ಪರ ಪ್ರಭಾವಿಸುತ್ತಾರೆ. ಇದು ಸಾಮಾಜಿಕ ಒಡನಾಟದ ಮೇಲೆ ಪ್ರಭಾವ ಬೀರುತ್ತದೆ. ಕೆಲವು ಸಾಮಾಜಿಕ ಸಂಬಂಧಗಳನ್ನು ಸ್ಥಾಪಿಸುವಲ್ಲಿ ಮತ್ತು ಅಸ್ತಿತ್ವದಲ್ಲಿರುವ ಸಾಮಾಜಿಕ ಸಂಬಂಧಗಳಲ್ಲಿ ಮಾರ್ಪಾಡು ತರುವುದಕ್ಕೆ ನೆರವಾಗುವ ಎಲ್ಲಾ ಕ್ರಿಯೆಗಳು ಸಾಮಾಜಿಕ ಒಡನಾಟ ಎಂಬ ಪದಕ್ಕೆ ಅನ್ವಯವಾಗುತ್ತದೆ. ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳ ನಡುವಿನ ಯಾವುದೇ ಬಗೆಯ ಪಾರಸ್ಪರಿಕ ಸಂಪರ್ಕವನ್ನು ಒಡನಾಟ (ಅಂತಃಕ್ರಿಯೆ) ಎಂದು ಕರೆಯಬಹುದು. ಯಾವುದೇ ವ್ಯಕ್ತಿಯ ಕ್ರಿಯೆಯು ಇನ್ನೊಬ್ಬ ವ್ಯಕ್ತಿಯ ಪ್ರತಿಕ್ರಿಯೆಯನ್ನು ಪ್ರಚೋದಿಸಿದ್ದಾಗ ಇಂತಹ ಕ್ರಿಯೆ ಉಂಟಾಗುತ್ತದೆ.

ಸಾಮಾಜಿಕ ಒಡನಾಟವು ಸಾಮಾನ್ಯ ಪ್ರಕ್ರಿಯೆಯಾಗಿದ್ದು ಇದರಲ್ಲಿ ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳ ನಡುವೆ ಅರ್ಥಪೂರ್ಣ ಸಂಪರ್ಕ ಏರ್ಪಟ್ಟು, ಶಾಶ್ವತ ಸಂಬಂಧಗಳು ಉಂಟಾಗಿ ಅದರ ಪರಿಣಾಮವಾಗಿ ವ್ಯಕ್ತಿಗಳ ನಡವಳಿಕೆಯಲ್ಲಿ ಮಾರ್ಪಾಡಾಗುತ್ತವೆ. ಸಾಮಾಜಿಕ ಒಡನಾಟ ಸಾಮಾಜಿಕ ಜೀವನದ ಮೂಲ ಸಾರವಾಗಿದೆ. ಬೇರೆಯವರ ಜೊತೆ ಪ್ರತಿಕ್ರಯಿಸಿದಾಗ ಮತ್ತು ಅವರ ಜೊತೆ

ಸಂಬಂಧಗಳನ್ನು ಉಳಿಸಿಕೊಂಡಾಗ ವ್ಯಕ್ತಿ ಸಮಾಜದ ಸದಸ್ಯನಾಗಿ ಇರಲು ಸಾಧ್ಯ. ಒಡನಾಟವಿಲ್ಲದ ವ್ಯಕ್ತಿ ಗುಂಪಿನ ಜೊತೆ ಸಂಪರ್ಕವನ್ನು ಕಳೆದುಕೊಳ್ಳುತ್ತಾನೆ. ಈ ಮೂಲಕ ವ್ಯಕ್ತಿಯು ವ್ಯಕ್ತಿಯಾಗಿ ಉಳಿಯುವುದಿಲ್ಲ. ಬದಲಾಗಿ ಪ್ರಾಣಿ ಸಮಾನನಾಗುತ್ತಾನೆ. ಒಡನಾಡಗಳು ಇದ್ದಾಗ ಮಾತ್ರ ಸಮಾಜದ ಅಸ್ತಿತ್ವ ಹಾಗೂ ಮುಂದುವರಿಕೆ ಸಾಧ್ಯ. ಒಂದು ಮಾತಿನಲ್ಲಿ ಹೇಳುವುದಾದರೆ ಸಮಾಜವೆಂಬುದು ಒಡನಾಟವಲ್ಲದೆ ಮತ್ತೇನು ಅಲ್ಲ. ಹಾಗಿದ್ದಲ್ಲಿ ಸಾಮಾಜಿಕ ಪ್ರಕ್ರಿಯೆ ಎಂದರೇನು ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಸಾಮಾಜಿಕ ಪ್ರಕ್ರಿಯೆಯು ಒಡನಾಟದ ಸಾಮಾನ್ಯ ವಿಧ. ಒಂದು ಸ್ಥಿತಿಯ ಹಂತದಿಂದ ಮತ್ತೊಂದು ಹಂತಕ್ಕೆ ಬದಲಾವಣೆಯಾಗಲು ಕಾರಣವಾಗುವ ಘಟನೆಗಳ ಮತ್ತು ಚಟುವಟಿಕೆಗಳ ಸರಣಿಗೆ ಪ್ರಕ್ರಿಯೆ ಎಂಬ ಪದವನ್ನು ಬಳಸಲಾಗುತ್ತದೆ. ಉದಾಹರಣೆಗೆ ಔದ್ಯಮಿಕ ಪ್ರಕ್ರಿಯೆಯಲ್ಲಿ ಯಾವುದೇ ಕಚ್ಚಾ ವಸ್ತುವನ್ನು ಸಿದ್ಧಪಡಿಸಿದ ಉತ್ಪನ್ನ ವಸ್ತುವನ್ನಾಗಿ ಮಾರ್ಪಡಿಸುವ ಹಂತಗಳ ಮತ್ತು ಸಂಬಂಧಿತ ಚಟುವಟಿಕೆಗಳ ಸರಣಿ ಇರುತ್ತದೆ. ಹಾಗೆಯೇ ಸಾಮಾಜಿಕ ಪ್ರಕ್ರಿಯೆಯಲ್ಲೂ ಹಂತಗಳ ಮತ್ತು ಸಂಬಂಧಿತ ಚಟುವಟಿಕೆಗಳ ಗುಂಪುಗಳ ಸರಣಿ ಇರುತ್ತದೆ. ಇದರಿಂದಾಗಿ ಒಂದು ಸಾಮಾಜಿಕ ಸ್ಥಿತಿಯ ಹಂತದಿಂದ ಮತ್ತೊಂದು ಹಂತಕ್ಕೆ ಬದಲಾವಣೆ ಘಟಿಸುತ್ತದೆ. ಮಾನವ ಸ್ವರೂಪ ರೂಪುಗೊಳ್ಳಲು, ಸಂಸ್ಕೃತಿ ಬೆಳೆಯಲು ಕಾರಣವಾಗುವ ಪ್ರಕ್ರಿಯೆಗಳನ್ನು ವಿಶ್ಲೇಷಿಸಲು ಸಮಾಜಶಾಸ್ತ್ರ ಆಸಕ್ತವಾಗಿದೆ. ಒಟ್ಟಿನಲ್ಲಿ ಸಹಕಾರ, ಸ್ಪರ್ಧೆ, ಘರ್ಷಣೆ, ಸಂಯೋಜನೆ ಮತ್ತು ಸಮೀಕರಣದಂತಹ ಸಾಮಾಜಿಕ ಒಡನಾಟಗಳನ್ನು ಸಾಮಾಜಿಕ ಪ್ರಕ್ರಿಯೆಯಲ್ಲೂ ಹಂತಗಳ ಮತ್ತು ಸಂಬಂಧಿತ ಚಟುವಟಿಕೆಗಳ ಗುಂಪುಗಳ ಸರಣಿ ಇರುತ್ತದೆ. ಇದರಿಂದಾಗಿ ಒಂದು ಸಾಮಾಜಿಕ ಸ್ಥಿತಿಯ ಹಂತದಿಂದ ಮತ್ತೊಂದು ಹಂತಕ್ಕೆ ಬದಲಾವಣೆ ಘಟಿಸುತ್ತದೆ. ಮಾನವ ಸ್ವರೂಪ ರೂಪುಗೊಳ್ಳಲು, ಸಂಸ್ಕೃತಿ ಬೆಳೆಯಲು ಕಾರಣವಾಗುವ ಪ್ರಕ್ರಿಯೆಗಳನ್ನು ವಿಶ್ಲೇಷಿಸಲು ಸಮಾಜಶಾಸ್ತ್ರ ಆಸಕ್ತವಾಗಿದೆ. ಒಟ್ಟಿನಲ್ಲಿ ಸಹಕಾರ, ಸ್ಪರ್ಧೆ, ಘರ್ಷಣೆ, ಸಂಯೋಜನೆ ಮತ್ತು ಸಮೀಕರಣದಂತಹ ಸಾಮಾಜಿಕ ಒಡನಾಟಗಳನ್ನು ಸಾಮಾಜಿಕ ಪ್ರಕ್ರಿಯೆಗಳೆಂದು ಗುರುತಿಸಬಹುದು. ಸಮಾಜಶಾಸ್ತ್ರಜ್ಞರು ಸಾಮಾಜಿಕ ಒಡನಾಟಗಳನ್ನು ಸಾಮಾಜಿಕ ಪ್ರಕ್ರಿಯೆಗಳೆಂದು ಗುರುತಿಸಬಹುದು. ಸಮಾಜಶಾಸ್ತ್ರಜ್ಞರು ಸಾಮಾಜಿಕ ಪ್ರಕ್ರಿಯೆಗಳ ಒಂದು ಬೃಹತ್ ಪಟ್ಟಿಯನ್ನೇ ಕೊಟ್ಟಿರುತ್ತಾರೆ. ನಾವು ಈಗ ಅವುಗಳಲ್ಲಿ ಮುಖ್ಯವಾಗಿ ಸಹಕಾರ, ಸ್ಪರ್ಧೆ, ಘರ್ಷಣೆ, ಸಂಯೋಜನೆ ಮತ್ತು ಸಮೀಕರಣ ಇವುಗಳ ಸ್ವಭಾವ ಮತ್ತು ಲಕ್ಷಣಗಳನ್ನ ಅರಿತುಕೊಳ್ಳೋಣ.

## 3.2 : ಸಹಕಾರ

**ಅರ್ಥ :** ಆರ್ನಾಲ್ಡ್ ಡಬ್ಲ್ಯು ಗ್ರೀನ್ ಪ್ರಕಾರ ಯಾವುದೇ ಕಾರ್ಯವನ್ನು ನಿರ್ವಹಿಸುವಲ್ಲಿ ಮತ್ತು ಸಮಾನ ಗುರಿಯನ್ನು ಸಾಧಿಸಲು ಇಬ್ಬರು ಅಥವಾ ಹೆಚ್ಚು ಮಂದಿ ಒಟ್ಟಾಗಿ, ನಿರಂತರವಾಗಿ, ಸಮಾನವಾಗಿ ಮತ್ತು ಸ್ನೇಹಪೂರ್ವವಾಗಿ ಮಾಡುವ ಪ್ರಯತ್ನವೆ ಸಹಕಾರ. (Arnolod W, Green; Socilogy, Analysis of life in modern society ; Mcgra Hill; New York; 1956).

ಇಬ್ಬರು ವ್ಯಕ್ತಿಗಳು ಅಥವಾ ಸಮೂಹಗಳು ಒಂದು ಸಾಮಾನ್ಯ ಉದ್ದೇಶಕ್ಕಾಗಿ ಒಟ್ಟಾಗಿ ಸೇರಿ ಕೆಲಸ ಮಾಡುವ ಸಾಮಾಜಿಕ ಪ್ರಕ್ರಿಯೆಯನ್ನು ಸಹಕಾರ ಎಂದು ತಿಳಿಯಬಹುದು. ಇದು ಸಾರ್ವತ್ರಿಕವಾಗಿದೆ. ಉದಾಹರಣೆಗೆ ಒಂದು ಸಾಮೂಹಿಕ ಆಟದಲ್ಲಿ ಒಂದು ಗುಂಪಿಗೆ ಸೇರದವರು ಒಟ್ಟಾಗಿ ಸಹಕರಿಸಬೇಕು, ಇಲ್ಲದಿದ್ದರೆ ಜಯಗಳಿಸುವುದು ಅಸಾಧ್ಯವಾಗುತ್ತದೆ. ಅದೇ ರೀತಿಯಲ್ಲಿ ಆಡಳಿತ ನಡೆಸುವವರು ಮತ್ತು ಆಡಳಿತಕ್ಕೆ ಒಳಪಡುವ ಜನ ಸಮೂಹ ಪರಸ್ಪರ ಸಹಕರಿಸಿದಲ್ಲಿ ಮಾತ್ರ ಸರ್ಕಾರಗಳು ಸುಲಲಿತವಾಗಿ ಹಾಗೂ ಯಶಸ್ವಿಯಾಗಿ ಮುಂದುವರಿಯುವುದು ಸಾಧ್ಯವಾಗುತ್ತದೆ. ಹೀಗೆ ಸಹಕಾರ ಪ್ರಕ್ರಿಯೆಯು ಸಂಘಟಿತ ಪ್ರಯತ್ನ ಮತ್ತು ಸಾಮಾನ್ಯ ಗುರಿಯ ಮೂಲಾಂಶಗಳನ್ನು ಒಳಗೊಂಡಿರುತ್ತದೆ.

ಸಾಮಾನ್ಯವಾಗಿ ಸಹಕಾರ ಸ್ಪರ್ಧೆಗೆ ವಿರುದ್ಧವಾದ ಪ್ರಕ್ರಿಯೆ ಎಂದು ಹೇಳಲಾಗುತ್ತದೆ. ಆದ ವಾಸ್ತವವಾಗಿ ಸಹಕಾರಕ್ಕೆ ವಿರುದ್ಧವಾಗಿರುವ ಪ್ರಕ್ರಿಯೆ ಘರ್ಷಣೆ.

### 3.2.1 ಸಹಕಾರದ ಬಗೆಗಳು

ಸಹಕಾರದಲ್ಲಿ ಹಲವಾರು ಬಗೆಗಳು ಕಂಡುಬರುತ್ತವೆ. ಅವು ಯಾವುವು ಎಂದರೆ ;

- **ಪ್ರತ್ಯಕ್ಷ ಸಹಕಾರ**

ಇಲ್ಲಿ ವ್ಯಕ್ತಿಗಳು ಒಟ್ಟಾಗಿ ಒಂದೇ ರೀತಿಯ ಕಾರ್ಯಗಳನ್ನು ಮಾಡುತ್ತಾರೆ. ಉದಾಹರಣೆಗೆ ಮಣ್ಣಿನಲ್ಲಿ ಹೂತುಹೋಗಿರುವ ಬಂಡಿಯನ್ನು ಮೇಲಕ್ಕೆಳೆಯುವುದು, ಒಟ್ಟಾಗಿ ಆಟವಾಡುವುದು ಮತ್ತು ಗ್ರಾಮೀಣ ಸಮಾಜಗಳಲ್ಲಿ ದಿನ ನಿತ್ಯ ಕಂಡು ಬರುವ ವಿವಾಹ ಸಮಾರಂಭ, ಜಾತ್ರೆ ಉತ್ಸವಗಳು, ಹಬ್ಬ ಹರಿದಿನಗಳು, ಹುಟ್ಟು ಸಾವುಗಳು ಹಾಗೂ ವ್ಯವಸಾಯದ ಕೆಲಸ ಕಾರ್ಯಗಳಲ್ಲಿ ಒಟ್ಟಾಗಿ ಭಾಗವಹಿಸುವುದು ಪ್ರತ್ಯಕ್ಷ ಸಹಕಾರದ ನಿದರ್ಶನಗಳು. ಇಂತಹ ಸಂದರ್ಭಗಳಲ್ಲಿ ಹಳ್ಳಿಯವರು ಫಲಾಪೇಕ್ಷೆಯು ಇಲ್ಲದೆ ಒಟ್ಟಾಗಿ ಕೆಲಸ ಮಾಡುತ್ತಾರೆ. ವ್ಯಕ್ತಿಯು ತಾನೊಬ್ಬನೇ ಮಾಡಬಹುದಾದ ಕೆಲಸವನ್ನು ಇತರರೊಡಗೂಡಿ ನಿರ್ವಹಿಸುವುದು ಈ ಬಗೆಯ ಸಹಕಾರದ ಮುಖ್ಯ ಲಕ್ಷಣ.

- **ಪರೋಕ್ಷ ಸಹಕಾರ**

ಈ ಬಗೆಯ ಸಹಕಾರದಲ್ಲಿ ವ್ಯಕ್ತಿಗಳು ತಮಗಿಷ್ಟ ಬಂದ ಕೆಲಸವನ್ನು ನಿರ್ವಹಿಸಿ, ಒಟ್ಟಾರೆ ಉದ್ದೇಶವನ್ನು ಸಾಧಿಸುವರು. ಉದಾಹರಣೆಗೆ ಒಬ್ಬ ಮರಗೆಲಸ, ಮತ್ತೊಬ್ಬ ಗಾರೆ ಕೆಲಸ ಮಗದೊಬ್ಬ ಇಟ್ಟಿಗೆ ಕಟ್ಟುವ ಕೆಲಸ ಮುಂತಾದುವುಗಳನ್ನು ಮಾಡಿ ಮನೆ ಕಟ್ಟುವ ಕೆಲಸವನ್ನು ಪೂರೈಸಬಹುದು. ಹಾಗೆಯೇ ವಿದ್ಯಾಸಂಸ್ಥೆಯನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ, ಉಪಾಧ್ಯಾಯ ಸ್ದಿಧಪಾಠಗಳನ್ನು ಬರೆಯುವುದು, ಮುದ್ರಣಕಾರರು ಅದನ್ನು ಅಂದವಾಗಿ ಮುದ್ರಿಸುವುದು, ನಂತರ ಕಾರ್ಯನಿರ್ವಾಹಕ ಸಿಬ್ಬಂದಿಯವರು ಅದರ ಮೇಲೆ ವಿಳಾಸ ಮುದ್ರಿಸಿ ಅಂಚೆಗೆ ತಲುಪಿಸುವುದು, ಅಂಚೆಯ ಸಿಬ್ಬಂದಿ ನಿಗಧಿತ ವಿಳಾಸಕ್ಕೆ ಅದನ್ನು ತಲುಪಿಸುವುದು. ಹೀಗೆ, ಉಪಾಧ್ಯಾಯರಿಂದ ರಚಿಸಲ್ಪಟ್ಟ ಸಿದ್ದಪಾಠ ವಿದ್ಯಾರ್ಥಿಗಳ ಕೈ ಸೇರಬೇಕಾದರೆ ಪರೋಕ್ಷವಾಗಿ ಅನೇಕ ಜನರು ಸಹಕರಿಸುತ್ತಾರೆ. ಈ ಬಗೆಯ ಸಹಕಾರಕ್ಕೆ ಶ್ರಮ ವಿಭಜನೆಯ ತತ್ವವು ಆಧಾರವಾಗಿದೆ.

ಈಗಿನ ಸಮಾಜದಲ್ಲಿ ಪ್ರತ್ಯಕ್ಷ ಸಹಕಾರಕ್ಕಿಂತಲೂ ಪರೋಕ್ಷ ಸಹಕಾರವು ವಿಶೇಷವಾಗಿ ಕಂಡುಬರುತ್ತದೆ. ಕಾರಣ ಇಂದಿನ ಕೈಗಾರಿಕಾ ಪ್ರಧಾನವಾದ ಸಮಾಜದಲ್ಲಿ ವ್ಯಕ್ತಿಗಳು ಪರಸ್ಪರ ನೇರ ಸಂಬಂಧವಿಲ್ಲದೆ ತಮ್ಮಷ್ಟಕ್ಕೆ ತಾವೇ ಇರುವುದರಿಂದ ಅವರು ಅನೇಕ ಮಾನಸಿಕ ಕ್ಲೇಶಗಳಿಗೆ ಒಳಗಾಗುತ್ತಾರೆಂಬ ಭಾವನೆಯಿದೆ.

- **ಸ್ನೇಹರಹಿತ ಸಹಕಾರ**

ಸ್ನೇಹ ರಹಿತ ಸಹಕಾರ ಎಂಬುದರ ಅರ್ಥವನ್ನು ಹೀಗೆ ತಿಳಿದುಕೊಳ್ಳಬಹುದು. ಸಮಾಜದಲ್ಲಿನ ವಿಶೇಷ ಮೌಲ್ಯಗಳನ್ನು ಸಾಧಿಸಲು ಸಹಕಾರದ ಅಗತ್ಯವಿದೆ. ಸಾಮಾನ್ಯವಾಗಿ ಎಲ್ಲಾ ಸಮಾಜಗಳು ಹಿತಾಸಕ್ತಿಗಳನ್ನು ಸಾಧಿಸಲು ತಾತ್ಕಾಲಿಕವಾಗಿ ತಮ್ಮಲ್ಲಿರುವ ಪ್ರತಿರೋಧವನ್ನು ಬಿಡಬೇಕಾಗುತ್ತದೆ. ಉದಾ: ಯುದ್ಧ, ಭೂಕಂಪ ಅಥವಾ ಕ್ಷಾಮದಂತಹ ಸನ್ನಿವೇಶಗಳನ್ನು ರಾಷ್ಟ್ರ ಎದುರಿಸಿದ ಸಂದರ್ಭದಲ್ಲಿ ಪಕ್ಷ ಭಿನ್ನತೆ ಮತ್ತು ವೈಯಕ್ತಿಕ ಸ್ಪರ್ಧೆಗಳು ನಿರ್ಲಕ್ಷಿಸಲ್ಪಡುತ್ತದೆ ಹಾಗೂ ಜನರು ಬೆದರಿಕೆಗಳನ್ನು ಎದುರಿಸಲು ಒಂದಾಗುತ್ತಾರೆ. ಯುದ್ಧದ ಸಮಯದಲ್ಲಿ ನಾವು - ನಮ್ಮದು ಎನ್ನುವ ಭಾವನೆ

ನಾಗರಿಕರಲ್ಲಿ ಬೆಳೆಯುತ್ತದೆ. ತಮ್ಮಲ್ಲಿರುವ ಸಣ್ಣ-ಪುಟ್ಟ ಕಲಹಗಳನ್ನು ಜನರು ಮರೆಯಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಆಂತರಿಕ ಸಾಮರಸ್ಯ ಮೇಲುಗೈ ಸಾಧಿಸುತ್ತದೆ. ಆಂತರಿಕ ಸಾಮರಸ್ಯ ಮತ್ತು ಬಾಹ್ಯ ಘರ್ಷಣೆಗಳು ಸಮಾಜದಲ್ಲಿನ ಒಂದೇ ನಾಣ್ಯದ ಎರಡು ಮುಖಗಳಾಗಿರುತ್ತವೆ.

### 3.2.2 ಸಹಕಾರದ ಪ್ರಾಮುಖ್ಯ

ಸಹಕಾರವು ವಿಶ್ವ ವ್ಯಾಪ್ತಿಯುಳ್ಳದ್ದು, ವ್ಯಕ್ತಿ ಜೀವನದಲ್ಲಿ ಇದರ ಪಾತ್ರ ಬಹಳ ಮುಖ್ಯವಾದುದು. ಸಹಕಾರವಿಲ್ಲದೆ ವ್ಯಕ್ತಿ ಬದುಕಲಾರ. ಇರುವೆ, ಜೇನು ಮುಂತಾದ ಕ್ರಿಮಿ ಕೀಟಾದಿಗಳಲ್ಲಿಯೂ ಸಹಕಾರ ಭಾವನೆ ಇದೆ. ಸಮಾಜದಲ್ಲಿ ಶಿಶುವಿನ ಪಾಲನೆ ಪೋಷಣೆಗಳ ಉದ್ದೇಶದಿಂದ ತಂದೆ ತಾಯಿ ಸಹಕರಿಸುತ್ತಾರೆ. ವ್ಯಕ್ತಿಗಳಲ್ಲಿ ಸಹಕಾರವು ಮಾನಸಿಕವಾಗಿ ಹಾಗೂ ಸಾಮಾಜಿಕವಾಗಿ ಅವಶ್ಯವೆನಿಸಿದೆ. ವ್ಯಕ್ತಿಗಳು ಕುಟುಂಬದ ಆವರಣದಲ್ಲಿ ಸಹಕಾರ ಭಾವನೆಯ ಪ್ರಥಮ ಪಾಠಗಳನ್ನು ಕಲಿಯುತ್ತಾರೆ. ಸಹಕಾರವಿಲ್ಲದೆಯೇ ವೈಯಕ್ತಿಕ ಮತ್ತು ಸಾಮೂಹಿಕ ಧ್ಯೇಯಗಳನ್ನು ಸಾಧಿಸಲಾಗುವುದಿಲ್ಲ. ನಮ್ಮ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಹಕಾರದ ಅಗತ್ಯವಿದೆ. ಉದಾಹರಣೆಗೆ: ಒಂದು ಶಾಲೆಯಲ್ಲಿ ಕೆಲಸ ಮಾಡುವ ಉಪಾಧ್ಯಾಯರು ತಮ್ಮ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಿ ಪರಸ್ಪರ ಸಹಕರಿಸಿ, ಶಾಲೆಯ ಆಡಳಿತದಲ್ಲಿ ಭಾಗವಹಿಸುವುದರಿಂದ ಆ ಶಾಲೆಗೆ ಒಳ್ಳೆಯ ಹೆಸರು ದೊರಕುತ್ತದೆ. ಇತರರ ಪ್ರಶಂಸೆಗೆ ಪಾತ್ರವಾಗುತ್ತದೆ. ಉಪಾಧ್ಯಾಯರ ನಡುವೆ ಸಹಕಾರ ಭಾವನೆಯಿಲ್ಲದಿದ್ದರೆ, ಬೇಜಾವಾಬ್ದಾರಿಯಿಂದ ವರ್ತಿಸಿದರೆ ವಿದ್ಯಾರ್ಥಿಗಳಿಗೆ ಉತ್ತಮ ಮಟ್ಟದ ಶಿಕ್ಷಣವನ್ನು ಒದಗಿಸುವುದಕ್ಕೂ ಸಮಾಜದಲ್ಲಿ ಕೀರ್ತಿಯನ್ನು ಗಳಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಅದೇ ರೀತಿ ಸರ್ಕಾರ ಹಾಗೂ ವ್ಯವಸಾಯ ಉದ್ಯಮದ ಬಗ್ಗೆಯೂ ಹೇಳಬಹುದು. ಒಬ್ಬ ವ್ಯಕ್ತಿ ಇತರ ವ್ಯಕ್ತಿಗಳ ಕೂಡ ಸಹಕರಿಸದಿದ್ದರೆ ಆತ ಒಂಟಿ ಜೀವನ ನಡೆಸಬೇಕಾಗುತ್ತದೆ. ಒಂಟಿ ಜೀವನದಿಂದ ಬೇಸರವಾದಾಗ ಆತ ಇತರರ ಜೊತೆ ಸಹಕರಿಸುವುದನ್ನು ಕಲಿಯಲೇಬೇಕಾಗುತ್ತದೆ.

ಸಮಾಜದ ಅನೇಕ ಕ್ಷೇತ್ರಗಳಲ್ಲಿ ಆಗಿರುವ ಪ್ರಗತಿಗೆ ಜನರಲ್ಲಿ ಕಂಡುಬರುವ ಸಹಕಾರ ಮನೋಭಾವನೆ ಕಾರಣವಾಗಿದೆ. ವಿಜ್ಞಾನ ಹಾಗೂ ತಾಂತ್ರಿಕ ಕ್ಷೇತ್ರಗಳಲ್ಲಿ ಸಾಧಿಸಿರುವ ಅದ್ಭುತ ಸಾಧನೆಗಳು, ಮಾನವ ಚಂದ್ರನ ಮೇಲೆ ನಡೆದಾಡಿ ಬಂದಿರುವುದು, ಬಡವ ಬಲ್ಲಿದರ ನಡುವಣ ಅಂತರವನ್ನು ಕಡಿಮೆ ಮಾಡಲು ಮಾಡಿರುವ ಪ್ರಯತ್ನಗಳೆಲ್ಲವೂ ವ್ಯಕ್ತಿಗಳ ಸಹಕಾರದಿಂದ ಸಾಧ್ಯವಾಗಿದೆ. ಸಹಕಾರದ ಅಗತ್ಯವನ್ನು ಮನಗಂಡು ಪ್ರತಿಯೊಂದು ರಾಷ್ಟ್ರವು ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ತಮ್ಮ ವೈಯಕ್ತಿಕ ಆಸಕ್ತಿಗಳನ್ನು ಬದಿಗೊತ್ತಿ ಬಹಳ ಶ್ರಮಿಸುತ್ತಿವೆ.

## 3.5 : ಸ್ಪರ್ಧೆ

**ಅರ್ಥ:** ಸ್ಪರ್ಧೆಯು ಸಾಮಾಜಿಕ ಹೋರಾಟದ ಬಹು ಮುಖ್ಯ ಬಗೆ. ಎಲ್ಲರಿಗೂ ನಿಲುಕದ ಒಂದು ಗುರಿಯನ್ನು ಸಾಧಿಸಲು ಇಬ್ಬರು ಅಥವಾ ಅನೇಕ ವ್ಯಕ್ತಿಗಳು ಪ್ರಯತ್ನಿಸಿದರೆ ಅದಕ್ಕೆ ಸ್ಪರ್ಧೆ ಅಥವಾ ಪೈಪೋಟಿ ಎಂದು ಹೆಸರು. ಸ್ಪರ್ಧೆಯಲ್ಲಿ ವ್ಯಕ್ತಿಯು ಶಕ್ತಿ-ಸಾಮರ್ಥ್ಯಗಳ ಪರೀಕ್ಷೆಗೆ ಒಳಪಡುತ್ತಾನೆ. ಹೆಚ್ಚು ಅರ್ಹತೆಯುಳ್ಳ ಮತ್ತು ಚತುರನಾದ ವ್ಯಕ್ತಿಯು ಸ್ಪರ್ಧೆಯಲ್ಲಿ ಜಯಗಳಿಸುತ್ತಾನೆ. ಸ್ಪರ್ಧೆಯು ಹೋರಾಟದ ಒಂದು ಭಾಗ ಮಾತ್ರ. ಇದು ಮಾನವ ಸಮಾಜವೊಂದಕ್ಕೆ ಸೀಮಿತವಾಗಿರದೆ ಪ್ರಾಣಿ ವರ್ಗಗಳಲ್ಲಿಯೂ ಕಂಡು ಬರುತ್ತದೆ. ಸ್ಪರ್ಧೆಯು ವ್ಯಕ್ತಿಗಳು ಪರಸ್ಪರ ವ್ಯವಹರಿಸುವಂತೆ ಒತ್ತಾಯಪಡಿಸುತ್ತದೆ. ಇದು ಸಾರ್ವತ್ರಿಕವಾಗಿ ಜೀವನದ ಹೋರಾಟ ನಡೆಸುವುದರ ಫಲಿತಾಂಶ. ಇರುವ ಒಂದೇ ವಸ್ತುವು ಹಲವರಿಗೆ ಬೇಕೆನಿಸಿದಾಗ, ಅದನ್ನು ಪಡೆಯಲು ವ್ಯಕ್ತಿಗಳು ಸ್ಪರ್ಧಿಸುತ್ತಾರೆ. ಉದಾಹರಣೆಗೆ, ಪ್ರತಿಯೊಂದು ಸಮಾಜದಲ್ಲಿಯೂ ನೌಕರಿಗಳಿಗಿಂತ ಅದನ್ನು ಬಯಸುವ ಜನರೆ ಹೆಚ್ಚಾಗಿರುತ್ತಾರೆ. ಆದ್ದರಿಂದ ಇರುವ ಸ್ಥಾನಗಳಿಗೆ ಸ್ಪರ್ಧೆ

ನಡೆಸುತ್ತಾರೆ. ಮೊದಲೆ ನೌಕರಿಯಲ್ಲಿರುವವರು ಉತ್ತಮ ಬಡ್ತಿ ದೊರೆಯುವ ನೌಕರಿಗಳಿಗಾಗಿ ಸ್ಪರ್ಧಿಸುತ್ತಾರೆ. ಆದ್ದರಿಂದ ಸಾಮಾಜಿಕ ಜೀವನದಲ್ಲಿ ಒಂದಲ್ಲಾ ಒಂದು ಬಗೆಯ ಸ್ಪರ್ಧೆಯು ಏರ್ಪಾಡಾಗಿ ಅಭಾವ ಸ್ಥಿತಿಯು ಅನಿವಾರ್ಯವಾಗುತ್ತದೆ. ಆದ್ದರಿಂದ ವ್ಯಕ್ತಿಗಳು ಆಹಾರಕ್ಕಾಗಿ ಮಾತ್ರವಲ್ಲದೆ ಸಂಗಾತಿಗಳು, ಸ್ಥಾನಮಾನ, ಅಧಿಕಾರ, ಯಶಸ್ಸು ಮುಂತಾದವುಗಳಿಗಾಗಿ ಸ್ಪರ್ಧೆ ನಡೆಸುತ್ತಾರೆ. ಒಬ್ಬರು ಆಶಿಸಿದುದನ್ನೇ ಮತ್ತೊಬ್ಬರು ಪಡೆಯಲು ಆಶಿಸಿದಾಗ ಸ್ಪರ್ಧೆ ನಡೆಯುತ್ತದೆ. ಸ್ಪರ್ಧೆಯ ಉದ್ದೇಶ ಎದುರಾಳಿಯನ್ನ ನಾಶಪಡಿಸಬೇಕೆಂದಲ್ಲ, ಬಲವಂತವು ಅಲ್ಲ. ಭಾಗವಹಿಸುವ ವ್ಯಕ್ತಿಗಳು ಸ್ಪರ್ಧೆಯಲ್ಲಿ ಮೋಸ ವಂಚನೆ ಮುಂತಾದುವುಗಳನ್ನು ತಡೆಗಟ್ಟಲು ಕೆಲವು ನಿಯಮಗಳನ್ನು ಅನುಸರಿಸುತ್ತಾರೆ. ಈ ನಿಯಮಗಳನ್ನು ಉಲ್ಲಂಘಿಸಿದಾಗ ಘರ್ಷಣೆಯುಂಟಾಗುತ್ತದೆ. ಸ್ಪರ್ಧೆಗೆ ಅಡ್ಡಿ ಆತಂಕಗಳು ಇದ್ದೇ ಇರುತ್ತವೆ. ಆದರೂ ಸ್ಪರ್ಧೆಯು ನಿರಂತರವಾಗಿ ಸಾಗುತ್ತದೆ. ಮಾನವ ಸಮುದಾಯವು ಸ್ಪರ್ಧೆಯ ಮೂಲಕ ಕಾರ್ಯನಿರ್ವಹಿಸುತ್ತದೆ ಮತ್ತು ಅದರ ಮೇಲೆ ಅವಲಂಬಿಸಿದೆ. ಪಾರ್ಕ್ ಮತ್ತು ಬರ್ಗೆಸ್ ಅಭಿಪ್ರಾಯ ಪಟ್ಟಿರುವಂತೆ ಸ್ಪರ್ಧೆ ಎಂಬುದು ಸಾಮಾಜಿಕ ಸಂಪರ್ಕವಿಲ್ಲದ ಒಡನಾಟ. ಅದು ಅವ್ಯೈಯಕ್ತಿಕವಾದ ಅಂತರ್ ವ್ಯಕ್ತಿ ಸ್ಪರ್ಧೆ, ಸ್ಪರ್ಧೆಯು ಅಪ್ರಜ್ಞಾಪೂರ್ವಕ ಕ್ರಿಯೆಯಾಗಿದೆ. ಇದು ವ್ಯಕ್ತಿಗಳಿಗೆ ಸಂಬಂಧಿಸದೆ ವಿಷಯಕ್ಕೆ ಸಂಬಂಧಿಸುದುದಾಗಿದೆ. ವ್ಯಕ್ತಿಗಳು ತಮ್ಮ ಗುರಿಗಳನ್ನು ಸಾಧಿಸಲು ಸ್ಪರ್ಧಿಸಬೇಕಾಗುತ್ತದೆ. ಹೀಗೆ ಸ್ಪರ್ಧಿಸುವಾಗ ಅವರಿಗೆ ತಮ್ಮ ಚಟುವಟಿಕೆಗಳ ಸ್ಪರ್ಧಾತ್ಮಕ ಲಕ್ಷಣಗಳ ಅರಿವು ಇರುವುದಿಲ್ಲ (Robert.E.Park and Ernest, W.burgess; Introduction to the sicience of sociology ; Chicago ; Uni press ; 1986).

### 3.3.1 ಸ್ಪರ್ಧೆಯ ಪ್ರಕಾರಗಳು

ಸ್ಪರ್ಧೆಯ ಪ್ರಮುಖ ಪ್ರಕಾರವೆಂದರೆ ಆರ್ಥಿಕವಾದುದು. ಆದಿಮಾನವ ತನ್ನ ಜೀವನಾವಶ್ಯಕತೆಗಳಿಗಾಗಿ ಹೋರಾಟ ಮಾಡಬೇಕಾದ ಪರಿಸ್ಥಿತಿ ಇತ್ತು. ಆದರೆ ಇಂದಿನ ಮನುಷ್ಯ ಹೆಚ್ಚಿನ ಉನ್ನತ ಜೀವನ ಮಟ್ಟದ ಹೊಂದುವಿಕೆಗೆ ಹೋರಾಟ ಮಾಡುತ್ತಿದ್ದಾನೆ. ಆರ್ಥಿಕ ಸ್ಪರ್ಧೆಯು ಹಲವಾರು ಬಗೆಗಳಲ್ಲಿ ಪ್ರಚಲಿತವಿದೆ. ಉದಾಹರಣೆಗೆ ಉದ್ಯೋಗಕ್ಕಾಗಿ ಸ್ಪರ್ಧೆ, ಸ್ಥಾನಕ್ಕಾಗಿ ಸ್ಪರ್ಧೆ, ಗಿರಾಕಿಗಳಿಗಾಗಿ ಸ್ಪರ್ಧೆ, ಕಕ್ಷಿದಾರರಿಗಾಗಿ ಸ್ಪರ್ಧೆ ಇತ್ಯಾದಿ. ಈ ರೀತಿಯ ಸ್ಪರ್ಧೆಯು ವ್ಯಕ್ತಿಗಳ ನಡುವೆ ಮತ್ತು ಸಮೂಹಗಳ ನಡುವೆ ವಾಣಿಜ್ಯ ಮತ್ತು ಕೈಗಾರಿಕಾ ರಂಗದಲ್ಲಿ ನಡೆಯುತ್ತಿರುತ್ತದೆ.

ಸ್ಪರ್ಧೆಯಲ್ಲಿ ಎರಡನೆಯ ಪ್ರಕಾರ ಸಾಂಸ್ಕೃತಿಕ ರಂಗದಲ್ಲಿ ಗೋಚರಿಸುತ್ತದೆ. ಈ ಬಗೆಯ ಸ್ಪರ್ಧೆಯು ಭಿನ್ನ ಭಿನ್ನ ಸಂಸ್ಕೃತಿಗಳ ನಡುವೆ ಇದೆ. ಯಾವುದೇ ರಾಷ್ಟ್ರದ ಇತಿಹಾಸದ ಪುಟಗಳನ್ನು ತಿರುವಿ ಹಾಕಿ ನೋಡಿದಾಗ ಸ್ಥಳೀಯರು ಮತ್ತು ಆಕ್ರಮಣಕಾರರ ಸಂಸ್ಕೃತಿಗಳಲ್ಲಿ ಹೆಚ್ಚಿನ ವ್ಯತ್ಯಾಸಗಳು ಇರುತ್ತವೆ. ಉದಾಹರಣೆಗೆ ಬ್ರಿಟೀಷರು ಭಾರತಕ್ಕೆ ಬಂದಾಗ ಅವರು ದೇಶೀಯರ ಮೇಲೆ ತಮ್ಮ ಸಂಸ್ಕೃತಿಯನ್ನು ಹೇರಿದರು. ಕಾರಣ ಬ್ರಿಟಿಷರು ತಮ್ಮ ಸಂಸ್ಕೃತಿ ಹೆಚ್ಚೆಂದು ಭಾವಿಸುದದೆ ಆಗಿತ್ತು.

ಮೂರನೆ ಬಗೆಯ ಸ್ಪರ್ಧೆಯು ಸಾಮಾಜಿಕವಾದುದು. ಸಮಾಜದಲ್ಲಿ ಹೆಚ್ಚಿನ ಸ್ಥಾನ-ಮಾನವನ್ನು ಪಡೆಯಲು ಪ್ರತಿಯೊಬ್ಬರು ಸ್ಪರ್ಧಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. ತಮ್ಮ ವ್ಯಕ್ತಿತ್ವವನ್ನು ಬೇರೆಯವರು ಗುರುತಿಸಲೆಂಬ ಸಲುವಾಗಿ ವ್ಯಕ್ತಿಗಳು ಪಾತ್ರ ಮತ್ತು ಅಂತಸ್ತುಗಳಿಗಾಗಿ ಸ್ಪರ್ಧೆ ಮಾಡುತ್ತಾರೆ.

ನಾಲ್ಕನೆ ಬಗೆ ಜನಾಂಗೀಯವಾದುದು. ರಾಷ್ಟ್ರಗಳ ನಡುವೂ ಹಾಗೂ ರಾಷ್ಟ್ರೀಯರುಗಳ ನಡುವಣ ಅಹಿಂಸಾ ಹೋರಾಟವನ್ನು ಜನಾಂಗೀಯ ಸ್ಪರ್ಧೆಯು ಒಳಗೊಂಡಿರುತ್ತದೆ. ದಕ್ಷಿಣಾ ಆಫ್ರಿಕಾದ ಕಪ್ಪು ಜನ ಮತ್ತು ಬಿಳಿಯರ ನಡುವಣ ಹೋರಾಟ ಇದಕ್ಕೆ ಸೂಕ್ತ ನಿದರ್ಶನ.

ಐದನೆಯ ಬಗೆಯ ಸ್ಪರ್ಧೆಯು ರಾಜಕೀಯವಾದುದು. ಎಲ್ಲಾ ರಾಷ್ಟ್ರಗಳಲ್ಲೂ ವಿಶೇಷವಾಗಿ ಚುನಾವಣಾ ಸಮಯದಲ್ಲಿ ರಾಜಕೀಯ ಪಕ್ಷದ ಸದಸ್ಯರುಗಳ ನಡುವೆ ಸ್ಪರ್ಧೆ ಇರುವುದು ಸ್ಪಷ್ಟವಾಗಿ ಕಾಣುವಂತಹುದೆ. ಅದೇ ರೀತಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲೂ ಸ್ಪರ್ಧೆಯು ಸ್ವಾಭಾವಿಕ.

ಈಗ ತಿಳಿಸಿದ ಸ್ಪರ್ಧೆಯ ಬಗೆಗಳ ಜೊತೆಗೆ ಸಮಾಜದಲ್ಲಿ ಇನ್ನೆರಡು ಬಗೆಯ ಸ್ಪರ್ಧೆಗಳನ್ನು ಕಾಣಬಹುದು. ಅವು ಯಾವುವು ಎಂದರೆ ವೈಯಕ್ತಿಕ ಸ್ಪರ್ಧೆ ಮತ್ತು ಅವೈಯಕ್ತಿಕ ಸ್ಪರ್ಧೆ. ಯಾವಾಗ ವ್ಯಕ್ತಿಗಳು ಕೆಲಸಕ್ಕೋಸ್ಕರ, ಸಾಮಾಜಿಕ ಘನತೆ ಹೊಂದುವುದಕ್ಕೋಸ್ಕರ, ನಾಯಕತ್ವ ಪಡೆಯುವುದಕ್ಕಾಗಿ ಅಥವಾ ವ್ಯಾಪಾರ ವಹಿವಾಟಿನಲ್ಲಿ ಮುಂದೆ ಬರಲು ಪರಸ್ಪರ ಹೋರಾಟ ಮಾಡುತ್ತಾರೋ ಹಾಗೂ ಇವುಗಳ ಸಾಧನೆಗೋಸ್ಕರ ತಮ್ಮ ಗಮನವನ್ನು ಕೇಂದ್ರೀಕರಿಸುತ್ತಾರೋ ಅದನ್ನು ವೈಯಕ್ತಿಕ ಸ್ಪರ್ಧೆ ಎನ್ನಬಹುದು. ವ್ಯಕ್ತಿಗಳು ಪರಸ್ಪರ ವ್ಯಕ್ತಿಗತ ಮಟ್ಟದಲ್ಲಿ ಹೋರಾಟ ಮಾಡದೆ ಸಾಮಾಜಿಕ, ಸಾಂಸ್ಕೃತಿಕ ಸಂಘಟನೆ, ರಾಷ್ಟ್ರಗಳ, ರಾಜಕೀಯ ಪಕ್ಷಗಳು ಇತ್ಯಾದಿ ಗುಂಪಿನ ಸಮಸ್ಯೆಗಾಗಿ ಹೋರಾಟ ಮಾಡಿದಾಗ ಅದನ್ನು ಅವೈಯಕ್ತಿಕ ಸ್ಪರ್ಧೆ ಎನ್ನಬಹುದು. ಸಮೂಹದ ಮತ್ತು ವ್ಯಕ್ತಿಗಳ ಜೀವನದಲ್ಲಿ ಸ್ಪರ್ಧೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸಮಾಜ ವ್ಯವಸ್ಥೆಯಲ್ಲಿ ವ್ಯಕ್ತಿಗಳಿಗೆ ಸ್ಥಾನವನ್ನು ಒದಗಿಸುತ್ತದೆ. ವ್ಯಕ್ತಿಗಳು ತಮ್ಮ ಶಕ್ತ್ಯಾನುಸಾರ ತಮ್ಮ ಪಾಲಿನ ಕರ್ತವ್ಯಗಳನ್ನು ನಿರ್ವಹಿಸಿ ಇತರ ವ್ಯಕ್ತಿಗಳೂ ನಿರ್ವಹಿಸುವಂತೆ ಮಾಡುತ್ತಾರೆ. ಯಾವ ಕೆಲಸವನ್ನು ಮಾಡಬೇಕೆಂಬುದನ್ನು ಸ್ಪರ್ಧೆ ನಿರ್ಣಯಿಸುತ್ತದೆ. ಇಂದಿನ ಸಂಕೀರ್ಣವಾದ ಇಡೀ ಆರ್ಥಿಕ ವ್ಯವಸ್ಥೆ ಹಾಗೂ ಶ್ರಮ ವಿಭಜನೆಗಳು ಸ್ಪರ್ಧೆಯಿಂದ ಉದ್ಭವಿಸಿವೆ. ಎರಡನೆಯದಾಗಿ ವ್ಯಕ್ತಿಯು ತಾನು ಹೆಚ್ಚಿನ ಮೆಚ್ಚುಗೆಯನ್ನು ಪಡೆಯಬೇಕೆಂಬ ಅಭಿಲಾಷೆಯಿಂದ ಕಾರ್ಯ ಪ್ರವರ್ತನಾಗುತ್ತಾನೆ. ಗೆದ್ದರೆ ಬಹುಮಾನ ದೊರಕುವುದೆಂಬ ಆಸೆಯನ್ನು ಹುಟ್ಟಿಸಿ ಸಾಧನೆ ಮಾಡುವಂತೆ ವ್ಯವಸ್ಥೆ ಪ್ರೇರೇಪಿಸುತ್ತದೆ. ಆದ್ದರಿಂದ ವ್ಯಕ್ತಿಗಳು ಸ್ಪರ್ಧಿಸುವಾಗ ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಮೂರನೆಯದಾಗಿ ನ್ಯಾಯವಾದ ಸ್ಪರ್ಧೆ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿ ಹಾಗೂ ಸಾಮಾನ್ಯರ ಹಿತ ಸಾಧಿಸಲು ಮುಖ್ಯವಾಗಿ ಬೇಕು. ಏಕೆಂದರೆ ಸ್ಪರ್ಧೆಯು ವ್ಯಕ್ತಿಗಳನ್ನು ಹಾಗೂ ಗುಂಪುಗಳನ್ನು ಕಷ್ಟಪಟ್ಟು ದುಡಿಯುವಂತೆ ಪ್ರಚೋದಿಸುತ್ತದೆ. ಕೆಲವರು ಸ್ಪರ್ಧೆಯನ್ನು ಆಧುನಿಕ ನಾಗರಿಕತೆಯ ಮುಖ್ಯ ಲಕ್ಷಣವೆಂದು ಭಾವಿಸುತ್ತಾರೆ. ಹೊಸ ಅನುಭವಗಳು ಮತ್ತು ಹೊಸ ಮನ್ನಣೆಗಳ ಆಸೆ ಆಕಾಂಕ್ಷೆಗಳನ್ನು ವ್ಯಕ್ತಿಗಳು ಪೂರೈಸಲು ಸ್ಪರ್ಧೆಯು ಉತ್ತಮ ಅವಕಾಶವನ್ನು ಒದಗಿಸುತ್ತದೆ ಎಂದು ಆಗಬರ್ನ್ ಮತ್ತು ನಿಮಕಾಪ್ ಅಭಿಪ್ರಾಯ ಪಟ್ಟಿದ್ದಾರೆ. (W.F.Ogburn and M.E.Nimkoff : A Handbook of Sociology ; London ; Routledge ; 1953). ಹೊಂದಿರುವ ಸ್ಥಾನಮಾನಕ್ಕಿಂತ ಸ್ಪರ್ಧೆಯು ಉತ್ತಮ ಸ್ಥಾನವನ್ನು ದೊರಕಿಸಿಕೊಡಲು ಸಹಕಾರಿಯಾಗಿದೆ.

ಸ್ಪರ್ಧೆಯಿಂದ ಇಷ್ಟೆಲ್ಲಾ ಅನುಕೂಲಗಳಿದ್ದರೂ ಕೆಲವು ವೇಳೆ ಅದು ವ್ಯಕ್ತಿಗಳಿಗೂ ಗುಂಪುಗಳಿಗೂ ಕೆಡಕನ್ನುಂಟುಮಾಡಬಹುದು. ಭಾವೋದ್ರೇಕಗಳನ್ನುಂಟು ಮಾಡಬಹುದು. ನ್ಯಾಯವಲ್ಲದ ಸ್ಪರ್ಧೆಗಳಿಂದ ಅನ್ಯಾಯ ಅನಾಹುತಗಳು ಸಂಭವಿಸುತ್ತವೆ. ಇವುಗಳನ್ನು ತಡೆಗಟ್ಟದಿದ್ದರೆ ಘರ್ಷಣೆಯುಂಟಾಗಿ ಹಿಂಸಾತ್ಮಕ ಚಟುವಟಿಕೆಗಳಿಗೆ ಅವಕಾಶವುಂಟಾಗುತ್ತದೆ. ಉತ್ಪತ್ತಿ ಸಮೃದ್ಧಿಯಾಗಿದ್ದರೂ ಅಭಾವವುಂಟಾಗಿ ಭಯ, ಅಭದ್ರತೆ, ಅಸ್ಥಿರತೆಗಳುಂಟಾಗುತ್ತವೆ. ಇತರರನ್ನು ತನ್ನ ಸಾಧನಗಳಂತೆ ಪರಿಗಣಿಸುತ್ತದೆ. ಭಾವರಾಗಗಳಿಗೆ ಸ್ಥಾನವೇ ಇರುವುದಿಲ್ಲ. ಅಡೆತಡೆಗಳಿಲ್ಲದ ಸ್ಪರ್ಧೆಯು ಏಕಸ್ವಾಮ್ಯತೆಗೆ ದಾರಿಮಾಡಿಕೊಡುತ್ತದೆ. ಆದ್ದರಿಂದ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಭದ್ರತೆಗಾಗಿ ಸಹಕಾರವನ್ನು ಮರೆಹೋಗುವ ಪ್ರಯತ್ನಗಳು ನಡೆಯುತ್ತವೆ. ಸಮಾಜ ವ್ಯವಸ್ಥೆಯು ಸಹಕಾರ ಮತ್ತು ಸ್ಪರ್ಧೆಗಳನ್ನು ಸಮತೂಕವಾಗಿಟ್ಟಿರಬೇಕು. ಸ್ಪರ್ಧೆಯು ಯಾವಾಗಲೂ ನ್ಯಾಯವಾಗಿರಬೇಕು. ಆಗ ವ್ಯಕ್ತಿಯ ಪ್ರಗತಿಗೂ ಸಮಾಜದ ಕಲ್ಯಾಣಕ್ಕೂ ದಾರಿಯಾಗುವುದು.

## 3.4 : ಘರ್ಷಣೆ

**ಅರ್ಥ:** ಒಬ್ಬರು ಇನ್ನೊಬ್ಬರನ್ನು ಉದ್ದೇಶ ಪೂರ್ವಕವಾಗಿ ವಿರೋಧಿಸಿದರೆ, ತಡೆಗಟ್ಟಿದರೆ ಇಲ್ಲವೇ ಒತ್ತಾಯ ಪಡಿಸಿದರೆ ಅದು ಘರ್ಷಣೆಯೆನಿಸಿಕೊಳ್ಳುತ್ತದೆ. ಮಾನವ ಸಂಬಂಧಗಳಲ್ಲಿ ಘರ್ಷಣೆ ಇದ್ದೇ ಇರುತ್ತದೆ. ವ್ಯಕ್ತಿಗಳು ಅಥವಾ ಗುಂಪುಗಳು ತಮ್ಮ ಗುರಿಯನ್ನು ಸಾಧಿಸಲು ಎದುರಾಳಿಯನ್ನು ಹಿಂಸೆಯಿಂದ ಅಥವಾ ಭಯ ಹುಟ್ಟಿಸಿ ಪ್ರತಿಭಟಿಸುವ ಸಾಮಾಜಿಕ ಪ್ರಕ್ರಿಯೆಯು ಘರ್ಷಣೆಯೆನಿಸಿಕೊಳ್ಳುತ್ತದೆ. ಬಹುಮಟ್ಟಿಗೆ ಪ್ರತಿಯೊಂದು ಮಾನವ ಕೃತ್ಯವು ಕೂಡ ಇನ್ನೊಬ್ಬರ ಆಶೋತ್ತಾರಗಳಿಗೆ ಅಡ್ಡಿ ಬರುವುದು ಇಲ್ಲವೇ ಅವರ ಯೋಚನೆಗಳ ನಡುವೆ ಬರುವುದು ಸಾಮಾನ್ಯ. ಉದ್ದೇಶಪೂರ್ವಕವಾಗಿ ಪ್ರತಿಭಟಿಸುವ ಕೃತ್ಯವು ಘರ್ಷಣೆಯೆನಿಸಿಕೊಳ್ಳುತ್ತದೆ. ಇದನ್ನೇ ಬೇರೆ ಮಾತಿನಲ್ಲಿ ಹೇಳುವುದಾದರೆ ಘರ್ಷಣೆಯು ವಿಶೇಷ ಸಂದರ್ಭಗಳಲ್ಲಿ ವ್ಯಕ್ತಿಗತವಾಗುವುದು ಅಥವಾ ವಿರೋಧ ರೂಪದಲ್ಲಿ ವ್ಯಕ್ತವಾಗುವ ಸ್ಪರ್ಧೆ. ಇದರಲ್ಲಿ ಒಂದು ಪಂಗಡವು ಇನ್ನೊಂದು ಪಂಗಡವನ್ನು ನಾಶಪಡಿಸಲು ಇಲ್ಲವೇ ಅದನ್ನು ಅದೋಗತಿಗಿಳಿಸಲು ಪ್ರಯತ್ನಿಸುತ್ತದೆ. ಸಾಮಾನ್ಯವಾಗಿ ಘರ್ಷಣೆಯು ಹಿಂಸೆಯ ಮತ್ತೊಂದು ಮುಖ ಎಂಬ ಭಾವನೆಯಿದ್ದರೂ ಕೆಲವು ವೇಳೆ ಹಿಂಸೆಯಿಲ್ಲದೆ ಘರ್ಷಣೆಯಾಗುವುದುಂಟು. ಘರ್ಷಣೆಯು ಸಾರ್ವತ್ರಿಕವಾದುದು. ಎಲ್ಲಾ ಕಾಲಗಳಲ್ಲಿಯೂ ಎಲ್ಲಾ ಕಡೆಗಳಲ್ಲಿಯೂ ಕಂಡುಬರುತ್ತದೆ. ಯಾವ ಕಾಲದಲ್ಲಿಯೇ ಆಗಲೀ, ಸಮಾಜದಲ್ಲಿಯೇ ಆಗಲೀ ಕೆಲವು ವ್ಯಕ್ತಿಗಳು ಅಥವಾ ಗುಂಪುಗಳು ಘರ್ಷಣೆಗೆ ಒಳಗಾಗದೆ ಇಲ್ಲವೇ ಇಲ್ಲ. ಮುಖ್ಯವಾಗಿ ವ್ಯಕ್ತಿಗಳ ಅಥವಾ ಗುಂಪುಗಳ ಹಿತಾಸಕ್ತಿಗಳ ನಡುವೆ ಘರ್ಷಣೆಯುಂಟಾಗುತ್ತದೆ.

ವ್ಯಕ್ತಿಗಳ ಆಸೆ ಆಕಾಂಕ್ಷೆಗಳು, ನಿರಾಶೆ ಬೇಡಿಕೆಗಳಲ್ಲಿಯೂ ಮತ್ತು ಸಮಾಜದತ್ತ ನೈತಿಕ ಮಟ್ಟಗಳಲ್ಲಿ ಆಗಿರುವ ಬದಲಾವಣೆಗಳಲ್ಲಿಯೂ ಉಂಟಾಗುವ ವ್ಯತ್ಯಾಸಗಳಿಂದ ಘರ್ಷಣೆಗಳುಂಟಾಗುತ್ತವೆ. ಕಾಲದಿಂದಲೂ ಮಕ್ಕಳು ತಮ್ಮ ತಂದೆ-ತಾಯಿಗಳಿಗೆ ವಿಧೇಯರಾಗಿರಬೇಕೆಂಬುದು ನಿಯಮ. ಆದರೆ ಇಂದು ಕಿರಿಯ ಪೀಳಿಗೆಯ ವ್ಯಕ್ತಿಗಳು ತಮಗಿಷ್ಟ ಬಂದ ರೀತಿಯಲ್ಲಿ ವರ್ತಿಸಲು ಇಚ್ಚಿಸುತ್ತಾರೆ. ಫಲಿತಾಂಶವಾಗಿ ಹಿಂದಿಗಿಂತಲೂ ಇತ್ತೀಚಿಗೆ ತಂದೆ ಮಕ್ಕಳ ನಡುವೆ ಘರ್ಷಣೆ ಏರ್ಪಡುತ್ತಿದೆ.

ಸಹಕಾರದಂತೆಯೇ ಘರ್ಷಣೆಯು ಮಾನವನ ಹಾಗೂ ಸಮಾಜದ ಲಕ್ಷಣವಾಗಿದೆ. ಇದು ಸಹಕಾರದ ವಿರೋಧನ್ಯಾಸವಾಗಿದೆ. ವ್ಯಕ್ತಿಯ ಅಥವ ಗುಂಪಿನಲ್ಲಿನ ವ್ಯಕ್ತಿಗಳ ಕಾರ್ಯಗಳು ಇದರಿಂದಾಗಿ ಅಡ್ಡಿಯಾಗುವುದುಂಟು. ಸಾಮಾಜಿಕ ವಿಕಾಸಕ್ಕೆ ಮತ್ತು ಪ್ರಗತಿಗೆ ಘರ್ಷಣೆ ಆಧಾರ ಎಂಬುದಾಗಿ ಗುಂಪ್ಲೋವಿಟ್ ಅಭಿಪ್ರಾಯಪಟ್ಟಿದ್ದಾರೆ. ಘರ್ಷಣಾ ರಹಿತ ಸಾಮರಸ್ಯ ಗುಂಪು ಪ್ರಾಯೋಗಿಕವಾಗಿ ಕಾಣುವುದು ಅಸಾಧ್ಯ ಎಂದು ಸಿಮ್ಮೆಲ್ ತಿಳಿಸಿದ್ದಾರೆ. ಗುಂಪುಗಳ ಒಳಗಿನ ಮತ್ತು ಸಮಾಜದೊಳಗಿನ ಮತ್ತು ಗುಂಪುಗಳ ನಡುವೆ ಮತ್ತು ಸಮಾಜಗಳ ನಡುವೆ ಹಿತಾಸಕ್ತಿಗಳ ರಕ್ಷಣೆಗೋಸ್ಕರ ತಿಕ್ಕಾಟ ಉಂಟಾದಾಗ ಮೂಲತಃ ಘರ್ಷಣೆ ಉಂಟಾಗುತ್ತದೆ. ಸಾಮಾಜಿಕ ನಿಯಮಗಳಲ್ಲಿ ಬದಲಾವಣೆ ಕಂಡು ಬಂದಾಗ ಮತ್ತು ನಿಯಮಗಳಿಗೆ ವ್ಯಕ್ತಿಗಳು ಬದ್ದರಾಗದಿದ್ದಾಗ ಘರ್ಷಣೆ ಉದ್ಭವಿಸುತ್ತದೆ. ಘರ್ಷಣೆಯು ಪ್ರಜ್ಞಾ ಪೂರ್ವಕ ಕ್ರಿಯೆ. ಎದುರಾಳಿಯನ್ನು ಸೋಲಿಸಿ ಸಂಬಂಧಪಟ್ಟ ಗುರಿಯನ್ನು ಸಾಧಿಸಬೇಕಾದಾಗ ಇದು ಉದ್ಭವವಾಗ್ತುದೆ. ಎದುರಾಳಿಗೆ ತೊಂದರೆ ಮಾಡುವುದು ಅಥವಾ ನಷ್ಟ ಉಂಟುಮಾಡುವುದು ಇದರ ಮುಖ್ಯ ಗುರಿಯಾಗಿದೆ. ಘರ್ಷಣೆಯು ನಿರಂತರವಾದ ಪ್ರಕ್ರಿಯೆ ಅಲ್ಲದಿದ್ದರೂ ಸಹ ಆಗಿಂದಾಗ್ಗೆ ಸಂಭವಿಸುವಂತಹ ಕ್ರಿಯೆ. ಮಾನವ ಸಮಾಜದ ಪ್ರತಿಯೊಂದು ಭಾಗದಲ್ಲೂ ಘರ್ಷಣೆ ಕಂಡು ಬರುವಂತಹುದಾಗಿದ್ದು ಸಾರ್ವತ್ರಿಕವಾದ ಲಕ್ಷಣವನ್ನು ಹೊಂದಿದೆ.

### 3.4.1 ಘರ್ಷಣೆಯ ಬಗೆಗಳು

ಜಾರ್ಜ್ ಸಿಮ್ಮೆಲರು ನಾಲ್ಕು ಬಗೆಯ ಘರ್ಷಣೆಗಳನ್ನು ಗುರುತಿಸಿದ್ದಾರೆ. ಅವು ಯಾವುವು ಎಂದರೆ ಯುದ್ಧ, ವೈಷಮ್ಯ ಅಥವಾ ಗುಂಪು ಕಲಹ, ವ್ಯಾಜ್ಯ ಹಾಗೂ ಅವೈಯಕ್ತಿಕ ಆದರ್ಶಗಳ ಘರ್ಷಣೆ. ಅಂತಾರಾಷ್ಟ್ರೀಯ ವ್ಯಾಪಾರದ ಬೆಳವಣಿಗೆಗೆ ಮೊದಲು ಗುಂಪುಗಳ ಸಂಪರ್ಕ ಯುದ್ಧದ ಮೂಲಕವೆ ಆಗುತ್ತಿತ್ತು. ಯುದ್ದವು ಸಮಾಜವನ್ನು ಬೇರ್ಪಡಿಸುವ ಲಕ್ಷಣವನ್ನು ಹೊಂದಿದ್ದರೂ ಸಹ ಒಂದುಗೂಡಿಸುವ ಪ್ರಭಾವವನ್ನು ಹೊಂದಿದೆ. ಒಟ್ಟಾರೆ ಎರಡು ಗುಂಪುಗಳ ನಡುವೆ ಏರ್ಪಡುವ ಘರ್ಷಣೆಯೇ ಯುದ್ಧವೆಂಬುದು ಎಲ್ಲರಿಗೂ ತಿಳಿದ ವಿಷಯ. ಒಂದು ಗುಂಪಿನಿಂದ ಇನ್ನೊಂದು ಗುಂಪಿಗೆ ಅನ್ಯಾಯವಾಗಿದ್ದರೆ ಆ ಗುಂಪು ಮತ್ತೊಂದು ಗುಂಪಿನೊಡನೆ ಹೋರಾಡುವುದು ಸಹಜ ಎಂಬ ಅಭಿಪ್ರಾಯವನ್ನು ಸಿಮ್ಮೆಲ್ಲರು ವ್ಯಕ್ತಪಡಿಸಿದ್ದಾರೆ. ಇದು ಗುಂಪಿನೊಳಗಡೆ ಉಂಟಾಗುವ ವೈಷಮ್ಯದಿಂದ ಬರುತ್ತದೆ. ವ್ಯಕ್ತಿಯೇ ಆಗಲಿ, ಗುಂಪೇ ಆಗಲಿ ಕೆಲವು ಹಕ್ಕುಗಳ ಬಗ್ಗೆ ನ್ಯಾಯವಾಗಿ ಹೋರಾಡುವುದು ವ್ಯಾಜ್ಯವೆನಿಸಿಕೊಳ್ಳುತ್ತದೆ. ವ್ಯಕ್ತಿಗಳು ತಮಗಲ್ಲದಿದ್ದರು ಸಹ ಕೆಲವ ಆದರ್ಶಗಳಿಕೋಸ್ಕರ ಹೋರಾಡುತ್ತಾರೆ. ಉದಾಹರಣೆಗೆ ಸಮತಾವಾದಿಗಳು ಕಮ್ಯುನಿಸಂ ತತ್ವವೇ ಆದರ್ಶವಾದುದೆಂದು ಆ ವ್ಯವಸ್ಥೆಯೇ ವಿಶ್ವದಲ್ಲಿ ಶಾಂತಿಯನ್ನು ನೆಲಸಬಲ್ಲುದೆಂದು ಸಮರ್ಥಿಸುತ್ತಾರೆ. ಅದೇ ರೀತಿ ಬಂಡವಾಳ ಶಾಹಿಗಳು.

ಘರ್ಷಣೆಯ ಬಗೆಗಳನ್ನು ಇತರರು ಈ ರೀತಿಯಲ್ಲಿ ವಿಂಗಡಿಸಿದ್ದಾರೆ.

- ***ವೈಯಕ್ತಿಕ ಘರ್ಷಣೆ***

ವ್ಯಕ್ತಿಗಳು ಹೊಂದಿರುವ ಭಿನ್ನ ಬಗೆಯ ಭಾವನೆಗಳು ಹಾಗು ಗುರಿಗಳಿಂದಾಗಿ ವೈಯಕ್ತಿಕ ಘರ್ಷಣೆ ಎದುರಾಗುತ್ತದೆ. ಚುನಾವಣೆಯಲ್ಲಿ ಒಂದು ಸ್ಥಾನಕ್ಕಾಗಿ ಇಬ್ಬರು ವ್ಯಕ್ತಿಗಳು ನಡೆಸುವ ಹೋರಾಟ ವೈಯಕ್ತಿಕ ಘರ್ಷಣೆಗೆ ನಿದರ್ಶನ.

- ***ವರ್ಗ ಘರ್ಷಣೆ***

ವರ್ಗಗಳು ಭಿನ್ನ ಬಗೆಯ ಹಿತಾಸಕ್ತಿಗಳನ್ನು ಹೊಂದಿದ್ದಾಗ ವರ್ಗ ಘರ್ಷಣೆ ಮೂಡುತ್ತದೆ. ಕಾರ್ಮಿಕರ ಮತ್ತು ಬಂಡವಾಳಗಾರರ ವರ್ಗಗಳ ನಡುವೆ ನಡೆಯುವ ಘರ್ಷಣೆ ಇದಕ್ಕೆ ನಿದರ್ಶನ.

- ***ಜಾತಿ ಘರ್ಷಣೆ***

ಭಾರತದಲ್ಲಿ ಭಿನ್ನ ಜಾತಿಗಳ ನಡುವಣ ಘರ್ಷಣೆಗೆ ಏಣಿ ಶ್ರೇಣಿ ಅಂತಸ್ತಿನಲ್ಲಿನ ಅಸಮಾನತೆಯ ಭಾವನೆಯು ಕಾರಣವಾಗಿದೆ. ಉದಾಹರಣೆಗೆ ದ್ವಿಜರು ಬೇರೆ ಜಾತಿಯವರಿಗಿಂತ ಉತ್ತಮರು ಎನ್ನುವುದು ಇದಕ್ಕೆ ನಿದರ್ಶನವಾಗಿದೆ.

- ***ಜನಾಂಗೀಯ ಘರ್ಷಣೆ***

ಒಂದು ಜನಾಂಗವು ಬೇರೆ ಜನಾಂಗಗಳಿಗಿಂತ ಮೇಲು ಎಂದು ಪ್ರತಿಪಾದಿಸಿದಾಗ ಜನಾಂಗೀಯ ಘರ್ಷಣೆ ಉಂಟಾಗುತ್ತದೆ. ಬಿಳಿಯರು ತಾವು ಬೇರೆ ಜನಾಂಗದವರಿಗಿಂತ ಮೇಲು ಎಂದು ಪ್ರತಿಪಾದಿಸುವುದನ್ನು ಕಾಣಬಹುದಾಗಿದೆ. ಜನಾಂಗೀಯ ಘರ್ಷಣೆ ಹಲವಾರು ರಾಷ್ಟ್ರಗಳಲ್ಲಿ ಇಂದಿಗೂ ಪ್ರಚಲಿತವಾಗಿದೆ. ಇದರಿಂದಾಗಿ ಹಲವಾರು ನಾಯಕರು ಹತ್ಯೆಗೀಡಾಗಿರುವುದನ್ನು ನಾವು ಅವಲೋಕಿಸಬಹುದು.

- ***ಗುಂಪು ಘರ್ಷಣೆ***

ಗುಂಪು ಘರ್ಷಣೆ ರಾಜಕೀಯ ರಂಗದಲ್ಲಿ ಕಂಡು ಬರುತ್ತದೆ. ಭಿನ್ನ ಗುಂಪುಗಳು ಹೊಂದಿರುವ ಭಿನ್ನ - ಭಿನ್ನ ಹಿತಾಸಕ್ತಿಗಳು ಹಾಗು ಪ್ರೇರಣೆಗಳು ಮತ್ತು ಇವುಗಳ ಈಡೇರಿಕೆಗಾಗಿ ಪ್ರಯತ್ನ ನಡೆದಾಗ ಘರ್ಷಣೆಗೆ ದಾರಿ ಮಾಡಿ ಕೊಡುತ್ತದೆ.

- ***ಅಂತಾರಾಷ್ಟ್ರೀಯ ಘರ್ಷಣೆ***

ಒಂದು ರಾಷ್ಟ್ರವು ತನ್ನ ನಿರ್ದಿಷ್ಟ ಗುರಿಯ ಸಾಧನೆಗೋಸ್ಕರ ಇನ್ನೊಂದು ರಾಷ್ಟ್ರವನ್ನು ದಮನ ಮಾಡಲು ಪ್ರಯತ್ನಿಸಿದಾಗ ಇಂತಹ ಘರ್ಷಣೆ ಸಂಭವಿಸುವುದುಂಟು.

### 3.4.2 ಘರ್ಷಣೆಯ ಪ್ರಾಮುಖ್ಯ

ಇದು ಸಾರ್ವತ್ರಿಕವಾದುದು ಹಾಗೂ ಎಲ್ಲಾ ಕಾಲ ಮತ್ತು ಸ್ಥಳಗಳಲ್ಲು ಸಂಭವಿಸುತ್ತದೆ. ವ್ಯಕ್ತಿಗಳು ಮತ್ತು ಗುಂಪುಗಳ ನಡುವೆ ಘರ್ಷಣೆ ನಡೆಯದೆ ಇರುವ ಕಾಲವನ್ನಾಗಲಿ ಅಥವಾ ಸಮಾಜವನ್ನಾಗಲಿ ನೋಡಲು ಸಾಧ್ಯವಿಲ್ಲ. ಇದು ವ್ಯಕ್ತಿ ಮತ್ತು ಸಮಾಜಕ್ಕೆ ಬಹಳ ಮುಖ್ಯವಾದುದು. ವೈಯಕ್ತಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಇದರ ಅವಶ್ಯಕತೆ ಇದೆ. ಉನ್ನತ ಜೀವನ ಮಟ್ಟವನ್ನು ಹೆಚ್ಚಿಸಲು ಪ್ರತಿಯೊಬ್ಬ ವ್ಯಕ್ತಿಯು ಹೋರಾಟ ಮಾಡಲೇಬೇಕು. ಕುಟುಂಬವು ಸುಲಲಿತವಾಗಿ ಕಾರ್ಯ ನಿರ್ವಹಿಸಲು, ದೇಶದ ಉತ್ಪಾದನೆ ಹೆಚ್ಚಿಸಲು ಅಥವಾ ರಾಷ್ಟ್ರದ ಸ್ವಾತಂತ್ರ್ಯವನ್ನು ರಕ್ಷಿಸಲು ಜನರು ಹೋರಾಡಲೇ ಬೇಕು. ರಾಜಕೀಯ ಘರ್ಷಣೆ ಜನಾಂಗೀಯ ಘರ್ಷಣೆ, ಕೌಟುಂಬಿಕ ಘರ್ಷಣೆ, ಧಾರ್ಮಿಕ ಘರ್ಷಣೆ, ವ್ಯಾಪಾರದಲ್ಲಿನ ಘರ್ಷಣೆ ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ. ಮಾನವಕುಲದಲ್ಲಿ ಸಹೋದರತ್ವ ಮತ್ತು ಶಾಂತಿ ಕಾಪಾಡುವ ಸಲುವಾಗಿ ಈ ಬಗೆಯ ಘರ್ಷಣೆಯನ್ನು ನಿಯಂತ್ರಿಸುವ ಅವಶ್ಯಕತೆ ಇದೆ.

ಸಮಾಜವು ಘರ್ಷಣೆಯನ್ನು ತಡೆಗಟ್ಟಲು ಪ್ರಯತ್ನಿಸುತ್ತದೆ. ಸಾಧ್ಯವಾಗದಿದ್ದರೆ, ಹೊಸ ರೀತಿಯ ಸಮಸ್ಯೆಗಳು ಉದ್ಭವಿಸಲು ಕಾರಣವಾಗುತ್ತದೆ. ಕೆಲವು ವ್ಯಕ್ತಿಗಳಿಗೆ ಕೆಲವು ಅಂತಸ್ತುಗಳನ್ನು ಕೊಡುವುದರಿಂದ ಸಮಾಜದಲ್ಲಿ ಅಸೂಯೆ ಜಿಗುಪ್ಸೆಗಳು ತಲೆದೋರಲು ಕಾರಣವಾಗಿದೆ. ವ್ಯಕ್ತಿಗೆ ಇತರರ ಮೇಲೆ ಅಧಿಕಾರ ಚಲಾಹಿಸುವ ಹಕ್ಕನ್ನು ಕೊಡುವುದರಿಂದ ಅಧಿಕಾರವನ್ನು ನಿಂದಿಸುವ ಮತ್ತು ಪ್ರತೀಕಾರ ಮನೋಭಾವಕ್ಕೆ ಅವಕಾಶವನ್ನು ಕಲ್ಪಿಸುತ್ತದೆ.

ಎಲ್ಲಾ ಸಮಾಜಗಳಲ್ಲಿಯೂ ವ್ಯಕ್ತಿ ಮತ್ತು ಸಮಾಜಗಳ ನಡುವೆ ಸುಮಧುರ ಬಾಂಧವ್ಯವು, ಸಮತೋಲನವು ಇರುತ್ತದೆ ಎಂದು ಹೇಳಲು ಬರುವುದಿಲ್ಲ. ವ್ಯಕ್ತಿಗಳ ಸಹಕಾರಕ್ಕೆ ಒಂದು ಮಿತಿ ಇದೆ. ಒಂದು ಘಟ್ಟದವರೆಗೆ ಸಂಘ, ಸಂಸ್ಥೆಗಳಲ್ಲಿ, ವ್ಯಕ್ತಿಗಳಲ್ಲಿ ಸಹಕಾರವನ್ನು ನೋಡಬಹುದು. ಅನಂತರದ ಕಲಹಗಳು ಭಿನ್ನಾಭಿಪ್ರಾಯಗಳು ಹುಟ್ಟೇ ಹುಟ್ಟುತ್ತವೆ. ಅತ್ಯಂತ ನಿಕಟವಾದ ಸ್ನೇಹದಲ್ಲಿ ವ್ಯಕ್ತಿಗಳ ಅಭಿರುಚಿಯು ಬೇರೆಯಾದಲ್ಲಿ ಕಲಹ ಕಂಡುಬರುತ್ತದೆ. ಕುಟುಂಬದಲ್ಲಿಯೂ ಕೂಡ ಸಹಕಾರ ಮತ್ತು ಕಲಹಗಳು ಅನೇಕ ರೂಪ ತಾಳುತ್ತವೆ.

ಚಿಕ್ಕದಾದ ಕುಟುಂಬ ಸಂಸ್ಥೆಯಲ್ಲಿಯೇ ಸಹಕಾರ ಮತ್ತು ಘರ್ಷಣೆಗಳು ಬಂದ ಮೇಲೆ ವಿಶಾಲವಾದ ಅನೇಕ ಸದಸ್ಯರನ್ನೊಳಗೊಂಡ ದೊಡ್ಡ ಸಂಘ-ಸಂಸ್ಥೆಗಳಲ್ಲಿ ಇವೆರಡು ಕಂಡು ಬರುತ್ತವೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ.

- **ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ - 1**

1. ಸಹಕಾರ ಎಂದರೇನು?

- **ತಪ್ಪು ಅಥವಾ ಸರಿ ಗುರುತಿಸಿ.**

2. ಘರ್ಷಣೆಯು ನಿರಂತರವಾದ ಪ್ರಕ್ರಿಯೆ ಅಲ್ಲದಿದ್ದರೂ ಸಹ ಆಗಿಂದಾಗ್ಗೆ ಸಂಭವಿಸುವಂತಹ ಪ್ರಕ್ರಿಯೆ.

ಸರಿ ☐ ತಪ್ಪು ☐

- **ಸರಿ ಉತ್ತರವನ್ನು ಗುರುತು ಮಾಡಿ.**

3. ''ಸ್ಪರ್ಧೆ ಎಂಬುದು ಸಾಮಾಜಿಕ ಸಂಪರ್ಕವಿಲ್ಲದ ಒಡನಾಟ''

ಈ ಹೇಳಿಕೆಯನ್ನು ಹೇಳಿದವರು -------------------

ಅ. ಪಾರ್ಕ್ ಮತ್ತು ಬರ್ಗೆಸ್

ಆ. ಆಗ್‌ಬರ್ನ್ ಮತ್ತು ನಿಮ್‌ಕಾಫ್

ಇ. ಮೆಕೈವರ್ ಮತ್ತು ಪೇಜ್

ಈ. ಮೊರಿಸ್ ಗಿನ್ಸ್‌ಬರ್ಗ್

## 3.5 : ಸಂಯೋಜನೆ

**ಅರ್ಥ:** ಈಗಾಗಲೆ ಚರ್ಚಿಸಿರುವಂತೆ ಸಹಕಾರ ಮತ್ತು ಘರ್ಷಣೆಗಳು ಪ್ರಕ್ರಿಯೆಗಳಾಗಿವೆ. ಕೆಲವು ಗುರಿಗಳನ್ನು ಸಾಧಿಸುವುದಕೋಸ್ಕರ ನಿರಂತರ ಐಕ್ಯತೆಯ ಅಗತ್ಯತೆಯನ್ನು ವ್ಯಕ್ತಿಗಳು ಮನಗಂಡಾಗ ಸಹಕಾರವು ಸಾಧ್ಯವಾಗುತ್ತದೆ. ಆದರೆ ಸ್ಪರ್ಧೆ ಮತ್ತು ಘರ್ಷಣೆಗಳು ಎಲ್ಲಾ ಸಾಮಾಜಿಕ ಸಂಬಂಧಗಳನ್ನು ಮುರಿಯಬಹುದು. ಗುಂಪುಗಳು ಬಹಳ ಕಾಲ ಘರ್ಷಣೆಗಳಲ್ಲಿ ತೊಡಗಿದಾಗ ಜೀವನ ದುಸ್ತರವಾಗುತ್ತದೆ. ಇಂತಹ ಸಂದರ್ಭದಲ್ಲಿ ಸಂಯೋಜನೆಯ ಅವಶ್ಯಕತೆ ಕಂಡು ಬರುತ್ತದೆ. ಇದು ವ್ಯಕ್ತಿಗಳ ಮತ್ತು ಗುಂಪುಗಳ ನಡುವೆ ಕೆಲವು ಬಗೆಯ ಹೊಂದಾಣಿಕೆಗೆ ದಾರಿಮಾಡುವುದರ ಮೂಲಕ ಅವರುಗಳ ನಡುವೆ ಇರುವ ಬಿಗುವುವನ್ನು ಕಡಿಮೆ ಮಾಡುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ಸಂಯೋಜನೆ ಎಂಬುದು ಘರ್ಷಣೆಗಳ ನಿವಾರಣೆಯೆ ಆಗಿದೆ. ಇದು ವ್ಯಕ್ತಿ ಹೊಸ ಪರಿಸರಕ್ಕೆ ಹೊಂದಿಕೊಳ್ಳುವುದನ್ನು ತಿಳಿಸುತ್ತದೆ. ಈ ರೀತಿಯ ಹೊಂದಾಣಿಕೆಯು ಭೌತಿಕ ಪರಿಸರದ'ಲ್ಲಿರಬಹುದು ಅಥವಾ ಸಾಮಾಜಿಕ ಪರಿಸರದಲ್ಲಿರಬಹುದು. ಹೊಂದಾಣಿಕೆ ಎಂಬುದು ಅನುವಂಶೀಯವಾಗಿ ಬಂದ ಜೈವಿಕ ಅಥವಾ ರಾಚನಿಕ ಬದಲಾವಣೆ. ಇನ್ನೊಂದೆಡೆ ಸಂಯೋಜನೆ ಎಂಬುದು ವ್ಯಕ್ತಿಯು ಹೊಸ ಜೀವನಕ್ಕೆ ಹೊಂದಿಕೊಳ್ಳುವಿಕೆಯ ಮೂಲಕ ತಮ್ಮ ತಮ್ಮಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತವೆ. ಇದನ್ನೇ ಮಾನವನು ಸಂಯೋಜನೆಯ ಮೂಲಕ ಮಾಡುತ್ತಾನೆ. ಸಾಮಾಜಿಕ ಪರಿಸರಧಲ್ಲಿ ಮಾನವನು ಬದುಕಬೇಕಾದರೆ ಪರಿಸರದೊಂದಿಗಿನ ಹೊಂದಾಣಿಕೆ ಅನಿವಾರ್ಯವಾಗಿರುವುದರಿಂದ ಸಂಯೋಜನೆಗೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಾನೆ. ಸಾಮಾನ್ಯವಾಗಿ ಮಾನವ ಯಾವಾಗಲು ಸಮಾಜದ ಇನ್ನಿತರ ಸಹ ಸದಸ್ಯರೊಡನೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಾನೆ.

ಅಸ್ತಿತ್ವದಲ್ಲಿರುವ ಘರ್ಷಣೆಯ ನಂತರದ ಮುಂದಿನ ಮೊದಲ ಹಂತ ಸಂಯೋಜನೆ. ಇದು ಮೈತ್ರಿ ಮತ್ತು ಸಹಕಾರಕ್ಕೆ ದಾರಿ ಮಾಡಿಕೊಡುತ್ತದೆ. ಸಮಾಜದಲ್ಲಿ ಮನುಷ್ಯರು ಯಾವಾಗಲು ತಮ್ಮ ಸಹ ಸದಸ್ಯರೊಡನೆ ಕಲಹ ಮಾಡಲು ಸಾಧ್ಯವಿಲ್ಲ. ತಮ್ಮ ಸಹ ಜೀವಿಗಳೊಂದಿಗೆ ಹೊಂದಿಕೊಳ್ಳಲು ವಿಫಲನಾದಾಗ ಆ ಪರಿಸ್ಥಿತಿಯನ್ನು ಸಹಿಸುವಂತರಾಗಬೇಕು ಅಥವಾ ಅನುಭವಿಸಬೇಕು. ಪ್ರಪಂಚದಲ್ಲಿ ಮನುಷ್ಯನು ಬದುಕುವುದನ್ನು ಕಲಿಯಬೇಕು. ತನ್ನ ಜೀವನದ ಪ್ರಕ್ರಿಯೆಯಲ್ಲಿ ಒಂದು ಬಗೆಯ ಒಡಂಬಡಿಕೆಗೆ ಬರಬೇಕು. ಇಲ್ಲದಿದ್ದರೆ ಸಮಾಜದಲ್ಲಿ ಬದುಕಲು ಸಾಧ್ಯವಿಲ್ಲ. ಕುಟುಂಬದಲ್ಲಿನ ಯೌವನಾವಸ್ಥೆಯ ಜೀವನವು ಸಂಯೋಜನೆಗೆ ಕುತೂಹಲದ ಮತ್ತು ಬೋಧಪ್ರಧ ಉದಾಹರಣೆ. ತಂದೆ-ತಾಯಿಗಳ ಇಚ್ಚೆಗೆ ಭಿನ್ನವಾದ ಸಂವೇದನೆ ಮತ್ತು ಭಾವನೆಗಳನ್ನು ಕುಟುಂಬದಲ್ಲಿನ ಯುವಕರು ಸಾಮಾನ್ಯವಾಗಿ ಬೆಳೆಸಿಕೊಳ್ಳುತ್ತಾರೆ. ಆದಾಗ್ಯೂ ಅವರ ತಂದೆ-ತಾಯಿಗಳ ಮಾರ್ಗದರ್ಶನದಂತೆ ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಾರೆ. ತಂದೆ-ತಾಯಿಗಳಿಗೆ ವಿಧೇಯರಾಗಿರುತ್ತಾರೆ. ಪ್ರತಿಯೊಂದು ಹಂತದಲ್ಲೂ ಪ್ರತಿಭಟಿಸುವ ಮನೋಭಾವವಿದ್ದರೂ ತಂದೆ-ತಾಯಿಗಳಿಗೆ ಗೌರವ ಮರ್ಯಾದೆಗಳನ್ನು ನೀಡುತ್ತಾರೆ.

ಸಂಯೋಜನೆಗೆ ಹೆಚ್ಚು ಸಮರ್ಪಕವಾದ ನಿದರ್ಶನವನ್ನು ನಾವು ನೀಡಬಹುದು. ಭಾರತೀಯ ಕುಟುಂಬಗಳಲ್ಲಿ ಹೊಸದಾಗಿ ವಿವಾಹವಾಗಿ ಬಂದ ಮಹಿಳೆ ತನಗೆ ಗೊತ್ತಿಲ್ಲದ ಅಪರಿಚಿತರ ಜೊತೆ ಹೊಸ ಪರಿಸರದಲ್ಲಿ ಹೊಂದಿಕೊಂಡು ಜೀವನ ನಡೆಸಬೇಕಾಗುತ್ತದೆ. ಇದು ಸ್ವಾಭಾವಿಕವೆ. ಏಕೆಂದರೆ ಹೊಸ ಪರಿಸರದಲ್ಲಿನ ಜನರೆಲ್ಲರು ಮದುವಣಗಿತ್ತಿಯ ಕಡೆಗೆ ಗಮನವಿಟ್ಟಾಗ ಒಂದು ತರಹದ ಮುಜುಗರವನ್ನು ಅನುಭವಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಅನ್ಯ ಮಾರ್ಗವಿಲ್ಲದೆ ಅವರ ಜೊತೆ ಹೊಂದಿಕೊಂಡು ಬಾಳ್ವೆ ನಡೆಸಬೇಕಾಗುತ್ತದೆ. ಸಂಯೋಜನೆಯು ಸಾಮರಸ್ಯದ ಜೀವನ ಕಲೆ. ಎಲ್ಲಾ ಪ್ರಾಣಿಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಸಂಯೋಜನೆಯನ್ನು ಮಾನವನು ಹೊಂದಿರುತ್ತಾನೆ. ಮಾನವ ಜೀವನದ ಎಲ್ಲಾ ರಂಗಗಳಲ್ಲೂ ಸಂಯೋಜನಾ ಪ್ರಕ್ರಿಯೆಗಳನ್ನು ನಾವು ಕಾಣಬಹುದು. ಇದು ಒಂದು ಬಗೆಯ ಮಾನಸಿಕ ಮತ್ತು ಸಾಮಾಜಿಕ ಒಡಂಬಡಿಕೆಯ ಸ್ಥಿತಿ. ಪ್ರತಿಯೊಬ್ಬ ವ್ಯಕ್ತಿಯು ಒಳ್ಳೆಯ ಅಥವಾ ಕೆಟ್ಟ ಪರಿಸರದಲ್ಲಿ ಜನ್ಮ ತಾಳುತ್ತಾನೆ. ಹಾಗಾಗಿ ವ್ಯಕ್ತಿಯು ಈ ಪರಿಸರಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ಇಲ್ಲದೆ ಹೋದರೆ ಬದುಕುವ ಹಕ್ಕು ಕಳೆದುಕೊಳ್ಳಬೇಕಾಗುತ್ತದೆ. ವ್ಯಕ್ತಿ ಯಾವುದೇ ತೆರನಾದ ಶಕ್ತಿ ಸಾಮರ್ಥ್ಯವನ್ನು ಹೊಂದಿದಾಗ್ಯೂ ಎಲ್ಲಾ ಸನ್ನಿವೇಶಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಪರಿಸ್ಥಿತಿ ಮತ್ತು ಬೇರೆಯವರ ಒತ್ತಾಯಕ್ಕೆ ಮಣಿದು ತಾನೆ ಬದಲಾವಣೆ ಹೊಂದುವುದರ ಮೂಲಕ ಪರಿಸ್ಥಿತಿಗೆ ಹೊಂದುಕೊಳ್ಳಲೆ ಬೇಕಾಗುತ್ತದೆ. ಮಾನವ ಘರ್ಷಣೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಆದರೆ ಅದನ್ನು ಮುಂದೂಡಬಹುದು. ಈ ರೀತಿ ಮುಂದೂಡುವುದರ ಮೂಲಕ ಜೀವನವನ್ನು ಮುಂದುವರಿಸಿಕೊಂಡು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಬಹುದು. ಸಂಯೋಜನೆಯು, ಸಂಕ್ಷಿಪ್ತದಲ್ಲಿ ಹೇಳುವುದಾದರೆ, ಒಡಂಬಡಿಕೆಗೆ ಬರಲಾರದ ಸನ್ನಿವೇಶಗಳಿಂದ ಘರ್ಷಣೆಯನ್ನು ತಡೆಯುವುದು ಮತ್ತು ಮುಂದೂಡುವುದನ್ನು ಒಳಗೊಂಡಿರುತ್ತದೆ. ಈ ಪ್ರಕ್ರಿಯೆಯಲ್ಲಿ ಪೂರ್ಣವಾದ ಅನುವರ್ತನೆಯಾಗಲಿ ಅಥವ ಘರ್ಷಣೆಯನ್ನಾಗಲಿ ಕಾಣುವುದಿಲ್ಲ. ಪರಸ್ಪರ ವಿರೋಧ ದಿಕ್ಕಿನಲ್ಲಿರುವ ಪ್ರತಿರೋಧ ಶಕ್ತಿಗಳು ಸಮತೋಲನ ಕಾಪಾಡಿಕೊಳ್ಳುವುದಕ್ಕಾಗಿ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತವೆ. ಈ ರೀತಿಯಲ್ಲಿ ಸಂಯೋಜನೆಯು ಸಾಮಾಜಿಕ ವ್ಯವಸ್ಥೆಯ ಆಧಾರ ಸ್ತಂಭವಾಗಿದೆ. ಇದರ ಗೈರು ಹಾಜರಿಯಲ್ಲಿ ಸಾಮಾಜಿಕ ಸಮತೋಲನವನ್ನು ಕಾಪಾಡಿಕೊಳ್ಳುವುದು ಕಷ್ಟವಾಗುತ್ತದೆ.

ಪಾರ್ಕ್ ಮತ್ತು ಬರ್ಗೆಸ್‌ರವರು ಎರಡು ಮುಖ್ಯವಾದ ಸಂಯೋಜನೆಗಳನ್ನು ಗುರುತಿಸಿದ್ದಾರೆ. ಹೊಸ ವಾತಾವರಣದ ಸನ್ನಿವೇಶಗಳಿಗೆ ಹೊಂದಿಕೊಳ್ಳುವುದು. ಇದು ವ್ಯಕ್ತಿ ಹೊಸ ವಾತಾವರಣ, ಹೊಸ ಭೂಪ್ರದೇಶದ ಸನ್ನಿವೇಶಗಳಿಗೆ ಹೊಂದಿಕೊಳ್ಳುವುದನ್ನು ಒಳಗೊಂಡಿರುತ್ತದೆ. ಇದನ್ನೇ ವಾಯುಗುಣಕ್ಕೆ ಒಗ್ಗಿಕೊಳ್ಳುವಿಕೆ ಎನ್ನಲಾಗುತ್ತದೆ. ಎರಡನೆಯದು ಹೊಸ ಸಾಮಾಜಿಕ ಸನ್ನಿವೇಶಗಳಿಗೆ

ಹೊಂದಿಕೊಳ್ಳುವುದನ್ನು ಒಳಗೊಂಡಿರುತ್ತದೆ. ಇದು ಲೋಕ ರೂಢಿಗಳು ನೈತಿಕ ನಿಯಮಗಳು ಮತ್ತು ಸಂಸ್ಥೆಗಳನ್ನು ಒಳಗೊಂಡಿದ್ದು ಇವುಗಳಿಗೆ ವ್ಯಕ್ತಿ ಹೊಂದಿಕೊಳ್ಳುವ ವ್ಯವಸ್ಥೆಯನ್ನು ಸ್ವಾಭಾವೀಕರಣ ಎಂದು ಹೇಳಲಾಗುತ್ತದೆ. ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವ ಸಂದರ್ಭದಲ್ಲಿ ವ್ಯಕ್ತಿ ಹೆಚ್ಚು ಕಡಿಮೆ ಶಾರೀರಿಕವಾಗಿ ಬದಲಾಗುತ್ತಾನೆ. ಆದರೆ ಸ್ವಾಭಾವಿಕೀಕರಣದಲ್ಲಿ ಆತನು ಧೋರಣೆ ಮತ್ತು ವರ್ತನೆಯಲ್ಲಿಯೂ ಬದಲಾಗಬೇಕಾಗ್ತುದೆ. ಈ ಬದಲಾವಣೆಯಲ್ಲಿ ಮೂಲಭೂತವಾಗಿ ಮಾನಸಿಕ ಮಾರ್ಪಾಡುಗಳಿರುತ್ತವೆ. [Robert. E. Park and Ernest. W.Burgess : Introduction to the science of sociology Chicago, Uni.press 1936].

### 3.5.1 ಸಂಯೋಜನೆಯ ವಿಧಾನಗಳು

ಘರ್ಷಣೆಯಲ್ಲಿ ತೊಡಗಿರುವ ಗುಂಪುಗಳ ನಡುವಣ ವೈರತ್ವವು ತಾತ್ಕಾಲಿಕವಾಗಿ ನಿರ್ಬಂಧಿಸಲ್ಪಟ್ಟಿರುವುದನ್ನೇ ಸಂಯೋಜನೆ ಎಂಬುದಾಗಿ ಪಾರ್ಕ್ ಮತ್ತು ಬರ್ಗೆಸ್‌ರವರು ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೋಸ್ಕರವೆ ಸಮ್ನರ್‌ರವರು ಸಂಯೋಜನೆಯನ್ನು ಸ್ನೇಹರಹಿತ ಸಹಕಾರವೆಂದು ಪರಿಗಣಿಸಿದ್ದಾರೆ. ಸಂಯೋಜನೆ ಅಥವಾ ಘರ್ಷಣೆಗಳ ನಿರ್ಣಯವು ಹಲವಾರು ವಿಧದಲ್ಲಿ ಕಂಡು ಬರುವುದು. ಅಂತೆಯೇ ಈ ಸಂಯೋಜನೆಯು ವಿವಿಧ ರೂಪದಲ್ಲಿರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳು ಯಾವುವು ಎಂದರೆ:

- ***ಬಲ ಪ್ರಯೋಗಕ್ಕೆ ಮಣಿಯುವುದು***

ದೈಹಿಕ ಶಕ್ತಿ ಅಥವಾ ಇನ್ನಾವುದೆ ಶಕ್ತಿಯ ಒತ್ತಡಕ್ಕೆ ವ್ಯಕ್ತಿಗಳು ಮತ್ತು ಗುಂಪುಗಳು ಮಣಿದು ಸಂಯೋಜನೆಗೆ ದಾರಿ ಮಾಡಿಕೊಡುತ್ತಾರೆ. ಉದಾಹರಣೆಗೆ ಯುದ್ಧದಲ್ಲಿ ತೊಡಗಿರುವ ಎರಡು ಗುಂಪುಗಳಲ್ಲಿ ಒಂದು ಗುಂಪು ಬಲಿಷ್ಠವಾಗಿದ್ದು ಮತ್ತೊಂದು ಗುಂಪು ಬಲಹೀನವಾಗಿದ್ದರೆ, ಬಲಿಷ್ಠವಾಗಿದ್ದ ಗುಂಪಿನ ಒತ್ತಡಕ್ಕೆ ಬಲಹೀನ ಗುಂಪು ಶರಣಾಗುತ್ತದೆ. ಅದೇ ರೀತಿಯಲ್ಲಿ ಅಪರಾಧಿಯು ಪೋಲೀಸ್‌ಗೆ ವಿಧೇಯವಾಗಿರಬೇಕು. ಏಕೆಂದರೆ ಅಪರಾಧಿಯು ಅಧಿಕಾರಿಯಿಂದ ನೋವನ್ನು ಅನುಭವಿಸಲು ಅಸಮರ್ಥನಾಗಿರುತ್ತಾನೆ.

- ***ರಾಜಿ***

ಎರಡು ಗುಂಪುಗಳು ಸಮಾನವಾಗಿ ಬಲಿಷ್ಠವಾಗಿದ್ದು ಯಾವುದೇ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಮೇಲುಗೈ ಸಾಧಿಸಲು ಅಸಮರ್ಥವಾಗಿದ್ದಾಗ ಅವು ರಾಜಿಯ ಮೂಲಕ ಒಂದು ಬಗೆಯ ಒಪ್ಪಂದಕ್ಕೆ ಬರುತ್ತವೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಸಮಾನ ಶಕ್ತಿಯನ್ನು ಹೊಂದಿರುವ ವ್ಯಕ್ತಿಗಳು ಮತ್ತು ಗುಂಪುಗಳು ತಮ್ಮ ಕೆಲವು ಹಿತಾಸಕ್ತಿಗಳನ್ನು ಬಿಟ್ಟುಕೊಡುವುದರ ಮೂಲಕ ಘರ್ಷಣೆಯನ್ನು ತಡೆಗಟ್ಟಿ ಶಾಂತಿ ನೆಲಸಲು ಕಾರಣರಾಗುತ್ತಾರೆ. ಈ ವಿಧವಾದ ರಾಜಿ ಒಪ್ಪಂದದ ಹಲವಾರು ನಿದರ್ಶನಗಳನ್ನು ಇತಿಹಾಸದಲ್ಲಿ ಕಾಣಬಹುದು.

- **ಮಧ್ಯಸ್ಥಿಕೆ**

ಮಧ್ಯಸ್ಥಿಕೆಯಿಂದ ಸಂಯೋಜನೆ ಸಾಧಿಸಬಹುದು. ಎರಡು ಪ್ರತಿರೋಧ ಶಕ್ತಿಗಳ ಸಂಘರ್ಷವನ್ನು ಕೊನೆಗೊಳಿಸಲು ಮೂರನೆ ಪಕ್ಷದ ಪ್ರಯತ್ನದಿಂದ ಸಾಧ್ಯವಾಗುತ್ತದೆ. ಕಾರ್ಮಿಕ ಮತ್ತು ಆಡಳಿತ ವರ್ಗದ ನಡುವಣ ಘರ್ಷಣೆಯು ಒಬ್ಬ ಮಧ್ಯಸ್ಥಗಾರನ ಪ್ರವೇಶದಿಂದ ಪರಿಹಾರ

ಕಾಣುತ್ತದೆ. ಕುಟುಂಬದಲ್ಲಿ ಉಂಟಾದ ಘರ್ಷಣೆಯು ಸಹ ಮೂರನೆಯವರ ಮೂಲಕ ತೀರ್ಮಾನಗೊಳ್ಳುತ್ತದೆ. ಈ ಮಧ್ಯಸ್ಥಗಾರ ಅಥವ ಮೂರನೆಯವರ ಬಗೆಗೆ ಸಂಘರ್ಷದಲ್ಲಿರುವ ಎರಡು ಪಕ್ಷಗಳಿಗೂ ಸಂಪೂರ್ಣ ವಿಶ್ವಾಸವಿರಬೇಕು. ಮಧ್ಯಸ್ಥಿಕೆ ಮತ್ತು ರಾಜಿ ಸಂಧಾನದ ನಡುವೆ ಸ್ವಲ್ಪ ವ್ಯತ್ಯಾಸವನ್ನು ಕಾಣಬಹುದು. ಮಧ್ಯಸ್ತಿಕೆಯಲ್ಲಿ ಮೂರನೆಯ ಪಕ್ಷ ನೀಡುವ ತೀರ್ಮಾನಗಳಿಗೆ ಎರಡು ಪಕ್ಷಗಳು ಬದ್ಧವಾಗಿರಬೇಕು. ಆದರೆ ರಾಜಿ ಸಂಧಾನದಲ್ಲಿ ಸಲಹೆ ಮತ್ತು ತೀರ್ಮಾನಗಳನ್ನು ಅಂಗೀಕರಿಸುವ ಸ್ವಾತಂತ್ರ್ಯ ಎರಡು ಪಕ್ಷಗಳಿಗೂ ಬಿಟ್ಟದ್ದಾಗಿರುತ್ತದೆ.

- ***ಉದಾತ್ತತೆ***

ಈ ವಿಧಾನದಲ್ಲಿ ಪರಸ್ಪರ ಘರ್ಷಣೆಯಲ್ಲಿ ತೊಡಗಿರುವ ಎರಡು ಗುಂಪುಗಳು ತಮ್ಮಲ್ಲಿರುವ ಪ್ರವೃತ್ತಿಗಳು, ಧೋರಣೆಗಳು ಆಕ್ರಮಣ ಪ್ರವೃತ್ತಿ ಮತ್ತು ಘರ್ಷಣೆಗಳನ್ನು ಬಿಟ್ಟುಕೊಡುವುದರ ಮೂಲಕ ಯಾರಿಗೂ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆ. ಅಲ್ಲದೆ ಘರ್ಷಣೆಯನ್ನು ತಡೆಗಟ್ಟುವುದರ ಮೂಲಕ ಸಂಯೋಜನೆಗೆ ದಾರಿಮಾಡಿಕೊಡಲಾಗುತ್ತದೆ. ಬೇರೆ ಬೇರೆ ಧಾರ್ಮಿಕ ಗುಂಪುಗಳ ನಡೆವೆ ಕಂಡು ಬರುವ ಸಹಿಷ್ಣುತೆ ಹಾಗೂ ಭಿನ್ನ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ಒಳಗೊಂಡ ರಾಜ್ಯಗಳ ಅಸ್ತಿತ್ವ ಇದಕ್ಕೆ ನಿದರ್ಶನ.

- ***ತರ್ಕಬದ್ಧತೆ***

ಇದು ಒಂದು ಬಗೆಯ ಸಂಯೋಜನೆ. ಒಬ್ಬ ವ್ಯಕ್ತಿಯು ತನ್ನಲ್ಲಿರುವ ವಾಸ್ತವ ದೋಷವನ್ನು ಒಪ್ಪಿಕೊಳ್ಳದೆ ತನ್ನ ವರ್ತನೆಗೆ ತೋರಿಕೆಯ ನೆಪಗಳನ್ನು ಅಥವ ವಿವರಣೆಗಳನ್ನು ನೀಡುವುದೆ ತಾರ್ಕೀಕರಣ. ವ್ಯಕ್ತಿ ತಾನು ತಪ್ಪು ಮಾಡಿದ್ದಾಗ್ಯೂ ತನ್ನನ್ನು ನಿಂದಿಸಿಕೊಳ್ಳದೆ ತಪ್ಪನ್ನು ಬೇರೆಯವರ ಮೇಲೆ ಹೇರುತ್ತಾನೆ. ತನ್ನ ಅದಕ್ಷತೆ ಕಾರಣದಿಂದ ವಿಫಲನಾದರೂ ಈ ವಿಫಲತೆಗೆ ತನ್ನ ಬಗೆಗೆ ಇತರರು ತೋರುವ ತಾರತಮ್ಯವೆ ಕಾರಣವೆಂದು ಆರೋಪಿಸುತ್ತಾನೆ. ಉದಾಹರಣೆಗೆ ಪರೀಕ್ಷೆಯಲ್ಲಿ ಅನುತ್ತೀರ್ಣನಾದ ವಿದ್ಯಾರ್ಥಿಯು ಅನುತ್ತೀರ್ಣನಾದುದಕ್ಕೆ ತನ್ನ ಪರಿಶ್ರಮದ ಕೊರತೆ ಕಾರಣ ಎಂಬುದನ್ನು ಒಪ್ಪಿಕೊಳ್ಳದೆ ಪರೀಕ್ಷಕರ ಮೌಲ್ಯಮಾಪನ ದೋಷ ಕಾರಣ ಎಂದು ಹೇಳುವುದು. ಇದು ಕೇವಲ ವ್ಯಕ್ತಿಗಳಿಗೆ ಮಾತ್ರವಲ್ಲದೆ ಗುಂಪುಗಳು ಸಹ ಕಲ್ಪನೆಯ ಆಧಾರದ ಮೇಲೆ ತಮ್ಮ ಕೃತ್ಯಗಳನ್ನು ಸಮರ್ಥಿಸುವುದನ್ನು ಕಾಣಬಹುದು.

ಸಂಯೋಜನೆಯು ಇಂದಿನ ಸಮಾಜದಲ್ಲಿ ಬಹಳ ಪ್ರಾಮುಖ್ಯವನ್ನು ಪಡೆದುಕೊಂಡಿದೆ. ಹಲವಾರು ಸಂಘಟನೆಗಳು ಮತ್ತು ಸಾಂಸ್ಕೃತಿಕ ಸಂಬಂಧಗಳು ; ಹಲವಾರು ಜಾತಿ, ಜನಾಂಗ, ಧರ್ಮ ಮತ್ತು ರಾಷ್ಟ್ರಗಳ ನಡುವಿನ ಪಾರಸ್ಪರಿಕ ವಿನಿಮಯಕ್ಕಾಗಿ ಸಂಘಟನೆಗಳು ; ಕಾನೂನು ನ್ಯಾಯಾಲಯಗಳು, ಪೊಲೀಸ್, ರಾಜ್ಯ ಸಂಘಟನಾ ಸಮಿತಿಗಳು, ಸಾಮಾಜಿಕ ಕಾರ್ಯಕರ್ತರು, ಮನೋಚಿಕಿತ್ಸಕರು ಇತ್ಯಾದಿ. ಸಂಯೋಜನಾ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ/ವೆ. ಸಂಯೋಜನೆಯು ಘರ್ಷಣೆಗಳನ್ನು ತಡೆದು ವ್ಯಕ್ತಿಗಳಲ್ಲಿ ಮತ್ತು ಗುಂಪುಗಳಲ್ಲಿ ಸಹಕಾರ ನೆಲಸುವುದಕ್ಕೆ ಸಾಮರ್ಥ್ಯ ನೀಡುತ್ತದೆ. ಆದಾಗ್ಯೂ ಇದು ವ್ಯಕ್ತಿಗಳು ಬದಲಾದ ಸನ್ನಿವೇಶಗಳಿಗೆ ಹೊಂದಿಕೊಳ್ಳಲು ಸಾಧನವಾಗುತ್ತದೆ. ಸಮಾಜವು ಮೂಲಭೂತವಾಗಿ ಸಂಯೋಜನೆಯ ಫಲಿತಾಂಶ.

## 3.6 : ಸಮೀಕರಣ

**ಅರ್ಥ:** ಸಮೀಕರಣವು ಸಾಮಾಜಿಕ ಒಡನಾಟದ ಇನ್ನೊಂದು ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ವ್ಯಕ್ತಿ ಅಥವಾ ಗುಂಪು ನಿಧಾನವಾಗಿ ಮತ್ತು ಕ್ರಮೇಣವಾಗಿ ಹೊಸ ಸನ್ನಿವೇಶಗಳನ್ನು ತನ್ನೆಡೆಗೆ

ತೆಗೆದುಕೊಳ್ಳಲು ಪ್ರಾರಂಭಿಸುತ್ತಾನೆ. ಇದು ಸಾಮಾಜಿಕ ಮನೋವೃತ್ತಿಗಳಲ್ಲಿ ಮಾರ್ಪಾಡುಗಳನ್ನು ತರುತ್ತದೆ. ಉದಾಹರಣೆಗೆ ಹಿಂದುಗಳು ವಿಷಯ-ವಿಚಾರಗಳನ್ನು ಮುಸ್ಲಿಂರಿಂದ ಕಲಿತುಕೊಂಡರೆ ಮುಸ್ಲಿಂರು ಸಹ ಹಿಂದೂಗಳಿಂದ ಹಲವಾರು ವಿಷಯ-ವಿಚಾರಗಳನ್ನು ಕಲಿತರು. ಹಲವಾರು ಸಂಸ್ಕೃತಿಗಳ ಸಮೀಕರಣಕ್ಕೆ ಅಮೆರಿಕ ಸಮಾಜವು ನಿದರ್ಶನವಾಗಿದೆ. ಈ ಪ್ರಕ್ರಿಯೆಯು ಸಾರಿಗೆ-ಸಂಪರ್ಕ ವ್ಯವಸ್ಥೆಯ ಬೆಳವಣಿಗೆಯ ನಂತರ ವ್ಯಾಪಕವಾಯಿತು. ಭಿನ್ನಸಂಸ್ಕೃತಿಯನ್ನು ಅನುಸರಿಸುವ ಜನ ಸಮುದಾಯ ಒಂದು ಕಡೆ ಸೇರಿದಾಗ ಅಥವಾ ಒಂದಕ್ಕೊಂದು ಸಂಪರ್ಕವೇರ್ಪಟ್ಟಾಗ ಮುಖ್ಯವಾಗಿ ಅವರಲ್ಲಿ ಎದ್ದು ಕಾಣುತ್ತಿದ್ದ ಪರಸ್ಪರ ಘರ್ಷಣೆಯ ಭಾವನೆಗಳು ಕ್ರಮೇಣ ಕಡಿಮೆಯಾಗಿ ಸಹಿಷ್ಣುತಾ ದೃಷ್ಟಿಯನ್ನು ಬೆಳೆಸಿಕೊಳ್ಳಲು ಪ್ರಾರಂಭಿಸುತ್ತವೆ. ಇದನ್ನೇ ನಾವು ಸಮೀಕರಣ ಪ್ರಕ್ರಿಯೆ ಎನ್ನುವುದು. ವ್ಯಕ್ತಿಗಳು ಮತ್ತು ಗುಂಪುಗಳು ಬೇರೊಂದು ಗುಂಪಿನ ಜೊತೆ ಸಂಪರ್ಕ ಬೆಳೆಸಿದಾಗ ಅವುಗಳ ಮನೋವೃತ್ತಿಗಳು ಮತ್ತು ಮೌಲ್ಯಗಳು, ನಡವಳಿಕೆ ಮತ್ತು ಚಿಂತನಾ ಮಾದರಿಗಳು ಒಟ್ಟಿನಲ್ಲಿ ಜೀವನ ವಿಧಾನಗಳನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯೆ ಸಮೀಕರಣ, ಪಾರ್ಕ್ ಮತ್ತು ಬರ್ಗೆಸ್ ಪ್ರಕಾರ ಸ್ವಾಂಗೀಕರಣ ಅಥವಾ ಸಮೀಕರಣ ಎನ್ನುವುದು ಒಳಹೋಗುವಿಕೆ ಮತ್ತು ಮಿಳಿತದ ಪ್ರಕ್ರಿಯೆ ಆಗಿದೆ. ಇಲ್ಲಿ ನಿರ್ದಿಷ್ಟ ವ್ಯಕ್ತಿಗಳು ಮತ್ತು ಗುಂಪು ಇತರ ವ್ಯಕ್ತಿ ಮತ್ತು ಗುಂಪುಗಳ ನೆನಪುಗಳು, ಭಾವನೆಗಳು ಮತ್ತು ಧೋರಣೆಗಳನ್ನು ಪಡೆದುಕೊಳ್ಳುತ್ತಾರೆ. ಜೊತೆಗೆ ಆ ವ್ಯಕ್ತಿ ಮತ್ತು ಗುಂಪುಗಳ ಅನುಭವಗಳು ಇತಿಹಾಸದಲ್ಲಿ ಪಾಲುವಹಿಸಿ ಒಂದು ಸಾಂಸ್ಕೃತಿಕ ಜೀವನದಲ್ಲಿ ಅವರೊಡನೆಯೇ ಒಂದಾಗಿ ಬಿಡುತ್ತಾರೆ. [Robert. E. Park and Emest. W.Burgess, Introduction to the science of Sociology; Chicago ; Uni press; 1936]. ಸಮೀಕರಣ ಪ್ರಕ್ರಿಯೆಯನ್ನು ವ್ಯಕ್ತಿ ಮತ್ತು ಸಮಾಜದಲ್ಲಿ, ಸಾಮಾಜಿಕ ಸಂಸ್ಥೆಗಳಲ್ಲಿ, ಸಂಘಗಳಲ್ಲಿ ಮತ್ತು ಸಮುದಾಯಗಳಲ್ಲಿ ಕಾಣಬಹುದು. ಇದೊಂದು ಸಾಮಾಜಿಕ ಮತ್ತು ಮಾನಸಿಕ ಪ್ರಕ್ರಿಯೆಯಾಗಿದ್ದು ಸಾಂಸ್ಕೃತಿಕ ಏಕತೆಗೆ ದಾರಿ ಮಾಡಿಕೊಡುತ್ತದೆ. ಇದು ಯಾವುದೇ ಒಂದು ಕ್ಷೇತ್ರಕ್ಕೆ ಮೀಸಲಾಗಿಲ್ಲ. ಇದನ್ನು ಎಲ್ಲಾ ಕ್ಷೇತ್ರದಲ್ಲೂ ಕಾಣಬಹುದು. ಸಾಂಸ್ಕೃತಿಕ ಸಂಮಿಲನವು ಸಮೀಕರಣದ ಮೊದಲ ಹಂತ. ಒಂದು ಸಾಂಸ್ಕೃತಿಕ ಗುಂಪು ಇನ್ನೊಂದು ಸಾಂಸ್ಕೃತಿಕ ಗುಂಪಿನ ಸಂಪರ್ಕ ಹೊಂದಿ ಅದರಿಂದ ಕೆಲವು ಸಾಂಸ್ಕೃತಿಕ ಅಂಶಗಳನ್ನು ತೆಗೆದುಕೊಂಡು ಅದನ್ನು ತನ್ನ ಸಂಸ್ಕೃತಿಯ ಜೊತೆ ಸೇರಿಸಿಕೊಳ್ಳುವುದರ ಮೂಲಕ ಸಂಸ್ಕೃತಿಯನ್ನು ಮಾರ್ಪಡಿಸಿಕೊಳ್ಳುತ್ತದೆ. ಗುಂಪುಗಳಿಗೆ ಪರಸ್ಪರ ಸಂಪರ್ಕವೇರ್ಪಟ್ಟರೆ ಒಂದು ಗುಂಪು ಇನ್ನೊಂದರ ಮೇಲೆ ಪ್ರಭಾವ ಬೀರುವುದರ ಜೊತೆಗೆ ತಾನು ಸಹ ಇನ್ನೊಂದರಿಂದ ಪ್ರಭಾವಿತವಾಗುವುದು ಸಹಜ. ಸಾಂಸ್ಕೃತಿಕವಾಗಿ ದುರ್ಬಲವಾಗಿರುವ ಗುಂಪು ಸಾಂಸ್ಕೃತಿಕವಾಗಿ ದುರ್ಬಲವಾಗಿರುವ ಗುಂಪಿನಿಂದ ಹೆಚ್ಚಿನದನ್ನು ಪಡೆದುಕೊಳ್ಳುತ್ತದೆ. ಇದಕ್ಕೆ ವಿರುದ್ಧವಾಗಿ ಸಾಂಸ್ಕೃತಿಕವಾಗಿ ದುರ್ಬಲವಾಗಿರುವ ಗುಂಪಿನಿಂದ ಸಾಂಸ್ಕೃತಿಕವಾಗಿ ಬಲಿಷ್ಠವಾಗಿರುವ ಗುಂಪು ಪಡೆಯುವ ಕಾಣಿಕೆ ಗೌಣ. ಬಿಳಿಯರ ಜೊತೆ ಸಂಪರ್ಕ ಏರ್ಪಟ್ಟಾಗ ಅಮೆರಿಕನ್ ಇಂಡಿಯನ್ನರು ಅವರ ಸಾಂಸ್ಕೃತಿಕ ಅಂಶಗಳನ್ನು ಹೆಚ್ಚಾಗಿ ಅಳವಡಿಸಿಕೊಂಡರೆ ಬಿಳಿಯರು ಕೆಲವೆ ಕೆಲವು ಅಮೆರಿಕನ್ ಇಂಡಿಯನ್‌ನ ಸಾಂಸ್ಕೃತಿಕ ಅಂಶಗಳನ್ನು ಅಳವಡಿಸಿಕೊಂಡಿರುವುದು ಇದಕ್ಕೆ ನಿದರ್ಶನ.

### 3.6.1 ಸಂಯೋಜನೆ ಮತ್ತು ಸಮೀಕರಣದ ನಡುವಿನ ವ್ಯತ್ಯಾಸಗಳು

ಸಮೀಕರಣವು ಸ್ವತಂತ್ರವಾದ, ತಾನೇ ತಾನಾದ ಹಾಗೂ ಸ್ವಾಭಾವಿಕವಾದ ಪ್ರಕ್ರಿಯೆ. ಈ ಪ್ರಕ್ರಿಯೆಯು ವ್ಯಕ್ತಿಗಳ ಮತ್ತು ಗುಂಪುಗಳ ನಡುವೆ ಇರುವಂತಹ ಭಿನ್ನಾಭಿಪ್ರಾಯಗಳನ್ನು ಹೊಂದಾಣಿಕೆಯನ್ನು ತರುವ ಗುರಿಯನ್ನು ಹೊಂದಿರುತ್ತದೆ. ಸಮೀಕರಣ ಪ್ರಕ್ರಿಯೆಯು ಸಂಯೋಜನೆಯ ಪ್ರಕಾರವಾಗಿದ್ದು ವಿವಿಧ ಗುಂಪುಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸುವ ಶಾಶ್ವತ ವಿಧಾನವಾಗಿದೆ. ಆದರೆ ಸಂಯೋಜನೆಯಲ್ಲಿ ಗುಂಪುಗಳು ಹೊಂದಿರುವ ಭಿನ್ನಾಭಿಪ್ರಾಯಗಳು ಶಾಶ್ವತವಾಗಿ ಪರಿಹಾರ ಕಾಣುವುದಿಲ್ಲ.

ಸಮೀಕರಣವು ನಿಧಾನದ ಮತ್ತು ಕ್ರಮೇಣವಾಗಿ ಪರಿಸ್ಥಿತಿಗೆ ಹೊಂದಿಕೊಳ್ಳುವ ಪ್ರಕ್ರಿಯೆಯಾಗಿದ್ದರೆ ಸಂಯೋಜನೆಯ ಶೀಘ್ರ ಹಾಗೂ ಕೆಲವು ವೇಳೆ ತೀವ್ರವಾದ ಪ್ರಕಿ,ಯೆಯಾಗಿದೆ. ಒಂದು ಚಿಕ್ಕ ಗುಂಪು ದೊಡ್ಡ ಗುಂಪಿನ ನಡುವೆ ಇದ್ದಾಗ ಅದು ಕ್ರಮೇಣವಾಗಿ ಸಮೀಕರಣಗೊಳ್ಳುತ್ತದೆ. ಈ ಪ್ರಕ್ರಿಯೆಯು ನಿಧಾನವಾದುದಾಗಿದೆ. ಸಂಯೋಜನೆಯು ಶೀಘ್ರವಾಗಿ ಉಂಟಾಗುವುದು ಮಾತ್ರವಲ್ಲದೆ ಮಹತ್ತರ ಬದಲಾವಣೆಗಳನ್ನು ತರುವಂತಹುದಾಗಿರುತ್ತದೆ. ಉದಾಹರಣೆಗೆ ಮತಾಂತರ ಇದಕ್ಕೆ ನಿದರ್ಶನವಾಗಿದೆ.

ಸಂಯೋಜನೆ ಪ್ರಕ್ರಿಯೆಯಲ್ಲಿ ವ್ಯಕ್ತಿ ಮತ್ತು ಗುಂಪುಗಳಿಗೆ ಸಾಮಾನ್ಯವಾಗಿ ಪ್ರಕ್ರಿಯೆಯ ಬಗ್ಗೆ ಅರಿವಿರುತ್ತದೆ. ಉದಾಹರಣೆಗೆ ಶಾಂತಿ ಒಪ್ಪಂದದ ಸಂಧಾನ ಅಥವಾ ಆಡಳಿತ ಮತ್ತು ಕಾರ್ಮಿಕರ ವಿವಾದದ ಬಗೆಹರಿಸುವಿಕೆ. ಆದರೆ ಸಮೀಕರಣದಲ್ಲಿ ವ್ಯಕ್ತಿ ಮತ್ತು ಗುಂಪುಗಳಿಗೆ ಯಾವುದೇ ಒಂದು ಸನ್ನಿವೇಶದಲ್ಲಿ ಏನು ಸಂಭವಿಸುತ್ತದೆ ಎಂಬುದರ ಬಗೆಗೆ ಅರಿವಿರುವುದಿಲ್ಲ ಮತ್ತು ಆ ಸನ್ನಿವೇಶದ ಬಗ್ಗೆ ಅರಿವಾಗುವುದರ ಮೊದಲೆ ಬೇರೆಯವರ ಸಂಸ್ಕೃತಿಯನ್ನು ಅಳವಡಿಸಿಕೊಂಡಿರುತ್ತಾನೆ/ವೆ.

### 3.6.2 ಸಮೀಕರಣದ ಉತ್ತೇಜನದ ಅಂಶಗಳು

ಸಮೀಕರಣ ಉಂಟಾಗಲಿಕ್ಕೆ ಕೆಳಗಿನ ಅಂಶಗಳು ಉತ್ತೇಜನಕಾರಿಯಾಗಿವೆ.

- **ಸಹಿಷ್ಣುತೆ**

  ಆಪ್ತ ಮತ್ತು ನಿಟಕ ಸಂಬಂಧಗಳು ಸಮೀಕರಣಕ್ಕೆ ಅವಶ್ಯಕಗಳಾಗಿವೆ. ಸಹಿಷ್ಣುತೆ ಇಲ್ಲದಿದ್ದರೆ ನಿಕಟ ಸಾಮಾಜಿಕ ಸಂಬಂಧಗಳನ್ನು ನೆಲೆಗೊಳಿಸುವುದು ಅಸಾಧ್ಯವಾಗುತ್ತದೆ. ಯಾವ ವ್ಯಕ್ತಿ ಒಂದು ಸಂಸ್ಕೃತಿಯಲ್ಲಿ ನಂಬಿಕೆ ಇರಿಸಿಕೊಂಡಿರುತ್ತಾನೋ ಆ ವ್ಯಕ್ತಿ ಬೇರೊಂದು ಸಂಸ್ಕೃತಿಯನ್ನು ಸಹಿಸಿಕೊಳ್ಳುವಂತಿರಬೇಕು. ಆದುದರಿಂದ ಸಮೀಕರಣದ ಅಭಿವೃದ್ಧಿಗೆ ಸಹಿಷ್ಣುತೆ ಅವಶ್ಯಕವಾಗಿದೆ.

- **ನಿಟಕ ಸಾಮಾಜಿಕ ಸಂಬಂಧಗಳು**

  ಇವು ಸಮೀಕರಣ ಅಭಿವೃದ್ಧಿಗೆ ಕಾರಣವಾಗಿರುತ್ತವೆ.

- **ಸಮ್ಮಿಲನತೆ**

  ಸಮ್ಮಿಲನತೆಯಿಂದಾಯಿಂದಾಗಿಯು ಸಮೀಕರಣ ಸಾಧ್ಯವಾಗಲು ಅನುಕೂಲವಾಗುತ್ತದೆ. ಏಕೆಂದರೆ ಸಮ್ಮಿಲನತೆ ಕಾರಣದಿಂದ ರಕ್ತ ಸಂಬಂಧಗಳು ಉಂಟಾಗುತ್ತವೆ. ರಕ್ತ ಬಾಂಧವ್ಯವು ಬೇರೆಲ್ಲಾ ಸಂಬಂದಗಳಿಗಿಂತ ಹೆಚ್ಚು ನಿಕಟವಾಗಿರುತ್ತದೆ. ಈ ಬಾಂಧವ್ಯಗಳು ಹೆಚ್ಚು ಆತ್ಮೀಯವು ಬಲಿಷ್ಠವು ಆಗಿದ್ದು ತಮ್ಮ ಪ್ರಭಾವವನ್ನು ಇತರರ ಮೇಲೆ ಬೀರುತ್ತವೆ.

- **ಸಾಂಸ್ಕೃತಿಕ ಸಾದೃಶ್ಯ**

  ಅತೀ ಮಹತ್ವದ ಅಂಶಗಳಲ್ಲಿ ಎರಡು ಸಂಸ್ಕೃತಿಗಳು ಒಂದನ್ನೊಂದು ಹೋಲುತ್ತಿದ್ದರೆ ನಿಕಟತೆ ಮತ್ತು ಸಹಿಷ್ಣುತೆ ವ್ಯಕ್ತಿಗಳ ನಡುವೆ ಉತ್ತಮವಾಗಿರುತ್ತದೆ. ಇದು ಸಮೀಕರಣಕ್ಕೆ ದಾರಿ ಮಾಡಿಕೊಡುತ್ತದೆ.

- **ಆರ್ಥಿಕ ಪ್ರಗತಿಗೆ ಸಮಾನ ಅವಕಾಶ**

  ಆರ್ಥಿಕ ಅಸಮಾನತೆಯ ಮತ್ಸರ, ಹಗೆತನ ಮತ್ತು ಘರ್ಷಣೆಗೆ ದಾರಿ ಮಾಡಿಕೊಡುತ್ತದೆ. ಆರ್ಥಿಕ ಪ್ರಗತಿಯನ್ನು ಸಾಧಿಸಲು ತಮ್ಮ ನೆರೆಹೊರೆಯವರಂತೆ ಸಮಾನ ಅವಕಾಶಗಳನ್ನು

ವ್ಯಕ್ತಿಗಳು ಯಾವಾಗ ಪಡೆಯುತ್ತಾರೋ ಆಗ ಸಾಮಾಜಿಕ ನಿಕಟತೆ ಹೆಚ್ಚಿ ಸಮೀಕರಣವು ತೀವ್ರಗೊಳ್ಳುತ್ತದೆ.

### 3.6.3 ಸಮೀಕರಣಕ್ಕೆ ಅಡ್ಡಿಯನ್ನುಂಟುಮಾಡುವ ಅಂಶಗಳು

ಸಮೀಕರಣ ಮತ್ತು ಅದರ ಪ್ರಗತಿಗೆ ಮಾರಕವಾದ ಅಂಶಗಳೆಂದರೆ:

- **ಬಲವಾದ ಮೇಲರಿಮೆ ಮತ್ತು ಕೀಳರಿಮೆ ಭಾವನೆ**

ವ್ಯಕ್ತಿಗಳು ಬಲವಾದ ಮೇಲರಿಮೆ ಅಥವಾ ಕೀಳರಿಮೆಯನ್ನು ಹೊಂದಿದ್ದಾಗ ಅವರು ಹಗೆತನ ಮತ್ತು ಮತ್ಸರವನ್ನು ಬೆಳೆಸಿಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಗಳು ತಮ್ಮ ತಮ್ಮಲ್ಲೆ ಸಂಬಂಧಗಳನ್ನು ಸ್ಥಾಪಿಸಲು ನಿರಾಕರಿಸುತ್ತಾರೆ. ಸ್ವಾಭಾವಿಕವಾಗಿ ಇದು ಸಮೀಕರಣಕ್ಕೆ ಅಡ್ಡಿಯನ್ನುಂಟುಮಾಡುತ್ತದೆ.

- **ಪ್ರತ್ಯೇಕತೆ**

ವ್ಯಕ್ತಿ ಬೇರೆಯವರಿಂದ ಪ್ರತ್ಯೇಕವಾಗಿ ಜೀವನ ನಡೆಸುತ್ತಿರುವಾಗ ಸಾಮಾಜಿಕ ಸಂಪರ್ಕಗಳು ಮತ್ತು ಸಂಬಂಧಗಳು ರೂಪುಗೊಳ್ಳುವುದು ಕಷ್ಟವಾಗುತ್ತದೆ. ಯಾವಾಗ ವ್ಯಕ್ತಿಗಳು ಮತ್ತು ಗುಂಪು ಪ್ರತ್ಯೇಕಗೊಳ್ಳುತ್ತವೆ ಆಗ ಸಮೀಕರಣ ಉಂಟಾಗುವುದು ಕಷ್ಟವಾಗುತ್ತದೆ.

- **ಬಣ್ಣ ಮತ್ತು ಶಾರೀರಕ ಲಕ್ಷಣಗಳಲ್ಲಿ ಭಿನ್ನತೆಗಳು**

ವ್ಯಕ್ತಿಗಳು ತಮ್ಮ ತಮ್ಮಲ್ಲೆ ಬಣ್ಣ ಮತ್ತು ಶಾರೀರಿಕ ಲಕ್ಷಣಗಳ ಆಧಾರದ ಮೇಲೆ ವ್ಯತ್ಯಾಸಗಳನ್ನು ಕಂಡುಕೊಳ್ಳುತ್ತಾರೆ. ಉದಾಹರಣೆಗೆ ಬಿಳಿಯರು ಮತ್ತು ಕಪ್ಪು ಜನರ ನಡುವೆ ವ್ಯತ್ಯಾಸವಿರುವುದು. ಇವರೀರ್ವರ ನಡುವೆ ಸಾಮಾಜಿಕ ಸಂಪರ್ಕ ಕಂಡುಕೊಳ್ಳುವುದು ಅಪರೂಪ. ಭಾರತದಲ್ಲಿ ಜಾತಿ ಪದ್ಧತಿಯು ಸಮೀಕರಣದ ಬೆಳವಣಿಗೆಗೆ ತಡೆಹಾಕುತ್ತದೆ.

- **ಸಾಂಸ್ಕೃತಿಕ ಭಿನ್ನತೆ**

ಸಾಂಸ್ಕೃತಿಕ ಸಾಮ್ಯತೆ ಹೇಗೆ ಸಮೀಕರಣದ ಅಭಿವೃದ್ಧಿಗೆ ಸಹಾಯ ಮಾಡುತ್ತದೆಯೋ ಹಾಗೆಯೇ ಸಾಂಸ್ಕೃತಿಕ ಭಿನ್ನತೆಯು ಸಮೀಕರಣದ ಬೆಳವಣಿಗೆಗೆ ಅಡ್ಡಿಯನ್ನುಂಟುಮಾಡುತ್ತದೆ.

- **ಪ್ರಭುತ್ವ ಮತ್ತು ಅಧೀನತ್ವ**

ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಪ್ರಭುತ್ವ ಸ್ಥಾಪಿಸಿದಾಗ, ಪ್ರಭುತ್ವ ಸ್ಥಾಪಿಸಿದ ಗುಂಪು ಇನ್ನೊಂದು ಗುಂಪಿಗೆ ಹೋಲಿಸಿಕೊಂಡು ತಾನು ಮೇಲು ಎಂದು ತಿಳಿಯುತ್ತದೆ. ಆದುದರಿಂದ ಆ ಗುಂಪು ಇನ್ನೊಂದು ಗುಂಪಿನ ಜೊತೆ ಸರಿ ಸಮಾನವಾಗಿ ಸಾಮಾಜಿಕ ಸಂಬಂಧಗಳನ್ನು ಬೆಳೆಸಲು ಇಷ್ಟಪಡುವುದಿಲ್ಲ.

- **ಸಾಮಾಜಿಕ ಕಿರುಕುಳ**

ಸಾಮಾಜಿಕ ಕಿರುಕುಳ, ಶೋಷಣೆ ಮತ್ತು ಅನ್ಯಾಯಗಳು ಶೋಷಣೆ ಮಾಡುವವರು ಮತ್ತು ಶೋಷಣೆಗೆ ಒಳಗಾಗುವವರ ನಡುವಣ ಘರ್ಷಣೆಗೆ ದಾರಿ ಮಾಡುತ್ತವೆ. ಈ ರೀತಿ ಉಂಟಾಗುವ ಘರ್ಷಣೆಗೆ ಯಾವುದೇ ತೆರನಾದ ಸಮರ್ಥನೆ ಇದ್ದರು ಸಹ ಇದು ಸಾಮಾಜಿಕ

ನಿಕಟತೆಯ ಬೆಳವಣಿಗೆಯನ್ನು ತಡೆಯುತ್ತದೆ. ಇದರ ಪರಿಣಾಮ ಸಮೀಕರಣದ ಪ್ರಕ್ರಿಯೆಯ ಮೇಲೆ ಉಂಟಾಗುತ್ತದೆ.

- **ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ - 2**

1. ಸಮೀಕರಣ ಎಂದರೇನು?

- **ತಪ್ಪು ಅಥವಾ ಸರಿ ಗುರುತಿಸಿ.**

2. ಸಂಯೋಜನೆ ಎಂಬುವುದು ಘರ್ಷಣೆಗಳ ನಿರ್ಣಯವಾಗಿದ್ದು ವ್ಯಕ್ತಿ ಹೊಸ ಪರಿಸರಕ್ಕೆ ಹೊಂದಿಕೊಳ್ಳುವುದನ್ನು ತಿಳಿಸುತ್ತದೆ

ಸರಿ ☐ ತಪ್ಪು ☐

- **ಸರಿ ಉತ್ತರವನ್ನು ಗುರುತು ಮಾಡಿ.**

3. ಸಮೀಕರಣವು ಒಂದು ................. ಪ್ರಕ್ರಿಯೆಯಾಗಿದೆ.

ಅ. ಸಾಮಾಜಿಕ

ಆ. ಐತಿಹಾಸಿಕ

ಇ. ರಾಜಕೀಯ

ಈ. ಆರ್ಥಿಕ

## 3.7 : ಸಾರಾಂಶ

ಸಾಮಾಜಿಕ ಒಡನಾಟದ ಬಗೆಯಾದ ಸಾಮಾಜಿಕ ಪ್ರಕ್ರಿಯೆಯು ಒಂದು ಸ್ಥಿತಿಯ ಹಂತದಿಂದ ಮತ್ತೊಂದು ಹಂತಕ್ಕೆ ಬದಲಾವಣೆಯಾಗಲು ಕಾರಣವಾಗುವ ಘಟನೆಗಳ ಮತ್ತು ಚಟುವಟಿಕೆಗಳ ಸರಣಿಯಾಗಿದೆ. ಸಾಮಾನ್ಯ ಉದ್ದೇಶದ ಈಡೇರಿಕೆಗಾಗಿ ವ್ಯಕ್ತಿಗಳು ಒಟ್ಟಾಗಿ ಸೇರಿ ಕೆಲಸ ಮಾಡುವುದು ಸಹಕಾರ. ಎಲ್ಲರಿಗೂ ನಿಲುಕದ ಗುರಿಯನ್ನು ಸಾಧಿಸಲು ಇಬ್ಬರು ಅಥವಾ ಅನೇಕ ವ್ಯಕ್ತಿಗಳು ಪ್ರಯತ್ನಿಸಿದರೆ ಅದು ಸ್ಪರ್ಧೆಯಾಗುತ್ತದೆ. ಸಹಕಾರ ತತ್ವಕ್ಕೆ ವಿರುದ್ದವಾಗಿರುವ ಘರ್ಷಣೆಯು ಉದ್ದೇಶಪೂರ್ವಕ ಪ್ರತಿಭಟನೆಯಾಗಿದೆ. ಘರ್ಷಣೆಗಳ ನಿವಾರಣೆಯು ಸಂಯೋಜನೆಯಾಗಿದೆ. ಭಿನ್ನ ಗುಂಪುಗಳ ನಡುವಿನ ಸಂಪರ್ಕದಿಂದಾಗಿ ಜನರು ಪರಸ್ಪರ ಪ್ರಭಾವಿತರಾಗಿ ಬೇರೊಂದು ಸಂಸ್ಕೃತಿಯ ಲಕ್ಷಣಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ತಮ್ಮಲ್ಲಿರುವ ಘರ್ಷಣೆಯ ಭಾವನೆಗಳನ್ನು ಕಡಿಮೆ ಮಾಡಿಕೊಂಡು ಸಹಿಷ್ಣುತಾ ದೃಷ್ಟಿಯನ್ನು ಬೆಳಸಿಕೊಳ್ಳುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಕ್ರಿಯೆ ಸಮೀಕರಣವಾಗಿದೆ.

ಈ ರೀತಿ ಹಲವಾರು ಪ್ರಕ್ರಿಯೆಗಳು ಒಂದಲ್ಲಾ ಒಂದು ರೀತಿಯಲ್ಲಿ ವ್ಯಕ್ತಿಗಳು ಪರಸ್ಪರ ಕಲಿತು, ವರ್ತಿಸಿ ಸಂಬಂಧವನ್ನು ಕಲ್ಪಿಸಿಕೊಂಡು ಜೀವಿಸಲು ಸಹಾಯವಾಗಿವೆ.

## 3.8 ಪ್ರಮುಖ ಪದಗಳು

- ಒಡನಾಟ ಅಥವಾ ಅಂತಃಕ್ರಿಯೆ : ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳ ನಡುವಿನ ಯಾವುದೇ ಬಗೆಯ ಪಾರಸ್ಪರಿಕ ಸಂಪರ್ಕವೆ ಒಡನಾಟ ಅಥವಾ ಅಂತಃಕ್ರಿಯೆ.

- ಪ್ರಕ್ರಿಯೆ : ಒಂದು ಸ್ಥಿತಿಯ ಹಂತದಿಂದ ಮತ್ತೊಂದು ಹಂತಕ್ಕೆ ಬದಲಾವಣೆಯಾಗಲು ಕಾರಣವಾಗುವ ಘಟನೆಗಳ ಮತ್ತು ಚಟುವಟಿಕೆಗಳ ಸರಣಿಗೆ ಪ್ರಕ್ರಿಯೆ ಎಂಬ ಪದವನ್ನು ಬಳಸಲಾಗುತ್ತದೆ.

- ಸಹಕಾರ : ಇಬ್ಬರು ವ್ಯಕ್ತಿಗಳು ಅಥವಾ ಸಮೂಹಗಳು ಒಂದು ಸಾಮಾನ್ಯ ಉದ್ದೇಶಕ್ಕಾಗಿ ಒಟ್ಟಾಗಿ ಸೇರಿ ಕೆಲಸ ಮಾಡುವ ಸಾಮಾಜಿಕ ಪ್ರಕ್ರಿಯೆ.

- ಸ್ಪರ್ಧೆ : ಸಾಮಾನ್ಯ ಗುರಿಯನ್ನು ಮುಟ್ಟಲು ಇಬ್ಬರು ಮತ್ತು ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳು ಅಥವಾ ಗುಂಪುಗಳು ನಡೆಸುವ ಹೋರಾಟದ ಒಂದು ಸಾಮಾಜಿಕ ಪ್ರಕ್ರಿಯೆ.

- ಘರ್ಷಣೆ : ವ್ಯಕ್ತಿಗಳ ಮತ್ತು ಗುಂಪುಗಳ ನಡುವಿನ ಕಲಹದ ಬಗೆ.

- ಸಂಯೋಜನೆ : ವ್ಯಕ್ತಿಯು ಹೊಸ ಜೀವನ ವಿಧಾನಕ್ಕೆ ಹೊಂದಿಕೊಳ್ಳುವ ಪ್ರಕ್ರಿಯೆ.

- ಸಮೀಕರಣ : ವ್ಯಕ್ತಿಗಳು ಮತ್ತು ಗುಂಪುಗಳು ಇನ್ನೊಂದು ಗುಂಪಿನ ಜೊತೆ ಸಂಪರ್ಕ ಬೆಳೆಸಿದಾಗ ಅವುಗಳ ಮನೋಪ್ರವೃತ್ತಿಗಳು ಮತ್ತು ಮೌಲ್ಯಗಳು, ನಡವಳಿಕೆ ಮತ್ತು ಚಿಂತನಾ ಮಾದರಿಗಳು ಒಟ್ಟಿನಲ್ಲಿ ಜೀವನ ವಿಧಾನವನ್ನು ಅಳವಡಿಸಿ ಕೊಳ್ಳುವ ಪ್ರಕ್ರಿಯೆ.

## 3.9 : ನಿಮ್ಮ ಪ್ರಗತಿ ಪರೀಕ್ಷೆ ಉತ್ತರಗಳು

**ನಿಮ್ಮ ಪ್ರಗತಿ ಪರೀಕ್ಷಿಸಿ - 1**

1. 3.2

2. ಸರಿ

3. ಪಾರ್ಕ್ ಮತ್ತು ಬರ್ಗೆಸ್

- **ನಿಮ್ಮ ಪ್ರಗತಿ ಪರೀಕ್ಷಿಸಿ - 2**

1. 3.6 ನೋಡಿ
2. ಸರಿ
3. ಸಾಮಾಜಿಕ

## 3.10 : ಘಟಕದ ಕೊನೆಯಲ್ಲಿ ಅಭ್ಯಾಸಗಳು ಮತ್ತು ಉತ್ತರಗಳು

1. ಸಹಕಾರದ ವಿವಿಧ ಬಗೆಗಳನ್ನು ವಿವರಿಸಿ.
2. ಸ್ಪರ್ಧೆಯು ಹೇಗೆ ಒಂದು ಸಾಮಾಜಿಕ ಪ್ರಕ್ರಿಯೆ ವಿವರಿಸಿ.
3. ಘರ್ಷಣೆ ಎಂದರೇನು ಮತ್ತು ಅದರ ಪ್ರಾಮುಖ್ಯವನ್ನು ಚರ್ಚಿಸಿ.
4. ಸಂಯೋಜನೆ ಪ್ರಕ್ರಿಯೆಯ ವಿವಿಧ ವಿಧಾನಗಳನ್ನು ವಿಶ್ಲೇಷಿಸಿ.
5. ಸಮೀಕರಣ ಪ್ರಕ್ರಿಯೆಗೆ ಕಾರಣವಾದ ಉತ್ತೇಜನದ ಅಂಶಗಳು ಹಾಗೂ ಅದಕ್ಕೆ ಅಡ್ಡಿಯನ್ನುಂಟುಮಾಡುವ ಅಂಶಗಳನ್ನು ತಿಳಿಸಿ.

- **ಉತ್ತರಗಳು ನೋಡಿ :**

1. 3.2.1
2. 3.3 ಮತ್ತು 3.3.1
3. 3.4, 3.4.1 ಮತ್ತು 3.4.2
4. 3.5.1
5. 3.6.2 ಮತ್ತು 3.6.3

## 3.11 : ಸಲಹಾ ಗ್ರಂಥಗಳು

**Gisbert. Pascual, Fundamentals of Sociology,** New Delhi : Orient Longmans Ltd., 1957.


**MacIver R.M. and Charles. H. page, Society : An introductory Analysis,** Delhi : Mac Millan, 1850.

**Sharma R.N. ,Principles of Sociology,** Bombay : Media promoters and Publishers, 1993.

**Verghese K.E., General Sociology,** New Delhi : MacMillan, 1992.

**Vidya Bhushan** and **Sachadeva D.R., An Introduction of Sociology,** Allahabad : Kitab Mahal, 1998.


*ಎಂ.ಎಚ್.ಕೃಷ್ಣಪ್ಪ , ಅಧ್ಯಾಪಕ (ಆಯ್ಕೆ ಶ್ರೇಣಿ), ಸಮಾಜ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು - 570 006*



INSTRUCTIONAL SYSTEM

# ಕರ್ನಾಟಕ ರಾಜ್ಯ - Karnataka State

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಹಾಗೂ ಅಧ್ಯಯನ ಕೇಂದ್ರಗಳು
## Regional and Study Centres of Karnataka State Open University




- ● ಅಧ್ಯಯನ ಕೇಂದ್ರಗಳು STUDY CENTRES
- 📖 ಉದ್ದೇಶಿತ ಪ್ರದೇಶಿಕ ಕೆಂದ್ರಗಳು PROPOSED REGIONAL CENTRES
- ★ ಪ್ರಾದೇಶಿಕ ಕೇಂದ್ರಗಳು
- ■ B.ED. STUDY CENTRES
- ▲ M.ED. STUDY CENTRES

(ನಮೂದಿಸಿರುವ ಅಂಕಿ ಜಿಲ್ಲೆಯಲ್ಲಿರುವ ಒಟ್ಟು ಅಧ್ಯಯನ ಕೇಂದ್ರಗಳ ಸಂಖ್ಯೆಯನ್ನು ಸೂಚಿಸುತ್ತದೆ.)

(The Number Indiate the total number of study Centres existing in that districts.)

ಆದೇಶ ಸಂಖ್ಯೆ : ಕರಾಮುವಿ/ಸಪಾವಿ/4-144/2002-03 ಚೈತ್ರ ಎಂಟರ್‌ಪ್ರೈಸಸ್ - 2500 ಪ್ರತಿಗಳು